# ಅಪರಂಜಿ



ತಿಳಿನಗೆಯ ಕಾರಂಜಿ


**ಸಂಪಾದಕ ಮಂಡಳಿ**
ಶ್ರೀ ಎಂ. ಶಿವಕುಮಾರ್
*ಸಂಪಾದಕರು*
ಶ್ರೀ ಬೇಲೂರು ರಾಮಮೂರ್ತಿ
*ಉಪ ಸಂಪಾದಕರು*
ಶ್ರೀ ಬಾಗೂರು ಚಂದ್ರು
ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

**ಟ್ರಸ್ಟಿಗಳು**
ಶ್ರೀ ಎಂ. ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಜಿ. ನಾಗೇಶ್
ಶ್ರೀ ವಿ.ಆರ್. ನಾಥ್
ಶ್ರೀ ಎ.ಆರ್. ರಾಜಗೋಪಾಲ್
ಶ್ರೀ ಕೆ. ರವೀಂದ್ರ

**ವಿಶೇಷ ಆಹ್ವಾನಿತರು**
ಶ್ರೀ ಆರ್. ಶೇಷಗಿರಿರಾವ್
ಶ್ರೀ ಆರ್.ಎಸ್. ಪ್ರಶಾಂತ್

**ಗೌರವ ಸಲಹೆಗಾರರು**
ಶ್ರೀ ಅ.ರಾ.ಸೇ.



**ಚಂದಾ ವಿವರ:**
ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತ್ತು ವರ್ಷದ ಚಂದಾ: ರೂ. 750/-
ಕೆಲಸದ ವೇಳೆ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ
ಮುದ್ರಣ: ರವಿ ಗ್ರಾಫಿಕ್ಸ್
ಅಕ್ಷರ ಜೋಡಣೆ:
ಒಮೇಗಾ ಲೇಸರ್‌ಟೆಕ್





**ಸಂಪುಟ 28**
**ಸಂಚಿಕೆ – 7**
**ಏಪ್ರಿಲ್ – 2011**


## *ಈ ಸಂಚಿಕೆಯಲ್ಲಿ.....*


| | | |
|---|---|---|
| ಅಪರಂಜಿ ಕಿಡಿ | ಪ್ರಕಾಶ್ | 2 |
| ನಮ್ಮ ನಿಮ್ಮಲ್ಲಿ | ಶಿವಕುಮಾರ್ | 3 |
| ರಿಟೈರ್ ಆಗ್ಹೋದ್ರಂತೇ.. | ಎನ್. ನಾಗರಾಜ್ | 6 |
| ಒಂದು ಪ್ರೇಮ ಪ್ರಕರಣ | ಕುಮುದಾ ಪುರುಷೋತ್ತಮ್ | 10 |
| ತುಂತುರು | ದಂನಆ | 14 |
| ಡಾಕ್ಟರ್ ಚಿಕ್ಕಪ್ಪ | ಭಾರ್ಗವಿ ನಾರಾಯಣ್ | 15 |
| ರಾಜೀವ್‌ಗಾಂಧಿ.... | ಎಸ್. ಶ್ರೀನಿವಾಸನ್ | 18 |
| ಸುಳ್ಳು ನಮ್ಮಲ್ಲಿಲ್ಲವಯ್ಯಾ | ಜಯಪ್ರಕಾಶ ಅಬ್ಬಿಗೇರಿ | 20 |
| ಚಿಕ್ಕ ಚಿಕ್ಕ ಕಥೆಗಳು | ಸುಕೇಶವ | 24 |
| ಹುರುಳಿಕಟ್ಟು | ಎಚ್. ಗೋಪಾಲಕೃಷ್ಣ | 26 |
| ಕಾಮನಬಿಲ್ಲಿನ.... | ವಾಣೀ ಸುರೇಶ್ | 28 |
| ಅದು ಮುಂಗುಸಿಯಲ್ಲ.. | ನಾಗೇಶ ಹೆಗಡೆ | 33 |
| ಬ್ರಾಮ್ರ ಬಾಳೆ ಸಾಬರ.... | ಗುರು | 36 |



ಪ್ರಕಾಶಕರು: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು – 560 003. email: aparanji@hotmail.com



*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು – 560 068. ದೂರವಾಣಿ: 080-26688488. email: brmurthy@dataone.in

# ಅಪರಂಜಿ ಕಿಡಿ

● ಪ್ರಕಾಶ್



ಸೋನಿಯಾ ಪಟ್ಟಿಗೆ ಮಣಿದ ಕರುಣಾನಿಧಿ – ಸುದ್ದಿ

● **'ಮಹಿಳಾ ದಿನ'ದ ಸುದ್ದಿ ಅಂತ ಅಪರಂಜಿ ನಕ್ಕಳಂತೆ !!**

★★★

ಕ್ಷುಲ್ಲಕ ಕಾರಣಕ್ಕಾಗಿ ಮದುವೆ ರದ್ದು – ಪತ್ರಿಕೆ

● **ವಧು ಅದೃಷ್ಟ ಅಷ್ಟೆ!!**

★★★

ವಿಶ್ವಕಪ್ ಕ್ರಿಕೆಟ್ ವೇಳೆ ದಾಳಿಗೆ ಉಗ್ರರ ಸಂಚು – ಶೀರ್ಷಿಕೆ

● **It's Not Cricket !!**

★★★

ಇನ್‌ಫೋಸಿಸ್ ಆವರಣದಲ್ಲಿ ಚಿರತೆ – ಸುದ್ದಿ

● **ಕನ್ನಡ ಪ್ರೇಮಿ ಚಿರತೆ ಇರಬೇಕು !!**

★★★

'ಡಿ.ಎಂ.ಕೆ. – ಕಾಂಗ್ರೆಸ್ ಒಪ್ಪಂದಕ್ಕೆ ಸಹಿ' – ಸುದ್ದಿ

● **'ಅಂದ'ವಲ್ಲದ ಒಪ್ಪಂದ ?!**

★★★

ಮಠಗಳಿಗೆ ಮತ್ತಷ್ಟು ಹಣ – ಪತ್ರಿಕೆ

● **ಪಾತ್ರೆ ಇಡಲು ಜಾಗ ಸಾಕೆ ??**

★★★

ಸಿ.ಎಂ.ಗೆ ವರಿಷ್ಠರ ಬುಲಾವ್ – ಪತ್ರಿಕೆ

● **ಇದಕ್ಕೇ ಒಂದು ಸ್ಪೆಷಲ್ ವಿಮಾನ ಇಡಬಾರದೇಕೆ ?!!**

★★★

## ನಮ್ಮ ನಿಮ್ಮಲ್ಲಿ

ಇಪ್ಪತ್ತೈದು ವರ್ಷಗಳಕಾಲ ಸತತವಾಗಿ ಮೂಡಿಬಂದ ಕೊರವಂಜಿ ಮಾಸಪತ್ರಿಕೆಯ ಎಲ್ಲ ಮುನ್ನೂರು ಸಂಚಿಕೆಗಳನ್ನೂ ಒಂದು ಡಿವಿಡಿಯಲ್ಲಿ ಅಳವಡಿಸಿ ಆಸಕ್ತರಿಗೆ ನೀಡುವ ಯೋಜನೆಯ ಬಗ್ಗೆ ಈ ಹಿಂದೆಯೇ ನಿಮಗೆ ತಿಳಿಸಿದ್ದೆ. ನೀವು ಈ ಕಾಲಂ ಓದುವ ಹೊತ್ತಿಗಾಗಲೇ ಈ ಬಿಡುಗಡೆ ಕಾರ್ಯಕ್ರಮ ನಡೆದುಹೋದ ಸಂಗತಿಯಾಗಿರುತ್ತದೆ. ಅಂತೆಯೇ ನಮ್ಮ ಅಪರಂಜಿ ಅಂತರ್ಜಾಲವನ್ನು ಆಕ್ರಮಿಸಿ ಅಂತರರಾಷ್ಟ್ರೀಯ ಓದುಗರನ್ನು ರಂಜಿಸತೊಡಗಿರುತ್ತಾಳೆ. (ಎಂಬ ಆಶೆ ನಮ್ಮದು) ಈ ಎಲ್ಲ ಸಿದ್ಧತೆಗಳಿಗಾಗಿ ನಮ್ಮ ಬಳಗದ ಹಲವರೊಂದಿಗೆ ನಾನು ಮೈಸೂರಿಗೆ ಹೋಗಿದ್ದಾಗ ಅಲ್ಲಿ ಭಾರತೀಯ ವಿದ್ಯಾಭನದ ಅಧ್ಯಕ್ಷರೂ ನನ್ನ ಬಹುಕಾಲದ ಮಿತ್ರರೂ ಆದ ರಾಮಾನುಜ ಅವರನ್ನು ಭೇಟಿಮಾಡಬೇಕಾಗಿ ಬಂತು. ರಾಮಾನುಜನನ್ನು ನೋಡಬೇಕಾದಾಗಲೆಲ್ಲಾ ಹಳೆಯ ಮಿತ್ರನನ್ನು ನೋಡುವ ಸಂಭ್ರಮ ಉತ್ಸಾಹಗಳ ನಡುವೆ ಒಂದು ಆತಂಕದ ಎಳೆಯೂ ಇರುತ್ತದೆ ಎಂಬ ಮಾತನ್ನು ಒಪ್ಪಿಕೊಂಡು ಬಿಡುತ್ತೇನೆ. ಅರೆ, ಆತಂಕ ಯಾಕೆ ಅಂತ ನೀವು ಕೇಳಬಹುದು. ಅವನನ್ನ ನೋಡಿದಾಗಲೆಲ್ಲಾ ನನ್ನನ್ನ ಯಾವುದಾದರೊಂದು ಅನಿರೀಕ್ಷಿತ ಕಾರ್ಯಕ್ರಮಕ್ಕೆ ಒಪ್ಪಿಸಿಬಿಡುತ್ತಾನೆ. ಈ ಬಾರಿಯು ನನ್ನ ಹೆದರಿಕೆ ಸುಳ್ಳಾಗಲಿಲ್ಲ. ಮಡಿಕೇರಿಯ ಬಳಿ ಬರುವ ಘರ್‌ವಾಲೆ ಎಂಬಲ್ಲಿ ನಡೆಯುವ ಒಂದು ವರ್ಣಚಿತ್ರರಚನಾ ಕಲಾವಿದರ ಮೂರು ದಿನಗಳ ಶಿಬಿರದಲ್ಲಿ ಒಂದು ಸಂಜೆ ನಮ್ಮ ಅಪರಂಜಿ ಬಳಗದ ಸದಸ್ಯರಿಂದ ಹಾಸ್ಯ ಸಂಜೆ ಕಾರ್ಯಕ್ರಮವೊಂದನ್ನು ನಡೆಸಿಕೊಡಲು ಒಪ್ಪಿಕೊಂಡು ಮೈಸೂರಿನಿಂದ ಹಿಂದಕ್ಕೆ ಬಂದಿದ್ದಾಯಿತು. ಸಾಮಾನ್ಯವಾಗಿ ಇಂತಹ ಜವಾಬ್ದಾರಿಯನ್ನು ನಿರ್ವಹಿಸಲು ನಾನು ನಮ್ಮ ಉಪಸಂಪಾದಕರನ್ನು ಮತ್ತಿಬ್ಬರು ಗೆಳೆಯರನ್ನು ಕರೆದುಕೊಂಡು ಹೋಗುವುದು ವಾಡಿಕೆ. ಈ ಬಾರಿ ಬೇಲೂರರು ಮನೆಯಲ್ಲಿ ಯಾವುದೋ ಶುಭಕಾರ್ಯದ ನಿಮಿತ್ತ ರಜೆ ಹಾಕಿದರು. ನನಗೂ ಸಹಾ ಅದೇ ಸಮಯದಲ್ಲೇ ಬೆಂಗಳೂರಿನಲ್ಲಿ ನಡೆಯುತ್ತಿದ್ದ ಶಿಬಿರವೊಂದಕ್ಕೆ ಶಿಬಿರಾರ್ಥಿಯಾಗಿ ಹೋಗುವ ಕಮಿಟ್‌ಮೆಂಟ್ ಇತ್ತು. ಹಾಗಾಗಿ ನಮ್ಮ ಬಳಗದ ಗೋಪಾಲಕೃಷ್ಣ ಗೆಳೆಯರಾದ ಅಶ್ವಥ್, ರಾಜಗೋಪಾಲಾಚಾರಿ, ಮಿಮಿಕ್ರಿ ಗೋಪಿ ಇವರುಗಳೊಂದಿಗೆ ಮಡಿಕೇರಿಗೆ ಪ್ರಯಾಣ ಬೆಳೆಸಿದರು.

ಇಗೋ ಇಲ್ಲಿ ನೋಡಿ ಗೋಪಾಲ್ ಕಳಿಸಿರುವ ವರದಿ.....

‘‘ಘರವಾಲೆ ಪ್ರತಿಷ್ಠಾನ ಮೂರು ದಿವಸಗಳ ಒಂದು ಕಾರ್ಯಾಗಾರವನ್ನು ಕೊಡಗಿನ ಸೋಮವಾರಪೇಟೆಯ ಬಳಿಯ ಒಂದು ಶಾಂತ ಪರಿಸರದಲ್ಲಿ ಏರ್ಪಡಿಸಿತ್ತು. ಮಡಿಕೇರಿಯ ಭಾರತೀಯ ವಿದ್ಯಾಭವನದ ಗೆಸ್ಟ್ ಹೌಸ್ ತಲುಪಿ, ಅಲ್ಲಿಂದ ನಿಮ್ಮನ್ನು ಕಾರ್ಯಾಗಾರದ ಸ್ಥಳಕ್ಕೆ ಕರೆದೊಯ್ಯುತ್ತಾರೆ ಎಂದು ಅಪರಂಜಿ ಸಂಪಾದಕರು ಕಾರ್ಯಕ್ರಮದ ವಿವರವನ್ನು ತಿಳಿಸಿದ್ದರು. ಕಾರ್ಯಾಗಾರದಲ್ಲಿ ಒಂದು ಹಾಸ್ಯೋತ್ಸವವನ್ನು ಅಂದರೆ ಹಾಸ್ಯ ಕಾರ್ಯಕ್ರಮವನ್ನು ನೀಡಲು ತಂಡ (ಗೋಪಾಲಕೃಷ್ಣ ಅಶ್ವಥ್, ರಾಜಗೋಪಾಲಾಚಾರಿ

ಮತ್ತು ಮಿಮಿಕ್ರಿ ಗೋಪಿ) ಹೋಗಿದ್ದು. ಬೆಳಿಗ್ಗೆ ಬೆಂಗಳೂರು ಬಿಟ್ಟು 285 ಕಿಲೋಮೀಟರು ದೂರದ ಮಡಿಕೇರಿ ಸೇರಿದಾಗ ಸಂಜೆ ಮೂರೂಮುಕ್ಕಾಲಾಗಿತ್ತು. ಅಲ್ಲಿ ಭವನದ ಗೆಸ್ಟ್ ಹೌಸ್‌ನಲ್ಲಿ ಮುಖ ಹನಿಸಿಕೊಂಡು ತಂಡ ಮೂವತ್ತೈದು ಕಿ.ಮೀ. ದೂರದ ಸೋಮವಾರಪೇಟೆ ಮೂಲಕ ಅಲ್ಲಿಂದ ಮೂರೂವರೆ ಕಿ.ಮೀ.ನ ದೂರದ ಕಾರ್ಯಕ್ರಮದ ತಾಣ ತಲುಪಿದಾಗ ಐದೂಮುಕ್ಕಾಲು. ಕಿರಿದಾದ ದಾರಿ, ವೇಗವಾಗಿ ಓಡಿದ ನಾವು ಕೂತ ವಾಹನ, ಅಕ್ಕ ಪಕ್ಕದ ಪ್ರಕೃತಿ ಸೌಂದರ್ಯ ಇವು ನಮ್ಮನ್ನು ಬೇರೆ ಲೋಕಕ್ಕೆ ಕರೆದೊಯ್ದಿತ್ತು. ಕಾರ್ಯಕ್ರಮಗಳ ಉದ್ಘಾಟನೆ ಅಂದೇ ಬೆಳಿಗ್ಗೆ ನಡೆದಿದ್ದು ಸಂಜೆ ನಮ್ಮ ಕಾರ್ಯಕ್ರಮ ಮಾತ್ರ ಇದ್ದುದು.

ಕಾರ್ಯಕ್ರಮಕ್ಕೆ ತಡವಾಯಿತೇನೋ ಎನ್ನುವ ನಮ್ಮ ಆತಂಕ ಕಡಿಮೆಯಾಗಿದ್ದು ಅಲ್ಲಿ ನಮ್ಮನ್ನೇ ಎದುರು ನೋಡುತ್ತಾ ಇದ್ದ ಶ್ರೀ ರಾಮಾನುಜ ಮತ್ತು ಅವರ ಸ್ನೇಹಿತರನ್ನು ನೋಡಿದಾಗ. ತಮ್ಮ ಎಂದಿನ ಉತ್ಸಾಹದಲ್ಲಿಯೇ ಶ್ರೀ ರಾಮಾನುಜ ಅವರು ಸ್ಥಳದ ಪರಿಚಯ ಮಾಡಿಕೊಟ್ಟರು. ದಾನಿಯೊಬ್ಬರು ನೀಡಿದ ಮೂವತ್ತೆಂಟು ಎಕರೆ ಪ್ರದೇಶದಲ್ಲಿ ಈ ಕಾರ್ಯಾಗಾರಯೋಜಿತವಾಗಿತ್ತು. ವಿಶಾಲವಾದ ಸ್ಥಳದಲ್ಲಿ ಬಾಳೆ, ತೆಂಗು, ಸಪೋಟ ಗಿಡಗಳೇ ಅಲ್ಲದೇ ಬಲು ಅಪರೂಪವಾದ ಅಗಸೆ ಗಿಡಗಳನ್ನೂ ಬೆಳೆಸಲು ಆಗಲೇ ಯೋಜನೆಗಳನ್ನು ಹಮ್ಮಿಕೊಂಡಿದ್ದು ಅಗಸೆ ಗಿಡಗಳು ಹೂಬಿಟ್ಟಿದ್ದವು. ಬೆಂಗಳೂರಿನಲ್ಲಿ ದ್ವಾದಶಿಯಂದು ಅಗಸೆ ಸೊಪ್ಪಿ ಗಾಗಿ ಮಲ್ಲೇಶ್ವರದ ಮಾರುಕಟ್ಟೆಯನ್ನು ಶೋಧಿಸುವುದನ್ನು ನೆನೆಸಿಕೊಂಡೆ. ಇನ್ನು ಮೇಲೆ ಬೇಕಾದರೆ ನಾವೇ ಅಗಸೆ ಸೊಪ್ಪನ್ನ ಬೇಕಾದವರಿಗೆ ಕಳಿಸಬಹುದು ಎಂದರು ಶ್ರೀ ರಾಮಾನುಜ! ಸುತ್ತಲೂ ಬೆಟ್ಟ, ಗುಡ್ಡದ ನಡುವೆ ಬೆಳೆ ಬಾಳುವ ಹಚ್ಚ ಹಸುರಿನ ಹಲವಾರು ದೇಶೀಯ ಹಾಗೂ ವಿದೇಶದ ಸಸಿಗಳು, ಆಹ್ಲಾದವೀಯುವ ವಾತಾವರಣ ಮತ್ತು ಪಕ್ಕದಲ್ಲಿಯೇ ಜುಳು ಜುಳು ಹರಿಯುವ ಕಾವೇರಿ ನದಿ – ಸ್ವರ್ಗಕ್ಕೆ ಮೂರೇ ಗೇಣು ಅನ್ನುತ್ತಾರಲ್ಲಾ ಅಂತಹ ಪರಿಸರ. ಅದರ ಜತೆಗೆ ಒಂದು ಶಿವನ ಬೃಹತ್ ಮೂರ್ತಿ, ಅದರ ಎದುರಿನಲ್ಲಿ ಕಾವೇರಿ ತಾಯಿ ಕೊಡ ಹಿಡಿದು ನೀರು ಹರಿಸುತ್ತಿರುವ ಒಂದು ಪ್ರತಿಮೆ – ಸೂರ್ಯೋದಯವಾದಾಗ ಸೂರ್ಯನ ಬೆಳಗಿನ ಕಿರಣಗಳು ಪ್ರತಿಮೆಯ ಮೇಲೆ ಬೀಳುವಂತೆ ಪ್ರತಿಮೆಯನ್ನು ಇರಿಸಲಾಗಿದೆ. ಯಾವಾಗಲೂ ವಿದ್ಯುತ್ ಸಂಪರ್ಕವಿರುವಂತೆ ಹೊಸದಾಗಿ ದೂರದಿಂದ ಹರಿಸಿರುವ ವಿದ್ಯುತ್ ಲೈನುಗಳು. ಇಲ್ಲಿಗೆ ವಿದ್ಯುತ್ ಹರಿಸಿದ ಮೇಲೆ ಸುತ್ತಮುತ್ತಲಿನ ಹಳ್ಳಿಯವರಿಗೆ ಕರೆಂಟಿನ ಪ್ರಾಬ್ಲಮ್ಮೇ ಇಲ್ಲ. ಕರೆಂಟು ತರೋಕ್ಕೆ ಎಷ್ಟುಶ್ರಮವಾಯಿತು ಗೊತ್ತೇ? – ರಾಮಾನುಜ ಅವರು ಮ್ಯಾನೇಜ್‌ಮೆಂಟ್ ಕೋರ್ಸಿಗೆ ತರಬೇತಿ ನೀಡುವ ಸಕಲ ಸೌಲಭ್ಯಗಳನ್ನೂ ಮುಂದಿನ ಎರಡು ಮೂರು ವರ್ಷದಲ್ಲಿ ಇಲ್ಲಿ ಒದಗಿಸಲಾಗುತ್ತದೆ, ಆಗಲೇ ಮೂರುವರ್ಷದಿಂದ ಇಲ್ಲಿ ಈ ಕಾರ್ಯಕ್ರಮ ನಡೀತಿದೆ ಆದರೆ ಅದಕ್ಕೆ ಪ್ರಚಾರಕೊಟ್ಟಿಲ್ಲ ಎಂದೂ ಶ್ರೀ ರಾಮಾನುಜ ತಿಳಿಸಿದರು. ಅಲ್ಲೇ ಕಣ್ಣಿಗೆ ಕಾಣುವ ಹಾಗೆ ನಾವು ಬರೀ ಸಿನಿಮಾಗಳಲ್ಲಿ ನೋಡಿರುವ ಸೈನಿಕರ ತರಬೇತಿ ನೀಡುವ ಹಲವಾರು ಉಪಕರಣಗಳು ಎದ್ದು ತೋರುತ್ತಿತ್ತು. ಅಲ್ಲೇ ಒಂದು ಪಾಳು

ಬಿದ್ದಿದ್ದ ಸರ್ಕಾರೀ ಶಾಲೆಯನ್ನು ಪ್ರತಿಷ್ಠಾನ ದತ್ತು ತೆಗೆದುಕೊಂಡು ನಡೆಸುತ್ತಿದೆ, ಸುತ್ತಮುತ್ತಲಿನ ಹದಿನೆಂಟು ಕಿ.ಮೀ. ದೂರದ ಹಳ್ಳಿಗಳಿಂದ ಮಕ್ಕಳನ್ನು ಶಾಲೆಗೆ ವಾಹನದಲ್ಲಿ ಕರೆತಂದು ಅವರಿಗೆ ಉಚಿತವಾಗಿ ವಿದ್ಯಾಭ್ಯಾಸ ನೀಡಲಾಗುತ್ತಿದೆ. ಸನಿಹದಲ್ಲಿಯೇ ಮ್ಯಾನೇಜ್‌ಮೆಂಟ್ ಕೋರ್ಸಿಗೆ ಬರುವವರಿಗಾಗಿ ಒಂದು ಹಾಸ್ಟೆಲ್ ಸಹ ತಲೆಎತ್ತುತ್ತಿದೆ. ವಿಸ್ತಾರವಾದ ಒಂದು ದೊಡ್ಡ ಸಭಾಂಗಣ ಮತ್ತು ಹಲವಾರು ತರಗತಿ ನಡೆಸಬಹುದಾದ ಕೋಣೆಗಳು ಗೆಸ್ಟ್ ಹೌಸ್ ಸಿದ್ಧಗೊಂಡಿವೆ. ಈ ಸಭಾಂಗಣದಲ್ಲಿಯೇ ಬೆಳಿಗ್ಗೆ ಕಾರ್ಯಕ್ರಮ ನಡೆದಿದ್ದು.

ವಿಷನ್ ಇರುವವರು ಇದ್ದರೆ ಏನೇನು ಮಾಡಬಹುದು ಎಂದು ಯೋಚನೆಗೆ ಹಚ್ಚುವ ಸಂಗತಿ ಇದು. ಬಿಸಿಬಿಸಿ ಬೋಂಡ ಮತ್ತು ಕಾಫಿಯ ನಂತರ ಮನಸ್ಸು ಹೀಗೆ ಪ್ರಸನ್ನ ಮತ್ತು ಪ್ರಫುಲ್ಲವಾದ ಮೇಲೆ ನಮ್ಮ ಹಾಸ್ಯ ಕಾರ್ಯಕ್ರಮ ಶುರುವಾಯಿತು. ಅಪರಂಜಿ ಕೊರವಂಜಿ ಟ್ರಸ್ಟ್ ಬಗ್ಗೆ ವಿವರಿಸಿ ಮೊದಲ ಹಾಸ್ಯೋತ್ಸವ ಮತ್ತು ವಿದ್ಯಾಭವನದ ನಂಟನ್ನು ಸ್ಮರಿಸಿಕೊಂಡು ಕೆಲವು ಟೇಕ್ ಆಫ್ ಜೋಕುಗಳನಂತರ ಸುರಿದದ್ದು ಬರೇ ನಗೆ ಮತ್ತು ನಗೆ. ಅಶ್ವಥ್, ರಾಜಗೋಪಾಲಾಚಾರಿ ಮೊದಲಿನಿಂದಲೂ ನಮ್ಮ ನಂಟಿದ್ದವರಾದರೆ ಮಿಮಿಕ್ರಿ ಗೋಪಿ ಈಗ ನಮ್ಮ ತೆಕ್ಕೆಗೆ ಬಂದವರು. ಎರಡು ಗಂಟೆಗಳ ಕಾಲ ಕೊಡಗಿನ ಈ ಭಾಗದಲ್ಲಿ ನಗೆಸರಸ್ವತಿ ಕುಣಿದು ಕುಪ್ಪಳಿಸಿದಳು. ಕೊನೆಯಲ್ಲಿ ಭಾಗ್ಯಾದ ಲಕ್ಷ್ಮಿ ಹಾಡು ಹುಚ್ಚೆಬ್ಬಿಸಿಬಿಟ್ಟಿತು. ಎಲೈಟ್ ಆಡಿಯೆನ್ಸ್ ಇದ್ದ ಸಭಿಕರು ನಮ್ಮ ಕಾರ್ಯಕ್ರಮಕ್ಕೆ ಒಳ್ಳೆಯ ಉತ್ತೇಜನ ನೀಡಿದರು ಮತ್ತು ನಮ್ಮ ಹಾಸ್ಯವನ್ನು ಮೆಚ್ಚಿದರು.

ಬೆಂಗಳೂರಿನ ವಿದ್ಯಾಭವನದಲ್ಲಿ ನಾವು ನಡೆಸಿದ ಮೊದಲ ಹಾಸ್ಯೋತ್ಸವ ನೆನಪಿಗೆ ತಂದಿತು. ಒಳ್ಳೆಯ ಹಾಸ್ಪಿಟಾಲಿಟಿ ಮತ್ತು ಇಡೀ ಸಭಿಕರ ಆತ್ಮೀಯತೆ ನಮ್ಮನ್ನು ಮುಗ್ಧರನ್ನಾಗಿಸಿತು. ರಾಜೋಪಚಾರದ ಊಟ ಮುಗಿಸಿ ಅಲ್ಲಿಂದ ಹೊರಟಾಗ ನಮಗೇನೋ ಕಳೆದುಕೊಂಡ ಅನುಭವ.''

ಒಟ್ಟಿನಲ್ಲಿ ಗೆಳೆಯ ರಾಮಾನುಜನಿಗೆ, ನಮಗೆ ಇಂತಹ ನಗಿಸುವ ಅವಕಾಶವನ್ನು ಒದಗಿಸಿದ ಭಾರತೀಯ ವಿದ್ಯಾಭವನದ ಎಲ್ಲರಿಗೆ, ನಮ್ಮೊಂದಿಗೆ ಸಂತಸಪಟ್ಟ ಎಲ್ಲ ವರ್ಣಚಿತ್ರ ಕಲಾವಿದರಿಗೆ ಅಪರಂಜಿಯ ತುಂಬುಹೃದಯದ ನಮನ.

**ಶಿವಕುಮಾರ್**

---

## ಬರಹಗಾರರಲ್ಲಿ ವಿನಂತಿ

ದಯಮಾಡಿ ನಿಮ್ಮ ಬರಹಗಳನ್ನು ನುಡಿ/ಬರಹ ತಂತ್ರಾಂಶ ಉಪಯೋಗಿಸಿ ಕಳಿಸಿಕೊಡಿ. ಹಸ್ತಪ್ರತಿಗಳಾದರೆ ತುಂಬಾ ತಡವಾಗುವ ಸಾಧ್ಯತೆ ಇರುತ್ತದೆ.

# ರಿಟೈರ್ ಆಗ್ಹೋದ್ರಂತೇ, ಆರಾಮಾನಾ?

**- ಎನ್. ನಾಗರಾಜ್**

**ಸು**ಮಾರು ನಲವತ್ತು ವರುಷಗಳ ಖಾಸಗಿ ವಲಯದ ಸರ್ವೀಸ್ ನಂತರ ನಿವೃತ್ತಿಯ ನಿರ್ಧಾರ ತೆಗೆದುಕೊಂಡಿದ್ದೆ. ಹೊರೆ ಹೊರೆ ಕೆಲಸ, ಸಾಕು ಸಾಕು ಎನ್ನುವಷ್ಟು ಒತ್ತಡಗಳು ಹಾಗೂ ಅನಿಯಮಿತ ಕೆಲಸದ ವೇಳೆ, ಈ ಹಿನ್ನೆಲೆಯಲ್ಲಿ ನಿವೃತ್ತಿಯ ಜೀವನವನ್ನು ಹೇಗೆ ನಿಭಾಯಿಸುವುದೊಂದೇ ದೊಡ್ಡ ಚಿಂತೆಯಾಗಿತ್ತು. ಈ ವಿಷಯ ನನ್ನಾಕೆಯೊಂದಿಗೆ ಪ್ರಸ್ತಾಪ ಮಾಡಿದಾಗ 'ಎಷ್ಟೊಂತ ಮೈ ದಂಡಿಸಿಕೊಳ್ಳುತ್ತೀರಾ' ರಿಟೈರ್ ಆಗಿ, ಚಿಂತೆ ಮಾಡಬೇಡಿ ನಾನು ಇದ್ದೀನಲ್ಲಾ(ಮೈ ಹ್ಞೂನ!) ಅಂದಳು. ಅವಳ ಅನುಕಂಪ ಹಾಗೂ ಉತ್ತೇಜನ ಖುಷಿ ತಂದಿತ್ತು. ಈ 'ಮೈಹ್ಞೂನ' ಹೇಳಿಕೆಯ ಗೂಢಾರ್ಥ ನನಗೆ ಕ್ರಮೇಣ ಅರಿವಾಗಲು ಶುರು ಆಯಿತು!

ವೇಳೆ ನಿಭಾಯಿಸಲು ನನ್ನದೇ ಆದ ಹೊಂಗನಸು ಇತ್ತು. ಬೆಳಗ್ಗೆ ನಿಧಾನವಾಗಿ ಏಳುವುದು, ವಾಕ್‌ಮನ್ ಧರಿಸಿ ನನಗೆ ಪ್ರಿಯವಾದ ಹಾಡುಗಳನ್ನು ಕೇಳುತ್ತಾ ವಾಯುವಿಹಾರ, ಬೇಕೆನಿಸಿದಾಗ ನನಗಿಷ್ಟವಾದ ಹಾಡುಗಳನ್ನು ಕೇಳುವುದು, ಪುಸ್ತಕಗಳನ್ನು ಓದುವುದು, ಮಧ್ಯಾಹ್ನ ಸಣ್ಣ ನಿದ್ದೆ, ಗೆಳೆಯರು, ಇಸ್ಪೀಟು, ದರ್ಶಿನಿಗಳ ದರ್ಶನ, ಗುಂಡು ಹೀಗೆಲ್ಲಾ. ಅದು ಕನಸಾಗಿಯೇ ಉಳಿದಿದ್ದು ಹೀಗೆ.

ಕೆಲಸದಿಂದ ನನ್ನ ಸಂಪೂರ್ಣ ನಿವೃತ್ತಿ ವಿಷಯ ಚರ್ಚೆಯಾಗುತ್ತಿದ್ದಾಗ ಮನೆಯ ಕೆಲಸಗಳಿಂದ ತನಗೆ ಮುಕ್ತಿಯಿಲ್ಲವಲ್ಲ ಎಂದು ನನ್ನವಳು ಬೇಜಾರು ವ್ಯಕ್ತಪಡಿಸಿದ್ದಳು. ಅವಳ ಮಾತು ಅಕ್ಷರಶಃ ಸರಿ ಎಂದು ನನಗೆ ಅನ್ನಿಸಿ ನಿವೃತ್ತಿಯ ನಂತರ ಅವಳ ಮನೆ ಕೆಲಸಗಳಲ್ಲಿ ಕೆಲವನ್ನು ನಾನು ನಿಭಾಯಿಸುವುದಾಗಿ ಭರವಸೆ ಕೊಟ್ಟಿದ್ದೆ. ಇದಕ್ಕೆ ಮೇಲಾಗಿ ನನ್ನ ಗುಂಡು ಕೋಟಾ ಏರಿಕೆಯ ಕೋರಿಕೆಗೆ ಅವಳ ಅಂಗೀಕಾರ ಪಡೆಯಲು ಇದೇ ಆಮಿಷ ಸಹಾಯ ಮಾಡಿತ್ತು. ಈಗ ಅದರ ಅನುಷ್ಠಾನದ ಸಮಯ ಬಂದಿತ್ತು.

ಮನೆ ಕೆಲಸಗಳ ಬಗ್ಗೆ ನನ್ನದು ಅಜ್ಞಾನದ ಪರಮಾವಧಿ. ಈ ಹಿನ್ನೆಲೆಯಲ್ಲಿ, ಕ್ರಿಯೆಗಳು ಅವಳ ನಿರ್ದೇಶನ, ಪಾರುಪತ್ಯ ಹಾಗೂ ಉಸ್ತುವಾರಿಯಲ್ಲಿ ಮೆಟ್ಟಲು ಮಟ್ಟಿಲಾಗಿ (!) ನಡೆಯಬೇಕಾಗಿತ್ತು.

ನಿವೃತ್ತಿಯಾದ ಮರುದಿನವೇ (ಇನ್ನೂ ಬೀಳ್ಕೊಡು ಸಮಾರಂಭದ ಹಾರ ಕೂಡ ಬಾಡಿರಲಿಲ್ಲ) ಶುರುವಾಯಿತು ನನ್ನ ''ಎರಡನೆಯ ಕೆಲಸ.''

ಬೆಳಗ್ಗೆ ಇನ್ನೂ ನಿದ್ರೆಯ ಮಂಪರಿನಲ್ಲಿರುವಾಗಲೇ ಹೊರಟಿತ್ತು ಮೊಟ್ಟಮೊದಲನೆಯ ಆದೇಶ ''ರೀ, ಕಾಫಿ ಡಿಕಾಕ್ಷನ್ ಹಾಕಿದ್ದೀನಿ, ಹಾಸಿಗೆ ಸರಿಮಾಡ್ಡಿಟ್ಟು, ಹಾಲು ತಂದ್ಬಿಡಿ, ತಾಜಾ

ಕಾಫಿ ಕುಡಿಯೋಣ.'' ಎರಡು ಶುಭ ಸುದ್ದಿಗಳ ನಡುವೆ ಸದ್ದಿಲ್ಲದೇ ಸುಳಿದಿತ್ತು ಎರಡು ಕೆಲಸಗಳು. ಕಿಲಾಡಿ ಮ್ಯಾನೇಜರ್.

ಕಾಫಿ ಲೋಟ ಕೆಳಗಿಡುತ್ತಿದ್ದ ಹಾಗೆ ಮುಂದಿನ ಕೆಲಸದ ಸರದಿ. ಮನೆ ಡಸ್ಟ್ ಮಾಡ್ಬಿಡಿ ಕಸ ಗುಡಿಸುವುದಕ್ಕೆ ಕೆಲಸದವಳು ಬಂದ್ಬಿಡ್ತಾಳೆ!

ರೀ 1 ಪಾವು ಅಕ್ಕಿ ಆರಿಸಿ ಕುಕ್ಕರ್‌ಗೆ ಹಾಕಿ ಮೂರು ಸಲ ನೀರಲ್ಲಿ ತೊಳೆದು ನೀರು ಬಸಿದಿಡಿ. ನಾನು ಅನ್ನ ಮಾಡುತ್ತೇನೆ!

ಮುಂದಿನದು ಕೊತ್ತುಂಬರಿ ಸೊಪ್ಪು ಬಿಡಿಸುವ ಕೆಲಸ. ಎರಡು ನಿಮಿಷಗಳಲ್ಲಿ ಮುಗಿಸಿದೆ. ಅಯ್ಯೋ ಇದೇನ್ರೀ ಅನ್ಯಾಯ, ಬರೀ ಕಡ್ಡಿ ಮುರಿದರೆ ಕೆಲಸ ಆಯ್ತೆ? ಒಣಗಿರೋ ಎಲೆ, ಮುದುರಿರೋ ಎಲೆ, ಮೊಟ್ಟೆ ಇರೋ ಎಲೆ ಎಲ್ಲವನ್ನೂ ಸೂಕ್ಷ್ಮವಾಗಿ ಗಮನಿಸಿ, ಬೇರೆ ಮಾಡಿ, ಎಸೆಯಬೇಕು ಆಯ್ತಾ?

ಹಸಿಮೆಣಸಿನಕಾಯಿ ಹೆಚ್ಚುವಾಗ ನನ್ನ ಕರ್ಮಕ್ಕೆ ಮೂಗಿನ ತುದಿಯಲ್ಲಿ ನವೆ ಆಯಿತು. ತಕ್ಷಣ ಉಜ್ಜಿಕೊಂಡೆ. ಒಂದೇ ಸಮಗೆ ಉರಿಯಲು ಶುರುವಾಯಿತು. ಇವಳು ಮೂಲೆಯಲಿ ನಿಂತು ಮನಸಾರೆ ನಕ್ಕಳು.

ಬೆಂಡೆಕಾಯಿ ಹೆಚ್ಚಲು ಹೇಳಿದಳು. ಸರಿ ಬೆಂಡೆಕಾಯಿಗಳನ್ನು ಜೋಡಿಸಲು ಶುರು ಮಾಡಿದೆ. ಅಯ್ಯೋ ಅಯ್ಯೋ, ಮೊದಲು ನೀವು ಕೈ ಚೆನ್ನಾಗಿ ತೊಳೆದುಕೊಳ್ಳಬೇಕು, ನಂತರ ಕಾಯಿಗಳನ್ನು ಚೆನ್ನಾಗಿ ತೊಳೆದು, ಒರೆಸಿ ಹೆಚ್ಚಬೇಕು. ಅಯ್ಯೋ ಹೆಚ್ಚಿ ಎಂದರೆ ಕೊಚ್ಚಿ ಹಾಕ್ತಿದೀರಲ್ಲಾ ಸಣ್ಣದಾಗಿ ಹೆಚ್ಚಿ ಅಂದಳು. ಆಗ ನನ್ನ ಬೆರಳು ಕುಯ್ಕೊಂಡೆ. ನಿಮ್ಮ ಬೆರಳೇನು ಲೇಡೀಸ್ ಫಿಂಗರಾ ಎಂದು ಚಟಾಗಿ ಹಾರಿಸಿದಳು. ರಕ್ತ ಜಾಸ್ತಿಯೇ ಸುರಿಯುತ್ತಿತ್ತು. ಎಂತ ಅನ್ಯಾಯ, ಈ ಕರ್ಮಕ್ಕೆ ರಕ್ತದಾನವಾದರೂ ಮಾಡಬಹುದಾಗಿತ್ತು ಎಂದೆ. ಸುಮ್ನಿರಿ ಸಾಕು, ನೀವೋ ನಿಮ್ಮ ರಕ್ತವೋ, ನಿಮ್ಮ ರಕ್ತ ವಾಹಿನಿಯಲ್ಲಿ ಜಾಸ್ತಿ ಆಲ್ಕೋಹಾಲೇ ಇರುತ್ತೇ. ಅದನ್ನು ಉಪಯೋಗಿಸಿದವರಿಗೆ ಒಂದು ವಾರ ಎಚ್ಚರ ಆಗೋಲ್ಲ! ಸ್ವಲ್ಪ ಇರಿ ತಕ್ಷಣಕ್ಕೆ ಏನಾದರೂ ಔಷಧಿ ಮಾಡುತ್ತೇನೆಂದು ಕೈಗೆ ಸಿಕ್ಕಿದ ಅರಿಶಿನ ಚೆನ್ನಾಗಿ ಮೆತ್ತಿದಳು. ಆಹಾ! ನನ್ನ ಬೆರಳು ಅರಿಶಿನದ ಗೌರಿ ತರಹ ಮೆರೆಯುತ್ತಿತ್ತು! ಇನ್ನು ಮುಂದೆ ತಕರಾರಿ ಹೆಚ್ಚುವಾಗ ಪಕ್ಕದಲ್ಲೇ First Aid Box ಇಟ್ಕೊಳಿ ಅಂತ ಮುನ್ನೆಚ್ಚರಿಕೆ ಕ್ರಮ ತಿಳಿಸಿಕೊಟ್ಟಳು.

ತೆಂಗಿನಕಾಯಿ ನಾರು ಚೆನ್ನಾಗಿ ತೆಗೆದು ನಲ್ಲಿನೀರಡಿಯಲ್ಲಿ ಒಂದು ನಿಮಿಷ ಹಿಡಿದು (ಪಾಪ, ಮರಣ ಪೂರ್ವ ಸ್ನಾನ) ಒಡೆದರೆ ಸಮನಾಗಿ ಒಡೆಯುತ್ತೆ. ನಂತರ ಜುಟ್ಟು ಮುರಿದು ಕವರಲ್ಲಿ ಹಾಕಿಡಿ. ಬಾಣಲಿ ಉಜ್ಜೋಕಾಗುತ್ತೆ. ಜುಟ್ಟು ತೆಗೆದ ತೆಂಗಿನಕಾಯಿ ತಮಾಷೆಯಾಗಿ ಕಾಣಿಸಿ ನಗುಬಂತು. ಆದರೆ ನನ್ನ ಜುಟ್ಟು ಅವಳ ಕೈಲಿರುವುದು ನೆನಪಿಗೆ ಬಂದಾಗ ನಗು ಮರೆಯಾಗಿತ್ತು. ಕಾಯಿ ತುರಿದ ಮೇಲೆ ಉದ್ಗಾರ ತೆಗೆದಳು. ಏನ್ರೀ ಹೀಗೆ ತುರಿದಿದೀರಾ ಕರಟದ ಪುಡಿ ಬೇರೆ ಮಾಡಿ ಎಂದಳು. ಅದೇನು iron filings ಏ ಮ್ಯಾಗ್ನೆಟ್ ಇಟ್ಕೊಂಡು ಬೇರೆ ಮಾಡುಕ್ಕೆ ಅಂದಿದ್ದಕ್ಕೆ ಅದು ನಿಮ್ಮ ಸಮಸ್ಯೆ ಎಂದು ಹೇಳಿ ನಾಪತ್ತೆಯಾದಳು.

ನಿಮ್ಮ ಶರ್ಟ್ ವಾಷಿಂಗ್ ಮಷಿನ್‌ಗೆ ಲೋಡ್ ಮಾಡೋಕ್ಕೆ ಮುಂಚೆ ಕಾಲರ್ ಜಾಗಕ್ಕೆ ಸೋಪು ಹಾಕಿ ಬ್ರಷ್ ಮಾಡಿ. ಹತ್ತಿರದ ಬ್ಯಾಂಕಿಗೋ, ಪೋಸ್ಟ್ ಆಫೀಸ್‌ಗೋ ಹೋಗಿ ಬಂದರೆ ಬೆವತು ಹೋಗ್ತೀರಿ. ಹಾಗೇ ಮೊಣಕೈ ಜಾಗ ಕೂಡ. ಬಾರ್ ಕೌಂಟರ್‌ಗಳ ಕಲೆಗಳೆಲ್ಲಾ ಅಲ್ಲೇ ಇರುತ್ತೇ! (ಕಲಾವಿದ?)

ವರ್ತನೆ ತರಕಾರಿಯವನು ವಕ್ಕರಿಸಿದ. ಆದೇಶದ ಮೇಲೆ ತರಕಾರಿ ತೆಗೆದುಕೊಂಡು ಬಂದೆ. ಇನ್ಸ್‌ಪೆಕ್ಷನ್ ಶುರು ಆಯಿತು. ಏನ್ರೀ ಅನ್ಯಾಯ ಬೆಂಡೇಕಾಯಿ ಎಷ್ಟೊಂದು ಬಲಿತಿದೆ. ಗೋಡೆಗೆ ಹೊಡೆದು ಹತ್ತಾರು ಕ್ಯಾಲೆಂಡರ್‌ಗಳು, ಫೋಟೋಗಳು ಹಾಕ್ಬೇಕಷ್ಟೇ. ಇನ್ನು ಟೊಮೆಟೋನೋ, ಮುಕ್ಕಾಲೆಲ್ಲಾ ಕೊಳೆತಿದೆ ಯಾವುದಾದರೂ ಪುಢಾರಿ ಭಾಷಣಕ್ಕೆ ಒಯ್ಯಬಹುದು. ಮುಲ್ಲಂಗೀನೆ ಇದು? ಲಂಗೂಲಗಾಮಿಲ್ಲದೇ ಬಲಿತಿದೆ!

ಆಹಾ ಹುರಳಿಕಾಯಿ ನಾರುಮಯ. ಕಟ್ಟಿದ ಹೂವು ಮಾತ್ರ ನಾರು ಸಮೇತ ಕೊಂಡ್ಕೋಬಹುದು ಎಂದು ಬೇಸಿಕ್ಸ್ ಹೇಳಿಕೊಟ್ಟಳು. ಮಾತು ಮುಂದುವರೆಸಿ ಇದ್ದೇಗಾಯ್ತು ಅಂತ ನನಗೆ ಗೊತ್ತು ರೀ. ತರಕಾರಿಯವನು ಕಿಲಾಡಿ. ಗಾಡಿಯಲ್ಲಿ ರೂಪ ತಾರಾ Pinup ಪುಟ ತೆರೆದಿಟ್ಟಿರುತ್ತಾನೆ. ನೀವು, ಅದೇ ಗಂಡಸರು, ಪದೇ ಪದೇ ಓರೆಗಣ್ಣಿನಿಂದ ಅದನ್ನು ನೋಡ್ತಿರುವಾಗ ಬಲಿತಿದ್ದು, ಕೊಳೆತಿದ್ದು ಎಲ್ಲಾ ಹಾಕಿ ಮೇಲೆ ಸ್ವಲ್ಪ ಹಸನಾಗಿರುವುದು ಮುಚ್ಚಿ ಅದನ್ನು ಕೊಟ್ಟಿರುತ್ತಾನೆ! ನನ್ನ ಬಗ್ಗೆ ಅವಳ ಅರಿವು ಅಗಾಧ. ಸುಮ್ಮನಿರುತ್ತೇನೆ. ಅಂದ ಹಾಗೆ ನಾವಿಬ್ಬರೂ ಪರಸ್ಪರ ಅರಿತಿರೋಕ್ಕಿಂತ ಅರೀತಿರೋದೇ ಜಾಸ್ತಿ!

ಪೇಪರ್ ಓದುತ್ತಿದ್ದೆ. ಪಂಪ್ ಹಾಕಿ ಪಂಪ್ ಹಾಕಿ ಎಂಬ ಅಶರೀರವಾಣಿ ಕೇಳಿಸಿತು. ನೀರು ಖಾಲಿಯಾಗಿ, ಮುಚ್ಚಿದ ಬಾತ್‌ರೂಂ ಹಿಂದಿನಿಂದ ಆದೇಶ ಹೊರಟ್ಟಿತ್ತು. ಆ ಕ್ಷಣದಿಂದ ಸಂಪ್ ಹಾಗೂ ಓವರ್‌ಹೆಡ್ ಟ್ಯಾಂಕ್‌ಗಳಲ್ಲಿ ಸಮರ್ಪಕವಾದ ನೀರಿನ ಮಟ್ಟದ ನಿಯಂತ್ರಣ ಹಾಗೂ ಅದರ ದೈನಂದಿನ ವರದಿ ಕೆಲಸ ನನ್ನದಾಗಿತ್ತು! ಹಾಗೆಯೇ ಗೀಜ಼ರ್ ಕಂಟ್ರೋಲ್ ಕೂಡಾ. ಲೈಟ್ ಬಿಲ್ ಬರ್ತಾ ಬರ್ತಾ ಹೆವಿ ಆಗ್ತಿದೆ ಎಂದು ಗೊಣಗಿ ಗೀಜರ್ 'ಆನ್' ಸಮಯವನ್ನು ಕರಾರುವಾಕ್ಕಾಗಿ ಪ್ರತಿದಿನ 30 ನಿಮಿಷಗಳಿಗೆ ಸೀಮಿತಗೊಳಿಸಬೇಕೆಂದು ಕಟ್ಟಾಜ್ಞೆ ಹೊರಡಿಸಿದಳು.

ಸಂಜೆ ಗೋಧೂಳಿ ಲಗ್ನದಲ್ಲಿ ಆಚೆ ಒಣಗಲಿಕ್ಕೆ ಹಾಕಿದ್ದ ಬಟ್ಟೆಗಳನ್ನು ಎಳೆದು ತಂದು, ವಿಂಗಡಿಸಿ (ಅವನದು, ಅವಳದು) ಮಡಿಸಿಡಬೇಕು. ಮೊದಲ ಬಾರಿ ಸೀರೆ ಎಳೆದಾಗ (ಒಣಗಲಿಕ್ಕೆ ಹಾಕಿದ್ದ) ಕಿಸಿವಿಸಿ ಆಗಿದ್ದಲ್ಲದೇ ದ್ರೌಪದಿ ಪ್ರಸಂಗವೂ ನೆನಪಿಗೆ ಬಂತು.

ಇತರೆ ಕೆಲಸಗಳು – ಬೆಳಗ್ಗೆ ಹಾಗೂ ರಾತ್ರಿ ಡೈನಿಂಗ್ ಟೇಬಲ್‌ಗೆ ಅಡುಗೆ ತಂದಿಡುವುದು, ಬಡಸಿಕೊಂಡು ಊಟವಾದ ಮೇಲೆ ಅಡುಗೆ ವಾಪಸ್ಸಿಟ್ಟು ಡೈನಿಂಗ್ ಟೇಬಲ್ ಶುದ್ಧಿ ಮಾಡುವುದು. ತ್ರಿಪಾತ್ರಗಳು–ಸಪ್ಲೈಯರ್, ಕನ್ಸೂಮರ್ ಹಾಗೂ ಕ್ಲೀನರ್!

ಟೆಲಿಫೋನ್ (ಇಂದ ಹಾಗೂ ಗೆ!) ಅಂಟೆಂಡ್ ಮಾಡುವುದು, ಕರೆಗಂಟೆ ಬಾರಿಸಿದರೆ ಬಾಗಿಲಿಗೆ ಓಡುವುದು, ಆನ್ಸರ್ ಮಾಡುವುದು (ಪಾಪ ರೀ, ಟೆಲಿಫೋನ್ ರಿಂಗ್ ಆದರೆ ಬಾಗಿಲಿಗೆ ಓಡುತ್ತೀರಿ, ಕರೆಗಂಟೆ ಬಾರಿಸಿದರೆ ಟೆಲಿಫೋನು ಎತ್ತುತ್ತೀರಿ ಎಂದು ರಿಕ್ಕೈನರಲಿ

ಕುಳಿತು Star Dustಲಿ ಗಾಳಿ ಬೀಸ್ಕೋತಾ ಹೊಟ್ಟೆ ಹುಣ್ಣಾಗುವಷ್ಟು ನಗುತ್ತಾಳೆ). Sales Personsಗಳನ್ನು ಸಾಗಿಹಾಕುವುದು, ಗಿಡಗಳಿಗೆ ನೀರು ಹಾಕುವುದು, ಮಾಲಿನ ಮ್ಯಾನೇಜ್ ಮಾಡುವುದು ವಗೈರೆ ವಗೈರೆ.

ಈ ಸುತ್ತು ಕೆಲಸಗಳ ಮಧ್ಯೆ ನನ್ನ ಹೊಂಗನಸು ಹೇಗೆ ನನಸಾಗಲು ಸಾಧ್ಯ?

ಗಾಯದ ಮೇಲೆ ಬರೆ ಅನ್ನುವ ಹಾಗೆ ಬಂಧು ಮಿತ್ರರು ಎದುರಾದಾಗ ಕೆಲವರು ಕೇಳುತ್ತಾರೆ ರಿಟೈರ್ ಆಗ್ಬೋದ್ರಂತೆ ಆರಾಮಾನಾ? ಹ್ಞೂ ತುಂಬಾನೇ ಆರಾಮ (ರಾಮ, ರಾಮ) ಎನ್ನುತ್ತೇನೆ. ನನ್ನ ವ್ಯಂಗ್ಯ ಅವರಿಗೆ ಹೇಗೆ ಗೊತ್ತಾಗಬೇಕು? ಮತ್ತೆ ಕೆಲವರು ಕೇಳುತ್ತಾರೆ ''ಹೊತ್ತು ಕಳೆಯುವುದು ಕಷ್ಟ ಅಲ್ಲವಾ?'' ನನ್ನ ಸುತ್ತು ಕೆಲಸಗಳು ನೆನಪಿಗೆ ಬಂದು 'ಕಷ್ಟ' ಎನ್ನುತ್ತೇನೆ. ಮತ್ತೆ ಕೆಲವರು, ಹೇಗೆ ಕಾಲ ಕಳೆಯುತ್ತೀರಾ? ಎಂದು ಕೇಳುತ್ತಾರೆ. ಹೀಗೇ, ಸ್ನೇಹಿತರು, ಟಿ.ವಿ., ಓದುವುದು ಎಂದು ಜಾರಿಕೆ ಉತ್ತರ ಕೊಡುತ್ತೇನೆ. ವಾಸ್ತವವಾಗಿ ನನ್ನ ಸುತ್ತು ಕೆಲಸಗಳ ನಿರ್ವಹಣೆಯಲ್ಲಿ ಹೊತ್ತು ಹೋಗುವುದೇ ಗೊತ್ತಾಗೋಲ್ಲ!

ಸಾಕು ಸಾಕಾಗಿ ಹೋಗಿದೆ ರೀ, ಮತ್ತೆ ಕೆಲಸಕ್ಕೆ ಸೇರುವ ನಿರ್ಧಾರ ಮಾಡಿದ್ದೇನೆ. ಅರ್ಜಿ ಬರೆಯುವುದಕ್ಕೆ ಬಿಡುವೇ ಆಗುತ್ತಿಲ್ಲ. ಅಯ್ಯೋ ಬರ್ತೀನಪ್ಪಾ, ರಿಂಗ್ ಆಗ್ತಿದೆ ಟೆಲಿಫೋನೋ?..... ಕರೆಗಂಟೆಯೋ? ✵

---

## ಕೊರವಂಜಿ ಸಮಗ್ರ ಸಂಚಿಕೆಗಳ ಸಿ.ಡಿ. ಹಾಗೂ ಅಪರಂಜಿಯ ಅಂತರ್ಜಾಲ ತಾಣ

ಮಾರ್ಚ್ ತಿಂಗಳ ಇಪ್ಪತ್ತೇಳರಂದು ಬೆಂಗಳೂರಿನ ಭಾರತೀಯ ವಿದ್ಯಾಭವನದಲ್ಲಿ ಕೊರವಂಜಿ ಪತ್ರಿಕೆಯ ಎಲ್ಲಾ ಸಂಚಿಕೆಗಳನ್ನೊಳಗೊಂಡಿರುವ ಸಿ.ಡಿ. ಬಿಡುಗಡೆಯಾಯಿತು. ಈ ಸಿ.ಡಿ.ಗಳನ್ನು ಖರೀದಿಸಲಿಚ್ಛಿಸುವವರು ಕೆಳಗಿನ ವಿಳಾಸಗಳನ್ನು ಸಂಪರ್ಕಿಸಬಹುದು.

1. ಬೇಲೂರು ರಾಮಮೂರ್ತಿ, ನಂ.96, ಸುಕೇಶವ, 2ನೇ ಅಡ್ಡ ರಸ್ತೆ, 20ನೇ ಮುಖ್ಯ ರಸ್ತೆ, ಮೊದಲನೇ ಫೇಸ್, ಜಿ.ಟಿ.ಎಂ. ಲೇಔಟ್, ಬೆಂಗಳೂರು - 560 068. ದೂರವಾಣಿ - 080-26688488

2. ಎಂ. ಶಿವಕುಮಾರ್, ನಂ.36, 6ನೇ ಮುಖ್ಯ ರಸ್ತೆ, ಮಲ್ಲೇಶ್ವರಮ್, ಬೆಂಗಳೂರು - 560 003. ಮೊಬೈಲ್ - 98458 25061

ಇಂದಿನಿಂದ ಅಪರಂಜಿ ಇಂಟರ್ನೆಟ್ಟಿನಲ್ಲಿಯೂ ಲಭ್ಯ. ನಮ್ಮ ವೆಬ್‌ಸೈಟ್‌ನ ವಿಳಾಸ: aparanjimag.in

# ಒಂದು ಪ್ರೇಮ ಪ್ರಕರಣ

## - ಕುಮುದಾ ಪುರುಷೋತ್ತಮ್

''**ಜೀ**ವನದಲ್ಲಿ ಏನು ಕಳೆದು ಕೊಳ್ತಾ ಇದ್ದೀನಿ ಅನ್ನೋ ಪರಿಜ್ಞಾನವೇ ನಿಂಗಿಲ್ಲ''

ಇದು ಎಪ್ಪತ್ತು ದಾಟಿದ್ದ ನನ್ನಜ್ಜಿಗೆ ಹತ್ತೂ ದಾಟದ ನಾನು ನುಡಿದ ನುಡಿ ಮುತ್ತುಗಳು. ವಯಸ್ಸಿಗೆ ಮೀರಿದ ತಲೆಹರಟೆ ಎನ್ನುವುದು ಮನೆಯವರೆಲ್ಲರ ಅಭಿಪ್ರಾಯ. ಪುಷ್ಠಿ ನೀಡುವಂತೆ ನಾನೂ ಇಂತಹ ನುಡಿಮುತ್ತುಗಳನ್ನು ಉದುರಿಸುತ್ತಿದ್ದೆ. ಅಂದು ಏಕಾದಶಿ. ಆಚಾರವಂತರಾದ ನನ್ನಜ್ಜಿ ಕೇವಲ ಹಾಲುಹಣ್ಣಿನ ಆಹಾರ ಸೇವಿಸುತ್ತಿದ್ದಾಗ ನೋಡಲಾರದೆ ಹೇಳಿಬಿಟ್ಟಿದ್ದೆ. ಅಜ್ಜಿಗೆ ನನ್ನ ಕನಿಕರ ಬೇಕಿರಲಿಲ್ಲ.

''ಪರಿಜ್ಞಾನವೇ ಇಲ್ಲದಿದ್ದ ಮೇಲೆ ಕಳ್ಕೊಳ್ಳೋದೇನ್ಬಂತು ಬಿಡು.'' ಬಿಡಲು ನಾನು ಸಿದ್ಧವಿರಲಿಲ್ಲ.

''ನಿಂಗೆ ಗೊತ್ತಿಲ್ಲ. ನೀನು ಒಂದು ದಿನ ಅದರ ರುಚಿನೋಡು. ಆಮೇಲೆ ಈ ಏಕಾದಶಿ ದ್ವಾದಶಿ ಎಲ್ಲಾ ಬಿಚ್ಚಿಟ್ಟು ದಿನಾ ತಂದ್ಕೊಡು ಅಂತೀಯ.''

ಅನುಮಾನ ಬರಲು ಇಷ್ಟು ಸಾಕಲ್ಲ. ಏನನ್ನೇ ತಂದ್ಕೊಡೋದು ಎನ್ನುತ್ತಾ ಹತ್ತಿರ ಕರೆದು ಬಲಗೈ ಮೂಸಿದರು.

''ಥೂ ದರಿದ್ರ ಈರುಳ್ಳಿ. ತಿರ್ಗಾ ನಿಮ್ಮಪ್ಪ ಹೋಟಲಿಗೆ ಕರೆದುಕೊಂಡು ಹೋದ್ನೇ. ನೀನು ಯಥಾ ಪ್ರಕಾರ ಮಸಾಲೆ ದೋಸೆ ಮುಕ್ಕಿದೆ ತಾನೇ? ಮಸಾಲೆ ದೋಸೆ ಅಂದ್ರೆ ಅದೇನು ಪ್ರಾಣ ಬಿಡ್ತೀಯೋ. ನಿಮ್ಮಪ್ಪ ತಾನೂ ಕೆಡೋದಲ್ದೆ ನಿನ್ನನ್ನೂ ಕೆಡಸ್ತಾನೆ.'' ಮಗನನ್ನು ಕರೆದು ತರಾಟೆಗೆ ತೆಗೆದುಕೊಂಡರು.

ಇದರ ಪೂರ್ವೋತ್ತರ ಇಲ್ಲಿದೆ. ಅದು ಶಾಲಾವರ್ಷಾರಂಭ. ಹೊಸ ಪುಸ್ತಕ ಕೊಡಿಸಲು ನನ್ನಪ್ಪ ಅಂಗಡಿಗೆ ಕರೆದೊಯ್ದಿದ್ದರು. ಪುಸ್ತಕಗಳು, ಪೆನ್ನು, ಪೆನ್ಸಿಲ್ಲು, ರಬ್ಬರ್, ಜ್ಯಾಮಿಟ್ರಿ ಬಾಕ್ಸ್ ಎಲ್ಲಾ ಕೊಡಿಸಿ ಮಸಾಲೆ ದೋಸೆ ಬೇಕಾ ಎಂದು ಕೇಳಿದ್ದರು. ನಾನು ಕಣ್ಣರಳಿಸಿ ಹೂಂಗುಟ್ಟಿದ್ದೆ. ಬಸ್ಸನ್ನೇರಿ ಮೆಜಸ್ಟಿಕ್ ತಲುಪಿ ಬಳೆಪೇಟೆಯ ಸಂದಿಯಲ್ಲಿ ಸಾಗಿ ಕೃಷ್ಣ ಭವನದಲ್ಲಿ ಮಸಾಲೆ ದೋಸೆ, ಜಾಮೂನು ಕೊಡಿಸಿದ್ದರು. ತೃಪ್ತಿಯಿಂದ ಮನೆಗೆ ಮರಳಿದಾಗಲೇ ಅಜ್ಜಿ ಒಂದು ಪಚ್ಚೆ ಬಾಳೇಹಣ್ಣು, ಬಟ್ಟಲು ಹಾಲು ಮುಂದಿಟ್ಟುಕೊಂಡಿದ್ದು ಕಂಡು ಸಹಿಸಲಾರದೆ ಹೇಳಿಬಿಟ್ಟಿದ್ದೆ. ಅಂದು ಇದರಿಂದ ಸಣ್ಣ ರಾದ್ಧಾಂತವೇ ನಡೆದಿತ್ತು.

ಆಗೆಲ್ಲಾ ಹೋಟಲಿಗೆ ಹೋಗಿ ತಿಂದು ಬರುವುದು ಪಂಚಮಹಾ ಪಾತಗಳಲ್ಲಿ ಒಂದಾಗಿತ್ತು. ಅದರಲ್ಲೂ ಹೆಣ್ಣು ಮಕ್ಕಳು ಹೋಟಲಿನಲ್ಲಿ ಕಾಣಿಸಿಕೊಂಡರೆ ಮನೆತನಕ್ಕೊಂದು ಕಪ್ಪು ಚುಕ್ಕೆ ಎಂಬುವ ಭಾವನೆ. ಹೀಗಿರುವಾಗ ಪ್ರೀತಿಯ ಮೊಮ್ಮಗಳು ಹೋಟಲಿಗೆ ಹೋದರೆ ಅಜ್ಜಿಗೆ ಹೇಗಾಗಿರಬೇಡ. ಮುಂದೆ ಬೆಳೆದು ವಿವಾಹ ವಯಸ್ಕಳಾದಾಗ ಯಾವ ಗೌರವಾನ್ವಿತ ಮನೆತನದವರು ಅವಳನ್ನು ತಮ್ಮ ಮನೆಯ ಸೊಸೆಯನ್ನಾಗಿ ಆಯ್ಕೆ ಮಾಡಿಕೊಂಡು ಮನೆ

ತುಂಬಿಸಿ ಕೊಂಡಾರು? ಇದು ಅಜ್ಜಿಯ ಚಿಂತೆ. ಕೂಡಲೇ ನನ್ನಮ್ಮನನ್ನು ಕರೆದು ಮನೆಯ ಸಂವಿಧಾನದಲ್ಲಿ ಬಲುದೊಡ್ಡ ತಿದ್ದುಪಡಿ ಮಾಡಿಬಿಟ್ಟರು.

ಸಂವಿಧಾನದ ಪ್ರಕಾರ ಅಡುಗೆ ಮನೆಗೆ ಈರುಳ್ಳಿ ಪ್ರವೇಶ ನಿಷೇಧವಾಗಿತ್ತು. ಸೊಸೆಯನ್ನು ಕರೆದು ''ನಿಮ್ಮಗಳ ಮಸಾಲೆ ದೋಸೆ ಪ್ರೀತಿ ಅತಿರೇಕಕ್ಕೇರಿದೆ. ಇದಕ್ಕೆ ನಿನ್ನ ಗಂಡನ ಕುಮ್ಮಕ್ಕು. ಅವಳಿಗೆ ಹೋಟಲು ಅಭ್ಯಾಸ ಮಾಡಿಸಿ ಬಿಟ್ಟಿದ್ದಾನೆ. ಇದನ್ನು ತಡೆಯೋಕ್ಕೆ ಇನ್ಮೇಲೆ ಉಗ್ರಾಣದ ಮೂಲೆಯಲ್ಲಿ ಪ್ರತ್ಯೇಕವಾಗಿ ಸೀಮೆಎಣ್ಣೆ ಸ್ಟೊವ್ ಇಟ್ಕೊಂಡು ಮಸಾಲೆ ದೋಸೆ ಮಾಡ್ಕೊಡು. ತಿಂದು ತೃಪ್ತಿ ಪಡ್ಲಿ. ಆದ್ರೆ ಅದಕ್ಕೇಂತ ಪಾತ್ರೆಗಳ್ನ ಪ್ರತ್ಯೇಕವಾಗಿಟ್ಕೊ'' ಎಂದು ಪರವಾನಗಿ ಕೊಟ್ಟರು. ಅಮ್ಮ ಮಸಾಲೆ ದೋಸೆ ಕಾರ್ಯಕ್ರಮ ಹಮ್ಮಿಕೊಂಡ ದಿನ ಅದು ಮುಗಿಯುವವರೆಗೆ ತಾನು ಮಾತ್ರ ಮನೆಯ ಹಿಂದಿನ ತುಳಸಿ ಕಟ್ಟೆಯ ಮುಂದೆ ಜಪ ಮಾಡುತ್ತಾ ಕುಳಿತುಬಿಡುತ್ತಿದ್ದರು ಅಜ್ಜಿ. ತನ್ನ ನೇಮ ನಿಷ್ಠೆಗಳನ್ನು ತುಸುವೂ ಬಿಟ್ಟುಕೊಡದ ಅವರು ಈ ಮಟ್ಟದ ರಿಯಾಯಿತಿ ತೋರಿಸಿದರೆಂದರೆ ಅದು ಕೇವಲ ನನ್ನ ಮೇಲಿಟ್ಟ ಪ್ರೀತಿಯಿಂದಾಗಿ ಎಂದು ಈಗ ನನಗರಿವಾಗುತ್ತಿದೆ.

ನನಗೂ ನಮ್ಮಪ್ಪನಿಗೂ ಮನೆಯ ಮಸಾಲೆ ದೋಸೆ ಸಪ್ಪೆ, ಸತ್ವಹೀನ ಎನಿಸಿ ಹೋಟಲು ದೋಸೆಗಾಗಿ ಆಗಾಗ ಹೋಗುವುದು ಮುಂದುವರಿದೇ ಇತ್ತು.

ಬೆಳೆಯುತ್ತಿದ್ದ ನನ್ನ ಮನಸ್ಸಿನಲ್ಲಿ ಮೊಟ್ಟಮೊದಲ ಬಾರಿಗೆ ಸ್ತ್ರೀ ಪುರುಷ ಸಮಾನತೆಯ ಬಗ್ಗೆ ಚಿಂತನೆ ಮೊಳೆತದ್ದು ಕೂಡ ನನ್ನ ಮಸಾಲೆ ದೋಸೆಯ ಅಪರಿಮಿತ ಪ್ರೀತಿ ಇಂದಲೇ.

ಅಂದು ಹೋಟಲಿನಲ್ಲಿ ದೋಸೆಗಾಗಿ ಕಾಯುವ ಸಮಯದಲ್ಲಿ ಅಪರಾಧಿ ಪ್ರಜ್ಞೆ ಕಾಡಿ ಅಪ್ಪನಲ್ಲಿ ಕೇಳಿದ್ದೆ. ''ಅಜ್ಜಿ ಬೈಯ್ಯೊಲ್ವಾ?''

''ಇಲ್ಕೇಳು ಪುಟ್ಟಾ, ಹೋಟಲಿಗೆ ಹೋಗೋದು ತಪ್ಪಲ್ಲ. ಅಜ್ಜಿಗೆ ಅದರ ಅಭ್ಯಾಸವಿಲ್ಲ. ಅದಕ್ಕೇ ತಪ್ಪು ಅಂತಾರೆ. ನೀನು ಅವ್ರಿಗೆ ಹೇಳಿ ಮನಸ್ಸು ನೋಯಿಸ್ಬೇಡ'' ಎಂದು ನನ್ನ ಮನಸ್ಸು ನಿರಾಳ ಮಾಡಿದರು. ಆ ವೇಳೆಗೆ ಒಬ್ಬ ಹಳ್ಳಿಯವ ಒಳ ಪ್ರವೇಶಿಸಿದ. ಯಾವುದೋ ಪಾಳೆಯಗಾರ ವಂಶಸ್ಥನಿರಬೇಕು. ದಪ್ಪ ಮೀಸೆಯ ಭಾರಿ ಆಳು. ಠೀವಿಯಿಂದ ಒಳ ಬಂದು ಕಿ ರ್ ರ್ ರ್ ರ್ ಎಂದು ಎಲ್ಲರೂ ತಿರುಗಿ ನೋಡುವಂತೆ ಕುರ್ಚಿ ಎಳೆದು ಆಸೀನನಾದ. ಅವನನ್ನು ಮೂಕ ಪಶುವಿನಂತೆ ಹಿಂಬಾಲಿಸಿ ಬಂದದ್ದು ಅವನ ಹೆಂಡತಿ. ತಲೆಯ ಮೇಲೆ ಸೆರಗು ಹೊದ್ದು ನೆಲ ನೋಡುತ್ತಾ ಬಂದಳು. ತಾನೂ ಕುರ್ಚಿ ಎಳೆಯಲು ಕೈಹಾಕಿದಳು. ''ಅದ್ಯಾಕೆ ಕುರ್ಚಿ ನಿಂಗೆ? ನನ್ಮುಂದೆ ಕುರ್ಚಿ ಮ್ಯಾಗ ಕುಂತು ದರ್ಬಾರ್ ನಡಸ್ಬೇಕೂಂತ ಇದ್ದೀಯಾ? ಅಕಾ, ಆ ಮೂಲೇಲಿ ಕುಂತ್ಕಾ'' ಮೂಲೆಯತ್ತ ಕೈ ತೋರಿ ಗರ್ಜಿಸಿದ. ಪಾಪದ ಹೆಣ್ಣು, ಎದುರಾಡದೆ ಮೂಲೆಗೆ ಹೋಗಿ ಕುಕ್ಕುರುಗಾಲಿನಲ್ಲಿ ಕುಳಿತಳು. ಎರಡು ಮಸಾಲೆ ದೋಸೆಗೆ ಹೇಳಿದ್ದು ಇಬ್ಬರೂ ಅವರವರು ಕುಳಿತಿದ್ದ ಜಾಗದಲ್ಲೇ ತಿಂದು ಮುಗಿಸಿದರು. ಈಗ ಪಾಳೆಯಗಾರ ಮತ್ತೊಂದು ದೋಸೆ ತರಲು ಹೇಳಿದ. ಮೂಲೆಯಿಂದ ಹೆಣ್ಣು ಧ್ವನಿ ಪ್ರತಿಧ್ವನಿಸಿತು. ''ನಂಗೂ ಇನ್ನೊಂದು ದ್ವಾಸೆ.'' ''ಏನ್ಬ್ಯಾಡ ಬಿಡು. ಎಷ್ಟೂಂತ ತಿನ್ನೋದು?'' ಪುರುಷ ಸಿಂಹ ಘರ್ಜಿಸಿತು. ದೋಸೆ ತಂದ ಮಾಣಿ ಕಾಫಿ ಎರಡಾ ಎಂದು ಕೇಳಿದಾಗ ಒಂದೇ

ಸಾಕೆಂದು ಹೇಳಿ ಅದನ್ನು ಸಶಬ್ದವಾಗಿ ಕುಡಿದು ಹೊರನಡೆದ. ಹೆಣ್ಣುತಲೆ ಬಾಗಿ ಹಿಂಬಾಲಿಸಿತು.

ನನ್ನ ರಕ್ತ ಕುದಿಯಲು ಇಷ್ಟು ಸಾಕಲ್ಲ! ನನ್ನಪ್ಪನತ್ತ ಸಿಟ್ಟಿನಿಂದಲೇ ನೋಡಿದೆ. ಅವರು ಭುಜದ ಮೇಲೆ ತಟ್ಟಿ ಸಮಾಧಾನಿಸಿದರು. ಇದು ಅನಾದಿಕಾಲದಿಂದ ನಡೆದು ಕೊಂಡು ಬಂದಿರೋದೇ ಪುಟ್ಟಿ. ಇದಕ್ಕೇನು ಪರಿಹಾರ ಗೊತ್ತಾ? ಹೆಣ್ಣು ವಿದ್ಯಾವಂತೆಯಾಗಿ ತನ್ನ ಕಾಲ್ಮೇಲೆ ತಾನು ನಿಂತು ಸಮಾಜದಲ್ಲಿ ಗೌರವ ಗಿಟ್ಟಿಸಿಕೊಳ್ಳೇಕು. ಅದಕ್ಕೇ ನಿನ್ನನ್ನು ಕಷ್ಟಪಟ್ಟು ಚೆನ್ನಾಗಿ ಓದು ಅಂತ ಹೇಳೋದು ಎಂದು ಪರಿಸ್ಥಿತಿಯ ಲಾಭ ಪಡೆದುಕೊಂಡು ನನಗೇ ಬುದ್ಧಿ ಹೇಳಿದರು!

ಮುಂದೆ ಮದುವಣಗಿತ್ತಿಯಾಗಿ ಪೂರ್ವ ಭಾರತದ ಸಣ್ಣ ಊರಿನಲ್ಲಿ ನನ್ನ ವೈವಾಹಿಕ ಜೀವನ ಆರಂಭಿಸಿದೆ. ವಂಗ ಬಂಧುಗಳಿಗೆ ತಮ್ಮ ಭಾಷೆ, ಕಲೆ ಹಾಗೂ ಆಹಾರ ಕ್ರಮದ ಮೇಲೆ ವಿಪರೀತ ವ್ಯಾಮೋಹ. ಮಾರುಕಟ್ಟೆಗೆ ಹೋದರೆ ಸರ್ವಾಂತರ್ಯಾಮಿಯಾದ ಮೀನು ವಾಸನೆ. ಆ ಪರಿಸರದಲ್ಲಿ ಮಸಾಲೆ ದೋಸೆ ತಿನ್ನುವುದಿರಲಿ ನೆನಸಿಕೊಂಡರೂ ವಾಕರಿಕೆ ಗ್ಯಾರಂಟಿ. ಮನೆಯಲ್ಲಿ ದೋಸೆಗಾಗಿ ಹಂಬಲಿಸಿ ಹಂಬಲಿಸಿ ಒಮ್ಮೆ ನಾನೇ ತಯಾರಿಸಲು ಮುಂದಾದೆ. ವಿಷಯ ತಿಳಿದು ನನ್ನವರು ಹಿಗ್ಗಿದರು. ಅದೇ ಹಿಗ್ಗಿನಲ್ಲಿ ಮಸಾಲೆ ದೋಸೆ ಪಾರ್ಟಿಗಾಗಿ ಗೆಳೆಯರನ್ನೆಲ್ಲಾ ಮನೆಗೆ ಆಹ್ವಾನಿಸಿಯೂ ಬಿಟ್ಟರು. ಅಗಾಧ ಪರಿಶ್ರಮದಿಂದ ತಯಾರಿಸಿ ಅತಿಥಿಗಳ ಮುಂದಿಟ್ಟೆ, ಒಮ್ಮೆ ಬಾಯಿಗಿಟ್ಟವರು ಒಂದು ಚೂರೂ ಮಾತನಾಡದೆ ಖಾಲಿ ಮಾಡಿ ಹೊರಟರು. ಕಳುಹಿಸಿ ಬಂದ ಮನೆಯ ಯಜಮಾನ ಪೇಪರ್ ಅಡ್ಡ ಹಿಡಿದು ಕುಳಿತರು. ಪೇಪರ್ ಸರಿಸಿ ನೋಡಿದರೆ ಕಣ್ಣಲ್ಲಿ ಧಾರಾಕಾರವಾಗಿ ಕಂಬನಿ!

''ನಾನು ವೃತ್ತಾಕಾರವಾಗಿ ಪೂರ್ಣ ಚಂದ್ರನಂತೆಯೇ ದೋಸೆ ಹುಯ್ಯಬೇಕೆಂದಿದ್ದೆ.''

''ಅದು ನಿನ್ನಿಚ್ಛೆಯಾಗಿತ್ತು ಅಂತ ನನ್ಗೂ ಗೊತ್ತು. ಆದ್ರೆ ಆ ಭಗವಂತನಿಚ್ಛೆ ಬೇರೇನೇ ಇತ್ತು. ಅದಕ್ಕೇ ಅದು ಭೂಪಟದಲ್ಲಿರೋ ಆಸ್ಟ್ರೇಲಿಯ, ಆಫ್ರಿಕಾ, ದಕ್ಷಿಣ ಅಮೇರಿಕಾದ ಆಕಾರ ಬಂತಲ್ವಾ?''

''ಹೌದೂರೀ. ಏಳೋಕ್ಕೂ ತಕರಾರು ಮಾಡ್ತು. ಆದ್ರೆ ನಾನು ಬಿಡ್ಲಿಲ್ಲ, ಆ ಹರಕು ದೋಸೆಯೊಳ್ಗೇ ಪಲ್ಯ ತೂರಿಸೋದ್ರಲ್ಲಿ ಯಶಸ್ವಿಯಾದೆ.''

''ಆಹಾ! ಇನ್ನು ಆ ಪಲ್ಯ. ಆಲೂಗಡ್ಡೆ ಅರ್ಧ ಬೆಂದಿತ್ತೂಂತ ಪರಿಹಾರಾರ್ಥವಾಗಿ ಈರುಳ್ಳಿ ಸೀದು ಕರಕಲಾಗಿತ್ತು. ಇನ್ನು ಆ ಚಟ್ನಿ.. ಯಾವ ಮುತ್ತಾಳ ಈ ಊರ್ನಲ್ಲಿ ನೀರಿಗೆ ಬರ ಅಂದೋನು? ಆ ಚಟ್ನಿ ನೋಡಿದ್ರೆ ಇಲ್ಲಿ ನೆರೆ ಬಂದಿರೋ ಹಂಗಿತ್ತು''.

''ಎಲ್ಲೋ ಸ್ವಲ್ಪ ನೀರಾಯ್ತು. ಅದೇನು ಮಹಾ ದೊಡ್ಡ ವಿಷ್ಯ?''

''ದೋಸೆ ನೀರು ಚಟ್ನೀಲಿ ತೊಯ್ದು ದೋಸೆ ಯಾವ್ದು ಚಟ್ನಿ ಯಾವ್ದು ಅಂತ ನನ್ನ ಸ್ನೇಹಿತ್ರು ತಿಳೀದೆ ಸೋತುಹೋದ್ರು. ನನ್ನದೊಂದು ಮಾತು ನಡೆಸಿಕೊಡ್ತೀಯಾ?'' ಕಣ್ಣಲ್ಲಿ ಮತ್ತೊಂದು ಕಣ್ಣೀರ ಕಂತು.

‘‘ಇನ್ಮೇಲೆ ಮನೇಲಿ ಮಸಾಲೆ ದೋಸೆ ಮಾಡಕ್ಕೆ ಪ್ರಯತ್ನ ಮಾಡ್ಬೇಡ. ಸಪ್ತ ಸಮುದ್ರ ಈಜಿ, ಸಪ್ತ ಪರ್ವತ ಹತ್ತಿ, ಸಪ್ತ ಮರುಭೂಮಿ ದಾಟಿ, ಸಪ್ತ ದಾನವ್ರನ್ನ ಕೊಂದು ನಿನಗೆ ಬೇಕಾದ್ರೆ ಮಸಾಲೆ ದೋಸೆ ತಂದ್ಕೊಡ್ತೀನಿ’’ ಎಂದು ಪ್ರಮಾಣ ಮಾಡಿಬಿಟ್ಟರು. ಆದ್ರೆ ಆ ಸಪ್ತ ಸಪ್ತ ಬಾಬತ್ತೆಲ್ಲಾ ಬರೀ ಬುರುಡೆ. ನಮ್ಮ ಕಾಲೋನಿಯಿಂದ ಐದು ಮೈಲಿ ದೂರದಲ್ಲಿ ನಾಯರ್ ಹೋಟಲಿತ್ತು. ಭಾನುವಾರದಂದು ಸೈಕಲ್ ಮೇಲೆ ಹೋಗಿ ಮಸಾಲೆ ದೋಸೆ ಕಟ್ಟಿಸಿ ತರುತ್ತಿದ್ದರು.

ನಾಯರ್ ಹೋಟಲಿನ ಮಸಾಲೆ ದೋಸೆ ಬಣ್ಣ, ರುಚಿ, ಸ್ವಾದ ಯಾವುದರಲ್ಲಿಯೂ ನಮ್ಮ ಉಡುಪಿಯವರ ದೋಸೆಗೆ ಇಲ್ಲದೆ ಸಿಕ್ಕ ಮೊದಲ ಅವಕಾಶ ಕಸಿದು ದಕ್ಷಿಣ ಭಾರತಕ್ಕೆ ಬಂದುಬಿಟ್ಟೆವು. ಬೇಕೆಂದಾಗೆಲ್ಲಾ ರುಚಿರುಚಿಯಾದ ಮಸಾಲೆ ದೋಸೆ ತಿಂದುಕೊಂಡು ಹಾಯಾಗಿದ್ದೆ.

ಮಸಾಲೆ ದೋಸೆಯೊಡನಿದ್ದ ನನ್ನ ಪ್ರೇಮ ಪ್ರಸಂಗ ಕಂಡು ಆ ದೈವಕ್ಕೂ ಅಸೂಯೆಯಾಗಿರಲು ಸಾಕು. ಜೀವನದಲ್ಲಿ ಏರಿಳಿತಗಳು ಶುರುವಾಯ್ತು. ಎಲ್ಲರ್ಗಿಗೂ ಬರುವಂತೆ ನನ್ನನ್ನೂ ಬೆನ್ನುನೋವು, ಕತ್ತುನೋವು, ಕಾಲುನೋವು ಇತ್ಯಾದಿತ್ಯಾದಿ ಕಾಡಿದವು. ಇಷ್ಟಮಿತ್ರ ಬಂಧು ಬಾಂಧವರು ಎಲ್ಲಾ ಸೇರಿಕೊಂಡು ಸಿಕ್ಕಾಪಟ್ಟೆ ಚಿಕಿತ್ಸಾ ಸಲಹೆಗಳನ್ನು – ಒಮ್ಮೊಮ್ಮೆ ಒಂದಕ್ಕೊಂದು ವಿರುದ್ಧವಾದದ್ದು ಕೊಟ್ಟು ನನ್ನ ಮನಃಶಾಂತಿ ಕದಡಿದರು. ಆ ಎಲ್ಲಾ ಸಲಹೆಗಳನ್ನು ಕೂಡಿ ಕಳೆದು ಗುಣಿಸಿ ಭಾಗಿಸಿ ಕೊನೆಗೆ ಪಕ್ಕದ ಮನೆ ಆಯುರ್ವೇದ ಪಂಡಿತರ ಕದ ತಟ್ಟಿದೆ. ನಾಡಿ ಹಿಡಿದು ಕ್ಷಣಕಾಲ ಧ್ಯಾನಾಸಕ್ತರಾದರು. ಅದೇನು ಅರ್ಥವಾಯಿತೋ ಕಡೆಗೂ ಬಾಯ್ಬಿಟ್ಟರು. ‘‘ಕಟ್ಟುನಿಟ್ಟಾಗಿ ಪಥ್ಯ ಮಾಡ್ಬೇಕು’’.

‘‘ಅದೇನು ಮಾಡ್ಬೇಕು ಹೇಳಿ. ಬಹಳ ಕಟ್ಟುನಿಟ್ಟಾಗಿರುವಂತೆ ನಾನು ನೋಡ್ಕೋತೀನಿ’’ ನನ್ನ ಪರವಾಗಿ ನನ್ನವರು ಆಶ್ವಾಸನೆ ನೀಡಿದರು ಎದೆ ತಟ್ಟುತ್ತಾ.

‘‘ಉದ್ದಿನಬೇಳೆ, ಆಲೂಗಡ್ಡೆ ಸಂಪೂರ್ಣ ತ್ಯಜಿಸಬೇಕು. ಮತ್ತೆ ... ’’ ಮುಂದೆ ಅವರು ಹೇಳಿದ್ದು ನನ್ನ ಕಿವಿ ಮುಟ್ಟಲೇ ಇಲ್ಲ. ಅಲ್ಲಾರೀ, ಉದ್ದಿನಬೇಳೆ, ಆಲೂಗಡ್ಡೆ ಇಲ್ಲದ್ದು ಅದ್ಯಾವ ಸೀಮೆ ಮಸಾಲೆ ದೋಸೆ ಮಾಡಲು ಸಾಧ್ಯ? ಆ ವೈದ್ಯರು ಕಳೆದ ಜನ್ಮದಲ್ಲಿ ನನ್ನ ವೈರಿಯಾಗಿದ್ದಿರಬೇಕು. ಪ್ರತಿಭಟನೆಗೆ ಅವಕಾಶವಿಲ್ಲದಂತೆ ನನ್ನವರು ಮನೆಗೆ ಕರೆದೊಯ್ದರು.

ಅಂದಿನಿಂದ ಮನೆಯಲ್ಲಿ ನನ್ನ ಮೇಲೆ ಸರ್ಪ ಕಾವಲು. ನನ್ನ ಪ್ರಿಯ ತಿನಿಸನ್ನು ನನ್ನ ಸಮೀಪವೂ ಬರಗೊಡುತ್ತಿಲ್ಲ. ಆದ್ದರಿಂದ ನನಗೊಂದು ಚೂರೂ ಬೇಸರವಿಲ್ಲ. ನನ್ನವರದ್ದು ಟೂರಿಂಗ್ ಕೆಲಸ. ಅವರು ಊರಲಿಲ್ಲದ್ದಾಗ ಮೊದಲೇ ಮಾಡಿಕೊಂಡ ಒಪ್ಪಂದದಂತೆ ಎದುರುಗಡೆಯಿರುವ ದರ್ಶಿನಿಯಿಂದ ಒಂದು ಪೊಟ್ಟಣ ಮನೆಗೆ ರವಾನಿಸಲ್ಪಡುತ್ತದೆ. ತಿಂದುಕೊಂಡು ಹಾಯಾಗಿದ್ದೇನೆ.

ಎಲ್ಲಾದ್ರೂ ಬಾಯ್ಬಿಟ್ಟೀರಿ ಜೋಕೆ!

✵

# ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

– ದಂನಆ

- 100 ಪುಟ ಕಡಿಮೆ ಬರೆದಿದ್ದರೂ ಸಹ ಲೇಖಕ ಹೇಳಬೇಕಾದುದೆಲ್ಲವನ್ನೂ ಹೇಳಬಹುದಿತ್ತು.
- ತಮ್ಮದೇ ಗೆಲುವಿನ ಕತೆಯನ್ನು ಬರೆದುಕೊಳ್ಳುವ ಯಶಸ್ವೀ ಪುರುಷರು ಕೂಡ ತಮ್ಮ ಅಸಲೀ ಸೋಲುಗಳ ಬಗ್ಗೆ ಬರೆದುಕೊಳ್ಳುವುದಿಲ್ಲ.
- Give me a ring sometime…on the phone.
- ಎಲ್ಲರೂ ಹೀರೋಗಳಾಗ ಬಯಸುತ್ತಾರೆ, ವಿದೂಷಕನಾಗಲು ಯಾರೂ ಮುಂದೆ ಬರುವುದಿಲ್ಲ.
- ಮಾರುತಿ ದೇವಾಲಯ 800 ವರ್ಷ ಹಳೆಯದಾಗಿದ್ದರೆ ಅದನ್ನು ಮಾರುತಿ 800 ಎಂದು ಕರೆಯಬಹುದೆ?
- ಭಾರತದ ಇತಿಹಾಸ ಕೇವಲ ಕೆಲವು ಕುಟುಂಬಗಳ ಜೀವನಚರಿತ್ರೆ ಆಗತೊಡಗಿದೆ.

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ಈ ಚಿತ್ರಕ್ಕೆ ಇಂಟರ್‌ವಲ್ ಇಲ್ಲದಿರುವುದು ಯಾರೂ ಎದ್ದು ಹೋಗದಿರಲಿ ಎಂದೇ?
- One man’s trash is other man’s treasure.
- ಮನುಷ್ಯ ಭಾಷೆಯನ್ನು ಕಂಡುಹಿಡಿಯಲು ಕಾರಣ? ದೂರು ಹೇಳಲು ಎಂದೇ ಇರಬೇಕು.
- ಹೊಸದಾಗಿ ಡಿಸ್ಟರ್ಬ್ ಆಗುವುದೇನು ಬಂತು, ನಾವು ಆಲ್‌ರೆಡಿ ಡಿಸ್ಟರ್ಬ್ಡ್.
- ನನ್ನ ಉಪದೇಶ ಕೆಲವರಿಗೆ ತುಂಬಾ ಹಿಡಿಸಿದೆ ಎಷ್ಟೆಂದರೆ ಅದನ್ನು ಅನುಸರಿಸುವ ಬದಲು ಅದಕ್ಕೆ ಫ್ರೇಂ ಹಾಕಿಸಿ ಗೋಡೆಗೆ ನೇತು ಹಾಕಿದ್ದಾರೆ.
- We want permanent things for a temporary life.
- ನಮ್ಮ ಬುಡ ಅಲ್ಲಾಡತೊಡಗಿದಾಗ ನಾವು ದೇವರ ಮೊರೆ ಹೋದರೆ ಅದನ್ನು ಅಲುಗಾಡಿಸುತ್ತಿರುವುದು ಅವನೇ ಎಂದು ತಿಳಿಯುತ್ತದೆ.
- ದೇವರನ್ನು ಪ್ರಾರ್ಥಿಸಿ, ಆದರೆ ದಡ ಮುಟ್ಟುವವರಿಗೂ ಹಾಯಿಗೋಲನ್ನು ಬಳಸಲು ಮರೆಯದಿರಿ.
- ಜನ ಹೆಚ್ಚು ಕೊಡಲು ತಯಾರಿರುವಾಗ ಕಡಿಮೆ ಬೆಲೆಗೇಕೆ ಮಾರಬೇಕು?
- To worry about tomorrow is to be unhappy about today.
- ಜನ ನಿಮ್ಮನ್ನು ಒಬ್ಬ ಹಾಸ್ಯ ಪ್ರಜ್ಞೆ ಇರುವ ವ್ಯಕ್ತಿ ಎಂದು ಗುರುತಿಸಬೇಕೇ ಹೊರತು ಜೋಕರ್ ಎಂದಲ್ಲ.
- Know more no less.

# ಡಾಕ್ಟರ್ ಚಿಕ್ಕಪ್ಪ

**- ಭಾರ್ಗವಿ ನಾರಾಯಣ್**

**ನ**ಮ್ಮ ಚಿಕ್ಕಪ್ಪ ವೃತ್ತಿಯಿಂದ ವೈದ್ಯರಾಗಿದ್ದರು. ಅಂತಹ ಆಡಂಬರದ ಭಾರಿ ಕ್ಲಿನಿಕ್ ಏನೂ ಇಟ್ಟುಕೊಂಡಿರಲಿಲ್ಲ. ಒಂದು Garageನಂತಹ ಜಾಗದಲ್ಲಿ ಇತ್ತು ಅವರ ವೈದ್ಯಶಾಲೆ. ಅವರಿಗೆ ತಮ್ಮ ವೃತ್ತಿಯ ಬಗ್ಗೆ ಅಸಾಧ್ಯ ಗೌರವ, ತಿಳುವಳಿಕೆ ಇದ್ದರೂ, ಸಾಮಾನ್ಯವಾಗಿ ಡಾಕ್ಟರುಗಳಿಗೆ ಇರುವ ಒಂದು ರೀತಿಯ ಗತ್ತು, ಬಿಗುಮಾನ ಇರಲಿಲ್ಲ.

ರೋಗಿಗಳ ಹತ್ತಿರ ಎಷ್ಟು ಬೇಕೋ ಅಷ್ಟು ಮಾತಾಡಿ, ಅವರಿಗೆ ಔಷಧಿ ಕೊಟ್ಟು ಕಳಿಸ್ತಾ ಇರಲಿಲ್ಲ. ಹಾಗೆ ನೋಡಿದರೆ ಅವರಿಗೆ ಔಷಧಿ ಕೊಡುವುದಕ್ಕೇ ಇಷ್ಟವಿರುತ್ತಿರಲಿಲ್ಲ. ಔಷಧಿಗೆ ಬದಲು ಆಹಾರದಲ್ಲೇ ಚಿಕ್ಕ ಪುಟ್ಟ ರೋಗಗಳ ನಿವಾರಣೆಗೆ ಸಲಹೆ ಕೊಡುತ್ತಿದ್ದರು. ಆದ್ದರಿಂದಲೇ ಆ ಕಾಲದಲ್ಲಿ, ಚಿಕ್ಕ ಪುಟ್ಟ ಊರುಗಳಲ್ಲಿ, ಊರಿಗೆಲ್ಲ ಒಬ್ಬರೇ ವೈದ್ಯರಾಗಿದ್ದರೂ ದುಡ್ಡು ಕಾಸು ಮಾಡಲು ಅಸಮರ್ಥರಾಗಿದ್ದರು.

ನಮ್ಮ ಮನೆ ಹತ್ತಿರಾನೇ ವಸುಂಧರಮ್ಮ ಅಂತ ಒಬ್ಬ ಮಹಿಳಾ ಮಣಿ ಇದ್ದರು. ಆಕೆ ತುಂಬಾ ಓದಿ – ಒಳ್ಳೆಯ ಉದ್ಯೋಗದಲ್ಲಿದ್ದರು. ಆಕೆಗೆ ಒಮ್ಮೆ ಹಲ್ಲು ನೋವು ಬಂತು. ಚಿಕ್ಕಪ್ಪ ಹಲ್ಲಿನ ವೈದ್ಯರಲ್ಲದಿದ್ದರೂ, ಏನೇ ತಕ್ಷಣಕ್ಕೆ, ನೋವು ಉಪಶಮನಕ್ಕಾಗಿ ಎಂಥದ್ದಾದರೂ ಔಷಧಿ ಪಡೆಯುವ ಉದ್ದೇಶದಿಂದ ಬಂದಿದ್ದರು. ಅದೇ ವೇಳೆಗೆ ಅವರ ಎಂಟು ವರ್ಷದ ಮಗಳು ಲೋಲ ಬಂದಳು – ಅವಳ ಹೋಂವರ್ಕ್ ಪುಸ್ತಕದ ಸಮೇತ ಕನ್ನಡ ಪಾಠ – ಲೋಲಳಿಗೆ ಅರ್ಥವಾಗಿರಲಿಲ್ಲ – ತಾಯಿಯ ಸಹಾಯ ಕೇಳಿದಳು.

ಆಕೆಯ ಮಾತೃಭಾಷೆ ಕನ್ನಡ. ಮನೆಯಲ್ಲಿ ಆಡುತ್ತಿದ್ದ ಭಾಷೆಯೂ ಕನ್ನಡವೇ – ಆದರೂ ಆಕೆ – ''ಅಯ್ಯೋ ಏನು ಗೋಳು ಹೊಯ್ಕೊಳ್ತಿಯೇ. ನಂಗೇ ಕನ್ನಡ ಬರೋದಿಲ್ಲ ಸರಿಯಾಗಿ – ನಿಂಗೇನು ಹೇಳಿಕೊಡಲೇ'' ಅಂದರು, ಒಂದು ರೀತಿಯ ಜಂಭದಿಂದಲೇ. ಅಲ್ಲಿದ್ದವರೆಲ್ಲಾ – ಅಂದರೆ ಒಂದೈದಾರು ಜನ ನಕ್ಕರು. ಎಲ್ಲರೂ ಔಷಧಿಗೆಂದೇ ಬಂದವರಲ್ಲ – ಒಬ್ಬರು ಔಷಧಕ್ಕೆ, ಇಬ್ಬರು ಕನ್ಯಾಪಿತೃಗಳು ವರಗಳ ಬಗ್ಗೆ ವಿಚಾರಿಸುವುದಕ್ಕೆ, ಇನ್ನಿಬ್ಬರು Grammer ಪಾಠಕ್ಕೆ ಬಂದವರು. ಅವರೆಲ್ಲಾ ಮುಖಮುಖ ನೋಡಿಕೊಂಡು ನಕ್ಕರು – ಬೇರೆ ಬೇರೆ ಕಾರಣಗಳಿಗೆ.

ಔಷಧಿಗೆ ಬಂದವರು ಎಂದು ಹೇಳಲು ಕಾರಣವಿದೆ. ಈಗಿನ ಡಾಕ್ಟರುಗಳಂತೆ prescription ಬರೆದು ಫೀಸ್ ವಸೂಲು ಮಾಡುವ, ಚಿಕ್ಕಪುಟ್ಟ ರೋಗಗಳಿಗೆ, ಔಷಧಿ, ಮಾತ್ರೆ ಎಲ್ಲಿ ಇಟ್ಟಿರುತ್ತಿದ್ದರು.

ಎಲ್ಲರೂ ನಕ್ಕರೂ ಚಿಕ್ಕಪ್ಪ ನಗಲಿಲ್ಲ. ನಗುವಂತಹ ಪ್ರಸಂಗ ಇದೆಯೆಂದು ಅವರಿಗೆ ತಿಳಿಯಲೂ ಇಲ್ಲ. ಹಲ್ಲು ನೋವಿಗಿಂತ ಭೀಕರವಾದ ತೊಂದರೆ ಇಂದ ಆಕೆ ನರಳುತ್ತಿರುವರು ಎಂಬಂತೆ ಆತನ ಮುಖಭಾವವಿತ್ತು. ಹಲ್ಲು – ಔಷಧಿ ಇಂತಹ ಕ್ಷುಲ್ಲಕ ವಿಷಯಗಳಿಂದ

ವಿಮುಖರಾಗಿ ಚಿಕ್ಕಪ್ಪ, ತಕ್ಷಣ ಒಂದು ಸ್ಲೇಟು, ಬಳಪ ತೆಗೆದುಕೊಂಡು ಬಂದರು ಕಪಾಟಿನಿಂದ – ಆಕೆಗೆ ಕಾಗುಣಿತ ಕಲಿಸಲು.

ನಿಮ್ಮ ಸಂದೇಹ, ಆತಂಕ ಅರ್ಥವಾಗುತ್ತದೆ ನನಗೆ. 'ಡಾಕ್ಟರ್ ಕ್ಲಿನಿಕ್ಕಿನ ಕಪಾಟಿನೊಳಗೆ ಯಾಕೆ ಬಂತು ಸ್ಲೇಟು – ಬಳಪ' ಎನ್ನುವುದು ತಾನೆ ನಿಮ್ಮ ಯೋಚನೆ – ಸಹಜವೇ ಅಲ್ಲಿ ಆ ವಸ್ತುಗಳ ಇರಬೇಕಾದ ಅವಶ್ಯಕತೆ ಖಂಡಿತ ಇಲ್ಲ. ಆದರೆ ಅಂತಹ ನಿಯಮಗಳಿಗೆ ಇಲ್ಲಿ ಮಾನ್ಯತೆ ಇರಲಿಲ್ಲ.

ಚಿಕ್ಕಪ್ಪನ ಶಾಪಿನಲ್ಲಿ, ಸ್ಲೇಟು ಬಳಪಗಳಷ್ಟೇ ಅಲ್ಲ – ಪುಸ್ತಕ, ಪೆನ್ಸಿಲ್ಲು, ರಬ್ಬರಿನಿಂದ ಹಿಡಿದು, ಸೂಜಿ, ದಾರ, ಕತ್ತರಿ, ಗುಂಡಿ, ಅಡಿಕೆ ಪುಡಿ, ಲವಂಗ, ಸೀಮೆ ಎಣ್ಣೆ, ಸ್ಕ್ರೂಡ್ರೈವರ್, ಬ್ರಷ್, ಬಣ್ಣದ ಕಾಗದ, ಉಪ್ಪಿನಕಾಯಿ, ಹುರಿಗಾಳು – ಇಂಥದ್ದು ಇಲ್ಲ ಎನ್ನುವಂತೆಯೇ ಇಲ್ಲ. ಒಂದು ರೀತಿಯ mini departmental store. ಇದರ ಜೊತೆಯಲ್ಲಿ ಔಷಧಿ ಬಾಟಲ್ಲುಗ್ಗಳೂ ಇದ್ದುವು ಎಂಬುದೇ ಒಂದು ವಿಶೇಷ ಸಂತೋಷದ ಸಂಗತಿ.

ಪಾಪ, ಚಿಕ್ಕಪ್ಪ ಈ ವಸ್ತುಗಳನ್ನೆಲ್ಲಾ ಶೇಖರಿಸಿಕೊಂಡು ಇಡುತ್ತಿದ್ದುದು, ತಮ್ಮ ಸ್ವಂತ ಉಪಯೋಗಕ್ಕಾಗಿ ಅಲ್ಲ. ಮನೆಯವರಿಗೆ, ಅಕ್ಕಪಕ್ಕದವರಿಗೆ, ತಕ್ಷಣಕ್ಕೆ ಬೇಕಾದಲ್ಲಿ ಕೊಡಲು ಇಟ್ಟಿರುತ್ತಿದ್ದರು. ಆ ವಸ್ತುಗಳನ್ನು ಕೊಡುವಾಗಲೇ ತಾಕೀತು ಮಾಡಿರುತ್ತಿದ್ದರು – ''ಆಮೇಲೆ ವಾಪಸ್ಸು ತಂದುಕೊಡಬೇಕಮ್ಮ, ಬೇರೆಯವರು ಯಾರಾದ್ರೂ ಕೇಳಿದ್ರೆ ಕೊಡಬೇಕಾಗುತ್ತೆ'' ಅಂತಾನೂ.

ಯಾರು ಏನೇ ವಸ್ತುವನ್ನು ಕೇಳಿದರೂ, ತಾವು ಮಾಡುತ್ತಿದ್ದ ಕೆಲಸವನ್ನು ಅಲ್ಲಿಗೇ ನಿಲ್ಲಿಸಿ – ಯಾವುದೋ ಮಹತ್ಕಾರ್ಯವೆಂಬಂತೆ, ಅದನ್ನು ಹುಡುಕಿ ಕೊಡುತ್ತಿದ್ದರು. ಅವರು ಅಲ್ಲಿನ ವಸ್ತುಗಳನ್ನೆಲ್ಲಾ ಭಯಂಕರ ಅವ್ಯವಸ್ಥಿತ ರೀತಿಯಲ್ಲಿ ಇಟ್ಟುಕೊಂಡಿದ್ದಾರೆಂಬ ಭಾವನೆ ಇದ್ದರೂ, ಐದು ಹತ್ತು ನಿಮಿಷಗಳಲ್ಲಿ ಕೇಳಿದ ವಸ್ತುವನ್ನು ಪತ್ತೆಮಾಡಿ ತೆಗೆದುಕೊಡುತ್ತಿದ್ದರು. ಆ ಅವ್ಯವಸ್ಥೆಯಲ್ಲಿ, ಅವರಿಗೇ ವೇದ್ಯವಾಗುವಂತಹ ಒಂದು ಅವ್ಯಕ್ತ ವ್ಯವಸ್ಥೆ ಇದ್ದಿರಬಹುದೇನೋ.

ಇರಲಿ, ವಸುಂಧರಮ್ಮನವರ ಹಲ್ಲುನೋವಿನ ವಿಷಯಕ್ಕೆ ಬರೋಣ. ಪಾಪ ಆಕೆ ಏನಾದರೂ ಮಾತನಾಡುವುದಕ್ಕೆ ಮೊದಲೇ, ಚಿಕ್ಕಪ್ಪ ಕಾಗುಣಿತ ಪಾಠ ಶುರು ಮಾಡಿದರು. ಆಕೆ ಹಿಂದು ಮುಂದು ನೋಡ್ತಾ ಇದ್ದುದನ್ನು ಕಂಡು 'ಹೂಂ ಹೇಳಿ – ಸುಗುಣಮ್ಮ' ಎಂದರು. ಚಿಕ್ಕಪ್ಪ ಹಾಗೆಯೇ – ಯಾರನ್ನೂ ಅವರು ಅವರವರ ತಂದೆ ತಾಯಂದಿರು ನಾಮಕರಣ ಮಾಡಿದ್ದ ಹೆಸರಿನಿಂದ ಕರೆಯುವ ಅಭ್ಯಾಸವೇ ಇರಲಿಲ್ಲ ಅವರಿಗೆ. ಆ ಕ್ಷಣಕ್ಕೆ ಅವರ ಮನಸ್ಸಿಗೆ ಯಾರ ಹೆಸರು ಬರುತ್ತದೋ ಆ ಹೆಸರಿನಿಂದಲೇ ಕರೆಯುತ್ತಿದ್ದರು. ಅವರ ಪರಿಚಯ ಇದ್ದ ಜನರು ಇದರ ಬಗ್ಗೆ ತಲೆಕೆಡಿಸಿಕೊಳ್ಳದಷ್ಟು ಸ್ಥಿತ ಪ್ರಜ್ಞರಾಗಿದ್ದರು.

ಏನೂ ತೋಚದ್ದರಿಂದಲೋ ಏನೋ ಆಕೇನೂ ಬಾಯಲ್ಲಿ ಹೇಳಿಕೊಂತಾ ಅಕ್ಷರಗಳನ್ನು ತಿದ್ದೋಕೆ ಶುರು ಹಚ್ಚಿಕೊಂಡರು. ಅದನ್ನು ನೋಡಿ ಲೋಲಳಿಗೆ ಒಂದು ರೀತಿಯ ಸಂತೋಷ

– ಸಮಾಧಾನ, ಕನ್ನಡ ಬಾರದೆ ತೊಳಲಾಡುವ ಪ್ರಾಣಿ ತಾನೊಬ್ಬಳೇ ಅಲ್ಲ ಈ ವಿಶಾಲ ಜಗತ್ತಿನಲ್ಲಿ ಎಂಬ ಅರಿವಿನಿಂದ..

ಕಾಗುಣಿತದ ಪಾಠ ಮುಗಿಯುತ್ತಿದ್ದಂತೆಯೇ ತಮ್ಮ ಕಾಲಿಗೆ ಬುದ್ಧಿ ಹೇಳಿದರು. ವಸುಂಧರಮ್ಮ, ತಮ್ಮ ಹಲ್ಲು ನೋವಿನ ಸುದ್ದಿ ಸಂಪೂರ್ಣವಾಗಿ ಮರೆತು ''ಇನ್ನೆರಡು ಮೂರು ದಿನ ತಪ್ಪದೆ ಅಭ್ಯಾಸ ಮಾಡಿ, ಬಂದು ಬಿಡುತ್ತೆ'' ಎಂದು ಅವರಿಗೆ ತಿಳುವಳಿಕೆ ಹೇಳಿದ ಚಿಕ್ಕಪ್ಪ – ''ಸೀತಮ್ಮನವರೇ, ಒಂದು ನಿಮಿಷ ತಾಳಿ – ಹೊಸದಾಗಿ ನಲ್ಲಿಕಾಯಿ ಉಪ್ಪಿನಕಾಯಿ ಹಾಕಿದ್ದೀನಿ – ತೊಗೊಂಡು ಹೋಗಿ'' ಎಂದು ಹೇಳಿ ಒಂದು ಬಾಟಲ್ ಉಪ್ಪಿನಕಾಯಿ ಕೊಟ್ಟು ಕಳುಹಿಸಿದರು.

ಹೌದು – ಚಿಕ್ಕಪ್ಪ ಬಿಡುವಿನ ವೇಳೆಯಲ್ಲಿ ಉಪ್ಪಿನಕಾಯಿ ಹಾಕುತ್ತಿದ್ದರು. ಅಂತಿಂಥ ಉಪ್ಪಿನಕಾಯಿ ಅಲ್ಲ ಅದ್ಭುತವಾದ ಉಪ್ಪಿನಕಾಯಿ. ದೇವರು ಅವರ ಆತ್ಮಕ್ಕೆ ಶಾಂತಿ ಕೊಡಲಿ.

✵

---

### ವೀಸಾ ಪವರ್!

ಪಾಕಿಸ್ತಾನದ ಮೃಗಾಲಯದಲ್ಲಿ ಒಂದು ಹಸಿದ ಸಿಂಹಕ್ಕೆ ನಿತ್ಯ ಸಿಗುತ್ತಿದ್ದುದು ಕೇವಲ ೨ ಕಿಲೊ ಮಾಂಸ.

ಒಂದು ದಿನ ದುಬಾಯಿನಿಂದ ಬಂದ ಅಲ್ಲಿನ ಮೃಗಾಲಯದ ಅಧಿಕಾರಿ ಈ ಸಿಂಹವನ್ನು ನೋಡಿದರು. ಕರುಣೆ ಉಕ್ಕಿಬಂದು ತಮ್ಮ ಮೃಗಾಲಯಕ್ಕೆ ಕೊಂಡೊಯ್ಯುವುದಾಗಿ ಹೇಳಿದರು.

ಸುದ್ದಿ ಕೇಳಿ ಸಿಂಹಕ್ಕೆ ಸಖತ್ ಖುಷಿ. ವ್ಹಾ! ದುಬಾಯ್ ಮೃಗಾಲಯ. ಎ.ಸಿ. ಬೋನು. ಪ್ರತಿ ದಿನ ಒಂದೆರಡು ಮೇಕೆ ತಿನ್ನಲು. ಇತರ ಸೌಲಭ್ಯಗಳು - ಸಿಂಹ ಕನಸು ಕಾಣತೊಡಗಿತು.

ಸಿಂಹ ದುಬಾಯ್ ತಲುಪಿತು. ಬೆಳಗ್ಗೆ ನಾಷ್ಟಕ್ಕೆ ಎಂದು ಒಂದು ಸುಂದರವಾಗಿದ್ದ ಒಂದು ಬ್ಯಾಗ್ ಕೊಡಲಾಯಿತು. ಲಗುಬಗೆಯಿಂದ ಸಿಂಹ ಅದನ್ನು ತೆಗೆದರೆ ಅದರಲ್ಲಿ ಎರಡು ಬಾಳೆಹಣ್ಣುಗಳು. ನನ್ನ ಹೊಟ್ಟೆ ಕೆಟ್ಟಿರಬಹುದು ಎಂದುಕೊಂಡು ಈ ಡಯಟ್ ಎಂದು ಸಿಂಹ ಭಾವಿಸಿತು. ಆದರೆ ಮರುದಿನ ಅದೇ ಡಯಟ್. ಅದರ ಮರುದಿನ ಸಹ ಬಾಳೇಹಣ್ಣು.

ಮತ್ತೆ ಅದೇ ಸುಂದರ ಬ್ಯಾಗ್ ಕೊಡಲು ಬಂದ ಡೆಲಿವೆರಿ ಬಾಯ್‌ನನ್ನು ಹಿಡಿದ ಸಿಂಹ “ನಾನು ಯಾರೆಂದು ಕೊಂಡಿದ್ದೀಯಾ? ನಾನು ಸಿಂಹ, ಕಾಡಿನ ರಾಜ. ಏನೀ ನಿಮ್ಮ ವ್ಯವಸ್ಥೆ? ನನಗೆ ಬಾಳೆಹಣ್ಣು ಕೊಡುವುದೆಂದರೆ ಏನು ಅರ್ಥ? ನಿಮಗೇನು ಬುದ್ಧಿ ಕೆಟ್ಟಿದೆಯೆ?” ಎಂದು ಚೀರಾಡತೊಡಗಿತು.

“ಸರ್ ನೀವು ಕಾಡಿನ ರಾಜ ಎಂದು ನನಗೆ ಗೊತ್ತು. ಆದರೆ ಮಂಗನ ವೀಸಾದ ಮೇಲೆ ನಿಮ್ಮನ್ನು ಇಲ್ಲಿಗೆ ಕರೆತರಲಾಗಿದೆ. ನಾನು ಅಸಹಾಯಕ” ಎಂದ ಡೆಲಿವೆರಿ ಬಾಯ್ ವಿನೀತನಾಗಿ.

# ರಾಜೀವ್‌ಗಾಂಧಿ ಕುಡಿಯುವ ನೀರು

**- ಬಂಡಿಗನವಿಲೆ ಎಸ್. ಶ್ರೀನಿವಾಸನ್**

**ಈ**ಗೆಲ್ಲಾ ಎಲ್ಲೆಲ್ಲೂ ಮಾಹಿತಿ ತಂತ್ರಜ್ಞಾನದ ಆರ್ಭಟವೇ ಆರ್ಭಟ! Internetನ ಬಳಕೆ ಬಲ್ಲದವರಾರು? ಮಾಹಿತಿ ತಂತ್ರಜ್ಞಾನವನ್ನು ತಮ್ಮದಾಗಿಸಿಕೊಂಡಿರುವ ಈಗಿನ ಯುವಕ, ಯುವತಿಯರಂತಹ ತಮ್ಮದೇ ಆದ ಲೋಕ-ಸ್ವರ್ಗಕ್ಕೆ ಸಮಾನವಾದದ್ದು - ಸೃಷ್ಟಿಸಿಕೊಂಡಿದ್ದಾರೆ ಎನ್ನುವುದು ನಮ್ಮ ರಂಗಜ್ಜಿಗೂ ಸಹ ತಿಳಿದ ವಿಷಯ. ಅದರಲ್ಲೂ ಬೆಂಗಳೂರು ಮುಂತಾದ ನಗರಗಳಲ್ಲಿ ಈಗ ಎರಡು ತರಹ ಜನರು ಸ್ಪಷ್ಟವಾಗಿ ಗೋಚರವಾಗುತ್ತಾರೆ. ಒಂದು ಈ software ಹೈದರು. ಕೈತುಂಬಿ ಚೆಲ್ಲಿ ಹೋಗುವಷ್ಟು ದುಡ್ಡು ಓಡಾಡಿಸ್ತಾ, ಗಗನಕ್ಕೇರುತ್ತಿರುವ ಬೆಲೆಗಳಿಗೆ ಕಿಂಚಿತ್ತೂ ಹೆದರದೆ ಎಲ್ಲಾ ದುಬಾರಿ ಅಂಗಡಿ, ಹೋಟಲ್ಲುಗಳು, real estateಗಳಿಗೆ ಮುಗಿಬಿದ್ದು ಅವರನ್ನ ಇನ್ನಾ ಶ್ರೀಮಂತರನ್ನಾಗಿಸುತ್ತಿದ್ದಾರೆ. ಇನ್ನೊಂದು ಜಾತಿ, ಯಾನೆ ನನ್ನಂಥಹ Middle class ಅನ್ನಿಸಿಕೊಳ್ಳೋ ಜನ; ಈ ನತದೃಷ್ಟರು ದುಡಿದು, ದುಡಿದೂ, ದೇಶೋದ್ಧಾರ ಮಾಡಿ ಈಗ ಸಂಪೂರ್ಣ "tire" ಆಗಿ ''Retire ಆದವರು'' ಎನ್ನಿಸಿಕೊಂಡು, ದಿನೇ ದಿನೇ ಕೈಗೆಟುಕದಷ್ಟು ಗಗನಕ್ಕೇರುತ್ತಿರುವ ತರಕಾರಿ, ಅಡಿಗೆ ಪದಾರ್ಥಗಳನ್ನ ಹತಾಶೆಯಿಂದ ನೋಡ್ತಾ ತಮ್ಮ ಯೌವನ ಕಾಲವೇ ಎಷ್ಟು ಚೆನ್ನಾಗಿತ್ತು ಅಂತ ಲೊಚಗುಟ್ಟುತ್ತಾ ಜೀವನ ಸಾಗಿಸುತ್ತಿರುವುದು.

ಹಾಗಾಗಿ ಈಗ ಬೊಂಬಾಟ್ ಶೀರ್ಷಿಕೆಗಳು, ಸ್ವಾರಸ್ಯವಾದ catching slogans, ತಮ್ಮ ಮಾಲನ್ನು ಖರೀದಿ ಮಾಡಲು, ಟಿವಿನಲ್ಲಿ ಸದಾ ಬಿತ್ತರಿಸುವುದು ಸರ್ವೇ ಸಾಮಾನ್ಯವಾಗಿಬಿಟ್ಟಿದೆ.

ಹಾ! ಇಷ್ಟೆಲ್ಲಾ ಪೀಠಿಕೆ ಯಾಕೇ ಅಂದ್ರೆ ಈಗ ನನ್ನ ಹವ್ಯಾಸ ದಿನಪತ್ರಿಕೆಯನ್ನು ಓದುವಾಗ ಮೊದಲು ಸುದ್ದಿ ಶೀರ್ಷಿಕೆಗಳ ಮೇಲೆ ಕಣ್ಣೋಡಿಸಿ, ಸ್ವಾರಸ್ಯವಾದ ಶೀರ್ಷಿಕೆಗಳ ಕೆಳಗೆ ಬರೆದಿರುವ ಸುದ್ದಿಗಳನ್ನು ನಿಧಾನವಾಗಿ ಮತ್ತೊಮ್ಮೆ ಆದಿನ ಓದುವುದು. ಇದರ ಜೊತೆಗೆ, ದಾರಿಯಲ್ಲಿ ಹೋಗುತ್ತಿರುವಾಗ ನಾಮಫಲಕಗಳನ್ನು ವಿಶ್ಲೇಷಣ ದೃಷ್ಟಿಯಿಂದ ನೋಡುವುದು ಸಹ ನನ್ನ ಹುಚ್ಚು.

ಈ ಮಾಹಿತಿ ತಂತ್ರಜ್ಞಾನದ ಫಲವಾಗಿ ಶೀರ್ಷಿಕೆಗಳೂ ಸಹ ಬಹಳ ಸ್ವಾರಸ್ಯವಾಗಿರುತ್ತೆ.

ಹೀಗೆ ಆವತ್ತೂ ಸಹ ಪತ್ರಿಕೆಯನ್ನು ನೋಡುತ್ತಿದ್ದಾಗ ''ರಾಜೀವ್ ಗಾಂಧಿ ಕುಡಿಯುವ ನೀರು'' ಅಂತ ದಪ್ಪ ದಪ್ಪ ಅಕ್ಷರಗಳಲ್ಲಿ ಇದ್ದ ಸುದ್ದಿ ಶೀರ್ಷಿಕೆ ಕಣ್ಣಿಗೆ ಬಿತ್ತು. ಪರವಾಗಿಲ್ವೇ? ರಾಜೀವ್‌ಗಾಂಧಿ ನಮ್ಮ ದೇಶದ ಪ್ರಧಾನಿಯಾಗಿದ್ದವರು, ಅವರು ಕುಡಿಯುವ ನೀರು ಅಂದಮೇಲೆ ತುಂಬಾನೆ ಒಳ್ಳೆಯದಿರಬೇಕು. ಎಲ್ಲಿ, ಹೇಗೆ, ಆ ನೀರು ರಾಜೀವ್ ಗಾಂಧಿಗೆ ಸರಬರಾಜಾಗುತ್ತಿತ್ತು? ಎಂದೆಲ್ಲಾ ಪ್ರಶ್ನೆಗಳು ತಲೆಯಲ್ಲಿ ಬಂತು. ಸರಿ, ಪೂರ್ತಿ ಸುದ್ದಿ ಏನಿದೆ ಅಂತ ಮತ್ತೊಮ್ಮೆ ಆ ಸುದ್ದಿಯನ್ನು ಓದಿದೆ. ಅರೆ ರಾಜೀವ್ ಗಾಂಧಿ ಸತ್ತು ಸ್ವರ್ಗ ಸೇರಿ ಎರಡು ದಶಕಗಳೇ ಆಗ್ತಾ ಬಂತಲ್ಲಾ! ಇನ್ನೂ ''ಅವರು ಕುಡಿಯುವ' ಅಂತ ವರ್ತಮಾನದಲ್ಲಿ ಹೇಳ್ತಾ ಇದ್ದಾರಲ್ಲಾ? ನೋಡುವ ಅಂತ ಓದಿದೆ. ಆಗ ನೋಡಿ! ಆ ದಪ್ಪಕ್ಷರದ ಶೀರ್ಷಿಕೆ ಕೆಳಗೆ ಸಣ್ಣ ಅಕ್ಷರಗಳಲ್ಲಿ ''... ಯೋಜನೆಯನ್ನು ಕರ್ನಾಟಕದ ... ಊರಿನಲ್ಲಿ ಶೀಘ್ರವೇ ಜಾರಿಗೆ ತರುತ್ತೇವೆ'' ಅಂತ ಸಚಿವರ ಆಶ್ವಾಸನೆ ನೀಡಿದ್ದ ಸುದ್ದಿ ಅದಾಗಿತ್ತು. ಆಮೇಲೆ ಆ ಯೋಜನೆಗಾಗಿ ಎಷ್ಟು ಖರ್ಚು, ಎಷ್ಟು ಸಮಯ ಮುಂತಾದ ಮಾಹಿತಿಯನ್ನು ಕೊಟ್ಟಿದ್ದರು.

ಪೂರ್ತಿ ಸುದ್ದಿ ಓದಿದಮೇಲೆ ನನಗೆ ಸ್ವಲ್ಪ ಪಿಚ್ಚೆನಿಸಿತು. ಯಾಕಪ್ಪಾ ಅಂದ್ರೆ ನಾನು ಸಾಕ್ಷಾತ್ ರಾಜೀವ್ ಗಾಂಧಿ ಕುಡೀತಿದ್ದ ನೀರು ಹೇಗಿರಬಹುದು? ಏಲಕ್ಕಿ ಕೇಸರಿ ಹಾಕಿದ ನಮ್ಮ ದೇವರ ತೀರ್ಥದಂತೆ, ಸುವಾಸನಾಯುಕ್ತ ಮತ್ತು ನಮ್ಮ ನಲ್ಲಿಗಳಲ್ಲಿ ಬರುವ ಕೀಟ ಮಿಶ್ರಿತ ನೀರಿನಿಂದ ಸಂಪೂರ್ಣ ಮುಕ್ತವಾದ ನೀರು ಸರಬರಾಜು ಮಾಡ್ತಾರಲ್ಲಾ ಅನ್ನಿಸಿತು.

ಇಷ್ಟೆಲ್ಲಾ ನನ್ನ ತಲೆಯಲ್ಲಿ ತುಂಬಿದ್ದು ಆ ಶೀರ್ಷಿಕೆಯನ್ನು ಸರಿಯಾಗಿ, ಪ್ರಾಮಾಣಿಕವಾಗಿ ಬರೆಯದೇ ಇದ್ದುದರಿಂದ ಅಂತ ನನ್ನ ವಾದ. ''ರಾಜೀವ್ ಗಾಂಧಿಯ ಹೆಸರಲ್ಲಿ ಹಾಕಿಕೊಂಡಿರುವ ಕುಡಿಯುವ ನೀರಿನ ಸರಬರಾಜು ಯೋಜನೆ'' ಅಂತ ಶೀರ್ಷಿಕೆ ಇದ್ದಿದ್ದರೆ ನಾನು ''ಸ್ಸರಿ ಇನ್ನೂ ಒಂದು ಬರೀ ಆಶ್ವಾಸನೆ ಅಂತ ಆಕಳಿಸಿ ಮುಂದಿನ ಸುದ್ದಿಗೆ ಕಣ್ಣೋಡಿಸುತ್ತಿದ್ದೆನೋ ಏನೊ!

ಹಾಂ! ಫಲಕಗಳ ಬಗ್ಗೆ ನನ್ನ ಹವ್ಯಾಸ ಅಂದೆನಲ್ಲಾ, ಒಮ್ಮೆ ನನ್ನ ಆರೋಗ್ಯ ತಪಾಸಣೆಗಾಗಿ ನಗರದ ಒಂದು ಪ್ರತಿಷ್ಠಿತ ಆಸ್ಪತ್ರೆಗೆ ಹೋಗಿದ್ದೆ. ಯಥಾಪ್ರಕಾರ ಇದು ಆಸ್ಪತ್ರೇನೋ ಅಥವಾ ಜಾತ್ರೆನೋ ಅನ್ನುವಷ್ಟು ಜನಗಳು. ಅಂದ್ಹಾಗೆ ಕಾಲ ಎಷ್ಟು ಬದಲಾಗಿದೆ ನೋಡಿ! ನಾವು ಚಿಕ್ಕವರಾಗಿದ್ದಾಗ ನಮ್ಮ family ಡಾಕ್ಟರದು ಒಂದು ಶಾಪ್ ಇರುತ್ತಿತ್ತು. ಮತ್ತು ಅಲ್ಲಿಗೆ ಬರುವ ರೋಗಿಗಳು ತಲೆಗೆ ಒಂದು ಮಫ್ಲರ್ ಕಟ್ಟಿಕೊಂಡು ಕೆಮ್ಮುತ್ತನೋ, ಸೀನುತ್ತನೋ ಕುಳಿತಿರುತ್ತಿದ್ದರು. ಆದರೆ ಈಗ? ಈಗ ಆಸ್ಪತ್ರೆಗಳೆಲ್ಲಾ ಪಂಚತಾರಾ ಹೋಟೆಲ್‌ಗಳ ಹಾಗೇ ಆಗಿವೆ ಮತ್ತು ಬರುವ ರೋಗಿಗಳು, ಅದರಲ್ಲೂ ಹೆಣ್ಣು ಮಕ್ಕಳು ನೀಟಾಗಿ eye-brow trim ಮಾಡಿಕೊಂಡು, ಯಾವುದೋ ಪಾರ್ಟಿಗೆ ಬಂದವರಂತೆ ಬರುತ್ತಾರೆ. ಕುರುಚಲು ಗಡ್ಡದ, ಸಿಂಬಳ ಸುರಿಸುವ ಯಾವನೂ ಈಗ ಕಾಣುವುದಿಲ್ಲ.

ನಾನು ಆದಿನ ಡಾಕ್ಟರ್‌ನ ಹುಡುಕಿಕೊಂಡು ಆಸ್ಪತ್ರೆಯ ಹಜಾರದಲ್ಲಿ ಓಡಾಡುತ್ತಿದ್ದಾಗ ನಾನಾ ಫಲಕಗಳು ಕಣ್ಣಿಗೆ ಬಿದ್ದವು. ದೇಹದ ಪ್ರತಿಯೊಂದು ಅಂಗಕ್ಕೂ ಒಬ್ಬ ಸ್ಪೆಶಲಿಸ್ಟ್, ಆತನ ಹೆಸರಿನ ಮುಂದೆ ಉದ್ದುದ್ದ ಡಿಗ್ರಿಗಳು. ಹಾಗೂ ಆಸ್ಪತ್ರೆಯ ನಿಯಮಗಳ ಬಗ್ಗೆ ತಿಳುವಳಿಕೆ ಕೊಡುವ ಒಂದೆರಡು ಫಲಕಗಳು. ಡಾಕ್ಟರ್ಸ್‌ಗಾಗಿ ಕಾಯುತ್ತಾ ಹಾಗೇ ಆ ಫಲಕಗಳ ಮೇಲೆ ಕಣ್ಣಾಡಿಸಿದಾಗ ಒಂದು ಫಲಕದಲ್ಲಿ "The Hospital is not responsible for your valuables..." ಅಂತ ಬರೆದಿತ್ತು. ಆಗ ನನಗೆ ಅನ್ನಿಸ್ತು; ''ಅರೆ! ಮನುಷ್ಯನಿಗೆ ಎಲ್ಲಕ್ಕಿಂತ ಬೆಲೆಬಾಳುವುದು ಆರೋಗ್ಯ! ಇಂಥಹ ಬೆಲೆಬಾಳುವ ಆರೋಗ್ಯಾನ ಪುನಃ ಸಂಪಾದಿಸಲು ತಾನೇ ನಾವು ಆಸ್ಪತ್ರೆಗೆ ಬಂದಿರುವುದು ಮತ್ತು ಡಾಕ್ಟರ್ಸ್‌ಗಳಿಗೆ ನಮ್ಮ ದೇಹಾನ ಒಪ್ಪಿಸಿಬಿಡುವುದು! ಆದರೆ, ಈ ಫಲಕದ ಪ್ರಕಾರ, ಈ ಆಸ್ಪತ್ರೆಯವರು ನಮ್ಮ ಈ ಬಹು ಬೆಲೆಯುಳ್ಳ ಆರೋಗ್ಯಕ್ಕೇ ಜವಾಬ್ದಾರರಲ್ಲಾ ಅಂತ ಹೇಳುತ್ತಾರಲ್ಲಾ ಅಂತ ಅನ್ನಿಸ್ತು. "Hospital is not responsile for any valuable things you may have brought" ಅಂತ ಫಲಕ ಇದ್ದಿದ್ರೆ ಸರಿಯಾಗಿರುತ್ತಿತ್ತೇನೋ ಅಂತ ಅಂದುಕೊಂಡೆ.

ಅಷ್ಟರಲ್ಲಿ ಡಾಕ್ಟರ್ ರೂಮ್‌ನಿಂದ 'ನನ್ನ ಸರದಿ ಬಂದಿದೆಯೆಂದು' ಕರೆ ಬಂದಿದ್ದರಿಂದ ಈ ಆಲೋಚನೆಗಳನ್ನು ಅಲ್ಲೇ ಬಿಟ್ಟು ಡಾಕ್ಟರ್ ಬಳಿ ನನ್ನ ಖಾಯಿಲೆಗಳ ಬಗ್ಗೆ ಏನು ಹೇಳಬೇಕೆಂಬುದನ್ನು ಜ್ಞಾಪಿಸಿಕೊಳ್ಳುತ್ತಾ ಒಳಗೆ ನಡೆದೆ.

✵

# ಸುಳ್ಳು ನಮ್ಮಲ್ಲಿಲ್ಲವಯ್ಯಾ......!!!

**- ಜಯಪ್ರಕಾಶ ಅಬ್ಬಿಗೇರಿ**

''**ಸು**ಳ್ಳು ನಮ್ಮಲ್ಲಿಲ್ಲವಯ್ಯಾ ಸುಳ್ಳೇ ನಮ್ಮನಿ ದೇವರು'' ಎಂಬ ಈ ದಾಸರ ಪದವು ಎಲ್ಲರಿಗೂ ಪರಿಚಿತ. ಇದು ವಿಡಂಬನೆಯಲ್ಲಿ ಬರುವ ಭಕ್ತಿ ಭಾವ. ಸುಳ್ಳು ಸತ್ಯದ ವಿರುದ್ಧ ಪದ. ಆದರೆ ಸುಳ್ಳು ಸತ್ಯಕ್ಕೆ ಜನ್ಮ ನೀಡುತ್ತದೆ. ಸುಪ್ರಸಿದ್ಧ ಮನಃಶಾಸ್ತ್ರಜ್ಞ ಡಾ|| ಲಿಯೊನಾರ್ಡಕೀಲರ್ ಬಹುಕಾಲ ಸಂಶೋಧನೆ ಮಾಡಿ ನೂರರಲ್ಲಿ ತೊಂಭತ್ತೇಳು ಮಂದಿ ಸಾಮಾನ್ಯವಾಗಿ ಸುಳ್ಳುಗಾರರೆಂದು ಕಂಡು ಹಿಡಿದಿದ್ದಾನೆ. ಈ ಸುಳ್ಳುಗಳಲ್ಲಿ ಹಸಿಸುಳ್ಳು, ಬಿಸಿಸುಳ್ಳು, ಶುದ್ಧಸುಳ್ಳು, ಸುಳ್ಳೇ-ಸುಳ್ಳು ಸೇರಿವೆಯಂತೆ. ಆಫೀಸಿನಲ್ಲಿ ಬಾಸ್‌ನ ರಂಗಿನ ಅಂಗಿಯನ್ನು ಕಂಡು ನಿಮಗಿದು ಚೆನ್ನಾಗಿ ಒಪ್ಪುತ್ತದೆ ಎಂದು ಹೇಳುವುದು ಶುದ್ಧಸುಳ್ಳು. ಇದು ಫಾರಿನ್ ಮೇಡ್ ಗಾಗಲ್, ಇದರ ಮೂಲ ಬೆಲೆ 500/-ರೂ. ಆದರೆ ನಿಮಗಾಗಿ ಕೇವಲ 100/-ಕ್ಕೆ ಕೊಡುತ್ತೇನೆ ಎಂದು ದಾರಿಗುಂಟ ದುಂಬಾಲು ಬೀಳುವ ಗಾಗಲ್ ಮಾರುವ ಹುಡುಗ ಹೇಳುವುದು ಬಿಸಿಸುಳ್ಳು. ಇನ್ನು ಕುದುರೆ ಮುಖದ ಕನ್ಯೆಯನ್ನು ರಂಭೆ, ಊರ್ವಶಿ, ತ್ರಿಲೋತ್ತಮೆಗೆ ಹೋಲಿಸಿ ವರ್ಣಿಸುವುದಂತೂ ಸುಳ್ಳೇ-ಸುಳ್ಳು.

''ಸುಳ್ಳಾಡಿ ಪಾತಕವ ಗಳಿಸಬೇಡ, ಕುಳ್ಳಿರ್ದ ಸಭೆಯೊಳು ಕುತ್ಸಿತನವು ಬೇಡ, ಸಿರಿಬಂದ ಕಾಲಕ್ಕೆ ಬಲು ಮೆರೆಯಬೇಡ'' ಎಂಬ ಕವನದ ಸಾಲುಗಳು ನೆನಪಿಗೆ ಬರುತ್ತವೆ. ಅಲ್ಲದೇ ನೀನು ಹೇಳುವ ಸುಳ್ಳುಗಳು ನೂರೆಂಟಾದೊಡೆ ಚೇಳು ಕಚ್ಚುತ್ತವೆ ಸುಳ್ಳಾಡಬೇಡ ಎಂದು ಎಚ್ಚರಿಸುತ್ತಿದ್ದ ಅಜ್ಜಿಯ ಮಾತುಗಳು ಈಗಲೂಕೂಡ ನೆನಪಿಗೆಬರುತ್ತವೆ. ಆದರೆ ನಾವು ಇಂದು ಹೇಳುವ ಸುಳ್ಳಿಗೆ ಹೆದರಿ ಚೇಳುಗಳೂ ಕೂಡ ಮಾಯವಾಗಿಬಿಟ್ಟಿವೆ. ಸುಳ್ಳು ಹೇಳುವುದಕ್ಕೆ ರೈಲು ಬಿಡುವುದು ಎಂಬ ನುಡಿಗಟ್ಟೇ ನಿರ್ಮಾಣವಾಗಿದೆ. ಸುಳ್ಳಿಗೂ ರೈಲಿಗೂ ಸಂಬಂಧವನ್ನು ಯಾರು ಕಲ್ಪಿಸಿದರೊ ಗೊತ್ತಿಲ್ಲ. ಯಾಕೆ ಕಲ್ಪಿಸಿದರೆಂದು ತಿಳಿದುಕೊಳ್ಳಬೇಕು. ಒಂದು ಸುಳ್ಳನ್ನು ಮರೆಮಾಚಲು ನೂರು ಸುಳ್ಳು ಹೇಳಬೇಕಾಗುತ್ತದೆ. ಒಂದು ಸುಳ್ಳನ್ನು ಇನ್ನೊಂದು ಸುಳ್ಳಿಗೆ, ಇನ್ನೊಂದು ಸುಳ್ಳನ್ನು ಮತ್ತೊಂದು ಸುಳ್ಳಿಗೆ ರೈಲು ಬೋಗಿಯಂತೆ ಜೋಡಿಸಬೇಕಾದುದರಿಂದ ಸುಳ್ಳು ಹೇಳುವವನನ್ನು ರೈಲು ಬಿಡಬೇಡ ಎಂದು ಹೇಳುವುದು ಸರಿ ಎಂದು ತೋರುತ್ತದೆ. ಒಂದುವೇಳೆ ರೈಲು ಅಪ್ಪಿತಪ್ಪಿ ಹಳಿ ಬಿಡಬಹುದು. ಆದರೆ ಸುಳ್ಳಿನ ರೈಲು ಎಲ್ಲಿಯೂ ತಪ್ಪದೇಸೀದಾ ಹೊರಟಿರುತ್ತದೆ.

ಸುಳ್ಳಿನ ಆರಂಭದ ಬಗೆಗೆ ಒಂದಿಷ್ಟು ವಿಚಾರ ಮಾಡಲೇಬೇಕು. ಬಹುಶಃ ಸುಳ್ಳಿನ ಅಧ್ಯಾಯ ಪುರಾಣಯುಗದಿಂದಲೇ ಆರಂಭವಾಯಿತು ಎನಿಸುತ್ತದೆ. ಯಾಕೆಂದರೆ ಧರ್ಮರಾಯನ ಬಾಯಿಂದ ''ಅಶ್ವತ್ಥಾಮ ಹತಃ ಕುಂಜರ'' ಎನ್ನಿಸಿ ಕುಂಜರ ಎಂಬ ಪದವು ಕೇಳದಂತೆ ಶ್ರೀಕೃಷ್ಣಪರಮಾತ್ಮನು ಪಾಂಚಜನ್ಯ ಊದಿದ. ಸತ್ತಿದ್ದು ಅಶ್ವತ್ಥಾಮ ಎನ್ನುವ ಆನೆ. ಆದರೆ ದ್ರೋಣಾಚಾರ್ಯರು ಮಗ ಅಶ್ವತ್ಥಾಮನೇ ಸತ್ತನೆಂದುತಿಳಿದು ಅಸ್ತ್ರವನ್ನು

ಕೆಳಗಿಳಿಸಿಬಿಟ್ಟರು. ಹೀಗಾಗಿ ದಕ್ಷ ಸೇನಾಧಿಪತಿ ಇಲ್ಲದೇ ಕೌರವರು ಯುದ್ಧದಲ್ಲಿ ಸೋಲಬೇಕಾಯಿತು. ಕರ್ಣ ಪಾಂಡವರಿಗೆ ಹಿರಿಯ ಅಣ್ಣನೆಂದು ತಿಳಿದಿದ್ದರೂ ಕೂಡ ಕೃಷ್ಣ ಅವನು ನಿನ್ನ ಶತ್ರು ಎಂದು ಸುಳ್ಳು ಹೇಳಿ ಅರ್ಜುನನಿಂದಲೇ ಕೊಲ್ಲಿಸಿದ. ಅಗಸನ ಮಾತನ್ನು ಕೇಳಿದ ರಾಮ ಸೀತೆಗೆ ವನವಿಹಾರಕ್ಕೆಂದು ಕರೆದೊಯ್ಯುವುದಾಗಿ ಸುಳ್ಳು ಹೇಳಿ ಕಾಡಿಗಟ್ಟಿದ. ಅಕಸ್ಮಾತ್ ನಾರದನೇನಾದರೂ ಈಗಿನ ಕಾಲದಲ್ಲಿ ಇದ್ದಿದ್ದರೆ ಅವನಿಗೆ 'ಅಸತ್ಯ ರತ್ನ' ಎಂಬ ಬಿರುದು ಕೊಟ್ಟು ಗೌರವಿಸಬಹುದಾಗಿತ್ತು.

''ಸಾವಿರಸುಳ್ಳು ಹೇಳಿ ಒಂದು ಮದುವೆ ಮಾಡು'' ಎನ್ನುವ ಗಾದೆ ಮಾತಿದೆ. ಒಂದು ಕಲ್ಯಾಣ ಕೆಲಸವಾಗಬೇಕಾದರೆ ಸಾವಿರಸುಳ್ಳು ಹೇಳುವುದು ಸಮಂಜಸವೇ. ವರ-ಕನ್ಯೆ ತೋರಿಸುವ ಬ್ರೋಕರ್ ಮಹಾಶಯ ತನ್ನ ಬ್ಯಾಗಿನಲ್ಲಿ ಹುಡುಗಿಯರ ಫೋಟೊಗಳೊಂದಿಗೆ ಸುಳ್ಳನ್ನೂ ತುಂಬಿಕೊಂಡಿರುತ್ತಾನೆ. ಕನ್ಯೆಯ ಫೋಟೊ ತೋರಿಸುತ್ತ ಅವಳ ವಯಸ್ಸನ್ನು 10ವರ್ಷ ಕಡಿಮೆ ಮಾಡಿ ಹೇಳುವ ಕಲೆ ಅವನಿಗೆ ಕರಗತವಾಗಿರುತ್ತದೆ. ಅಲ್ಲದೇ ಇಲ್ಲದ್ದನ್ನು ಇದ್ದಂತೆ ಹೇಳುವ, ಇದ್ದದ್ದನ್ನು ಇಲ್ಲದಂತೆ ಹೇಳುವ ಕಲೆ ಅವನಿಗೆ ಕರಗತವಾಗಿರುತ್ತದೆ. ಏನೇ ಹೇಳಲಿ, ಬಿಡಲಿ ಒಂದು ಕಲ್ಯಾಣ ಕೆಲಸ ಮಾಡುತ್ತಾನಲ್ಲ ಎಂಬ ಸಮಾಧಾನ ಎಲ್ಲರಿಗೂ ಇರುತ್ತದೆ.

ನಾನು ಸತ್ಯವನ್ನು ಬಿಟ್ಟು ಬೇರೆ ಏನನ್ನೂ ಹೇಳುವುದಿಲ್ಲ ಎಂದು ಕಟಕಟೆಯಲ್ಲಿ ನಿಂತು ಭಗವದ್ಗೀತೆಯನ್ನು ಮುಟ್ಟಿ ನಮಸ್ಕರಿಸಿ ಸುಳ್ಳು ಸಾಕ್ಷಿಗಳನ್ನು ಹೇಳಲು ಪ್ರಾರಂಭಿಸುತ್ತಾನೆ ಅಪರಾಧಿ. ಈ ಎಲ್ಲ ಸುಳ್ಳುಗಳಿಗೆ ಮುಖ್ಯ ಗುರುವಾದವನು ವಕೀಲ. ಸುಳ್ಳಿಗೂ ವಕೀಲರಿಗೂ ಬಾದರಾಯಣ ಸಂಬಂಧವಿದೆ. ಸತ್ಯ ಹರಿಶ್ಚಂದ್ರನಂಗ ಜೀವನ ಮಾಡಾಕ ಹೋದರ ನಾವೂ ಕೂಡ ಹೆಂಣ್ತಿ ಮಾರಿ ಕಾಡಿಗೆ ಹೋಗು ಪ್ರಸಂಗ ಬರತೈತಿ. ಹೊಟ್ಟಿತುಂಬಿಕೋಬೇಕಂದ್ರ ಸುಳ್ಳು ಸಾಕ್ಷಿ ಸೃಷ್ಟಿಸಬೇಕಾಗತ್ತ ಅನ್ನೋದು ವಕೀಲನ ವಾದವಾಗಿರುತ್ತದೆ.

ನನ್ನ ಸಹೋದ್ಯೋಗಿ ಮಲ್ಲೇಶಿ ಸುಳ್ಳಿನ ಕಣಜವಿದ್ದಂತೆ. ಸುಳ್ಳು ನಿರ್ಮಾಣ ಮಾಡಿದ ದೇವರು ಒಂದು ಲೋಡು ಹೆಚ್ಚಿಗೆ ಸುಳ್ಳನ್ನು ನಮ್ಮ ಮಲ್ಲೇಶಿಯ ಮನೆಯಲ್ಲಿ ಇಳಿಸಿರುವನೆಂದು ಕಾಣುತ್ತದೆ. ಯಾಕೆಂದರೆ ರೈಲು ಬಿಡುವುದರಲ್ಲಿ ಇವನು ನಿಸ್ಸೀಮ. ಒಂದು ಸುಳ್ಳಿನ ಬಾಂಬ್ ಬಿಟ್ಟನೆಂದರೆ ಹುಸಿಯೇ ಇರುವುದಿಲ್ಲ. ಆಫೀಸಿನಲ್ಲಿ ಎಲ್ಲರೂ ನಂಬುವಂತೆ ಮಾಡಿಬಿಡುತ್ತಾನೆ. ಅಕಸ್ಮಾತ್ ಆಫೀಸಿಗೆ ಲೇಟಾಗಿಬಂದನೆಂದರೆ ಅವನು ಬಾಸ್ ಎದಿರು ಹೇಳುವ ಸಮಜಾಯಿಷಿ ಕೇಳಬೇಕು. ಮನೆಯಿಂದ ಬರುವಾಗ ಎಕ್ಸಿಡೆಂಟ್‌ಆಗಿ ಆಸ್ಪತ್ರೆ ಸೇರಿ, ಯಾರೋ ಸತ್ತು, ಡಿಲವರಿ ಪೇಶಂಟ್, ಪೋಲಿಸ್ ಸ್ಟೇಷನ್ - ಒಂದೇ ಎರಡೇ ಒಂದರಹಿಂದೆ ಒಂದು ಸುಳ್ಳು ಜೋಡಿಸಿ ಬಾಸ್‌ಗೆ ತಿಳಿಯದಂತೆ ಗೊಂದಲದಲ್ಲಿ ಸಿಲುಕಿಸಿ ಸಪ್ಪೆ ಮುಖ ಮಾಡಿಕೊಂಡು ನಿಲ್ಲುತ್ತಾನೆ. ಬಾಸ್‌ಗೆ ಏನೂ ತಿಳಿಯದಂತಾಗಿ ಹೋಗು ಮಾರಾಯ ಇನ್ನ ಮ್ಯಾಲೆ ಲೇಟಾಗಿ ಬರಬ್ಯಾಡ ಎಂದು ಸಮಾಧಾನ ಹೇಳಿ ಕಳಿಸುತ್ತಾರೆ.

ಇನ್ನು ರಾಜಕೀಯಕ್ಕೆ ಬಂದರಂತೂ ಮುಗಿದೇಹೋಯಿತು. ನಮ್ಮ ಜನಪ್ರತಿನಿಧಿಗಳು ಸುಳ್ಳನ್ನು ಹೇಳುವಷ್ಟು ಸುಲಭವಾಗಿ ಬೇರೆ ಏನನ್ನೂ ಹೇಳಲಾರರು. ಇವರು ಒಂದು ರೀತಿಯಲ್ಲಿ ಸುಳ್ಳಿನ ಸ್ಕ್ಯಾಂಡಲ್ ಇದ್ದಂತೆ. ಚುನಾವಣೆ ಬಂತೆಂದರೆ ಮುಗಿಯಿತು ಓಟಿನ ಆಸೆಗಾಗಿ ಸುಳ್ಳು ಆಶ್ವಾಸನೆಗಳ ಮೂಲಕ ಸ್ವರ್ಗವನ್ನು ಬಡವನ ಮನೆಯ ಮುಂದೆಯೇ ಇಳಿಸುತ್ತಾರೆ. ಇವನ್ನೆಲ್ಲ ನಂಬಿದ ನಮ್ಮ ಬಡ ಮತದಾರ ನಂಬಿ ಓಟು ಹಾಕಿ ಕಳಿಸುತ್ತಾನೆ. ಆರಿಸಿಬಂದ ಮರುದಿನವೇ ಅವರು ಕೊಟ್ಟ ಆಶ್ವಾಸನೆಗಳು ಒಂದೊಂದಾಗಿ ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುವುದಂತೂ ಅಷ್ಟೇ ಸತ್ಯವಾದುದು. ಸಂಸಾರದಲ್ಲಂತೂ ಸುಳ್ಳು ಹಾಸುಹೊಕ್ಕಾಗಿದೆ. ಮನೆಗೆ ತಡವಾಗಿ ಬಂದರೆ ಹೆಂಡತಿ ಕೇಳುವ ಪ್ರಶ್ನೆಗೆ ಗುಂಡುಮಹಾಶಯನ ಉತ್ತರ ತಯಾರಿರುತ್ತದೆ. ಅಲ್ಲದೇ ಸುಳ್ಳು ಹೇಳದ ಗಂಡ ಸಂಸಾರದಲ್ಲಿ ಎಂದೂ ಯಶಸ್ವಿಯಾಗಲಾರ ಎಂಬುದು ಅನುಭವಿಕರ ಮಾತು. ಇನ್ನು ಹೆಂಗಸರು ತಮ್ಮ ವಯಸ್ಸನ್ನು ಹೇಳುವಾಗ ಸುಳ್ಳಿನ ಪ್ರಯೋಜನ ಪಡೆಯುವುದುಂಟು. ಸುಳ್ಳನ್ನೂ ಸಹಿತ ಸತ್ಯದ ತಲೆಯ ಮೇಲೆ ಹೊಡೆದಂತೆ ಹೇಳುವ ಅವರ ಜಾಣತನವನ್ನು ಮೆಚ್ಚಲೇಬೇಕು. ಹಾಗಾಗಿಯೇ ಹೆಂಗಸರ ವಯಸ್ಸು ಕೇಳಬಾರದು, ಗಂಡಸರ ಸಂಬಳ ಕೇಳಬಾರದು ಎಂಬ ಗಾದೆ ಮಾತು ಹುಟ್ಟಿಕೊಂಡಿದೆ.

ಸಂದರ್ಭಕ್ಕನುಸಾರವಾಗಿ ಸುಳ್ಳುಹೇಳುವ ಕಲೆ ನಮಗೆ ಒಲಿದಿದೆ. ಒಂದು ಶಾಲೆಯಲ್ಲಿ ಶಿಕ್ಷಕರು ತಮ್ಮ ಅಂಗಿ ಕಳಚಿ ಹುಡುಗರಿಂದ ಬೆನ್ನು ತಿಕ್ಕಿಸಿಕೊಳ್ಳುತ್ತಿದ್ದರಂತೆ. ಅದೇ ಸಮಯಕ್ಕೆ ತಪಾಸಣೆಗೆಂದು ಅಧಿಕಾರಿಗಳು ಶಾಲೆಗೆ ಬಂದರಂತೆ. ಆಗ ತಲೆ ಓಡಿಸಿದ ಮಾಸ್ತರರು ತಮ್ಮ ದೇಹದ ಅಂಗಾಂಗಗಳನ್ನು ತೋರಿಸುತ್ತಾ ವಿವರಣೆ ಕೊಡತೊಡಗಿದರು. ಜೀವಶಾಸ್ತ್ರದ ಪ್ರಾಯೋಗಿಕ ಬೋಧನೆ ಕಂಡು ಸಾಹೇಬರು ಹಿಗ್ಗಿ ಹೀರೆಕಾಯಿಯಾಗಿ ಮಾಸ್ತರರ ಕಲಿಸುವಿಕೆಗೆ ಮೆಚ್ಚಿ ಬಡ್ತಿಗಾಗಿ ಶಿಫಾರಸ್ಸು ಮಾಡಿದರಂತೆ.

ಹೀಗೆ ಹೇಳುತ್ತಾ ಹೋದರೆ ಸುಳ್ಳಿನಕಥೆ ಮುಗಿಯದು. ಶಾಲೆಯಲ್ಲಿ, ಕಛೇರಿಯಲ್ಲಿ, ಮಾರ್ಕೆಟ್‌ನಲ್ಲಿ, ರಾಜಕೀಯದಲ್ಲಿ, ಹೀಗೆ ಎಲ್ಲ ರಂಗದಲ್ಲೂ ಕೂಡ ಸುಳ್ಳಿನ ಸಂತೆ ನಡೆಯುತ್ತಲೇ ಇರುತ್ತದೆ. ಹೀಗಾಗಿ ಸಮಯಕ್ಕೊಂದು ಸುಳ್ಳು ಹೇಳುವ ಪ್ರಸಂಗ ಬಂದಿದೆ. ಸುಳ್ಳು ಸರ್ವಾಂತರ್ಯಾಮಿಯಾದುದು. ಅಂಗೈಯಲ್ಲಿ ಆಕಾಶ ತೋರಿಸಿ ತಮ್ಮ ಉದ್ಧಾರ ಮಾಡಿಕೊಳ್ಳುವ ಜನರೇ ಹೆಚ್ಚಾಗಿದ್ದಾರೆ.

ಒಟ್ಟಿನಲ್ಲಿ ಹೇಳುವುದಾದರೆ ಇಂದಿನ ದಿನಮಾನದಲ್ಲಿ ಸುಳ್ಳು ಸೇರಿಸದೇ ಮಾತನಾಡಲಿಕ್ಕೆ ಬರದು. ಹಾಗಂತ ಸುಳ್ಳೇ ಮಾತಾಗಬಾರದು. ಅಲ್ಲದೆ ಊಟದಲ್ಲಿನ ಉಪ್ಪಿನಕಾಯಿಯಂತೆ ಒಂದು ಒಳ್ಳೆಯ ಕೆಲಸವಾಗುವ ಸಂದರ್ಭದಲ್ಲಿ ಯಾರಿಗೂ ನೋವಾಗದಂತೆ ಸುಳ್ಳು ಹೇಳಿದರೆ ತಪ್ಪೆನಿಸದು. ಅತಿಯಾದರೆ ಅಮೃತವೂ ವಿಷವಂತೆ. ಹಾಗೆಯೇ ಸುಳ್ಳು ಹೇಳುವ ಹಣೆಪಟ್ಟಿ ಕಟ್ಟಿಕೊಂಡವನು ನಿಜ ಹೇಳಿದರೂ ಕೂಡ ಯಾರೂ ನಂಬಲಾರರು. ಹಾಗಾಗದಂತೆ ಎಚ್ಚರವಹಿಸಿ ಸುಳ್ಳನ್ನು ನಮ್ಮ ಮಾತಿನಲ್ಲಿ ಅಳವಡಿಸಿಕೊಂಡರೆ ಸುಳ್ಳಿಗೂ ಬೆಲೆ ಬಂದೀತು!!!

✵




Since 1998
**Whisper Hearing Aids**
Pvt. Ltd.
1030/13, 25 main, 39 cross,
4th 'T' block, Jayanagara, Bengaluru

SIEMENS
Authorised Hearing Care Centre

Avail **FREE** supply of batteries for a year on purchase of hearing aids for this week.
10am - 1:30pm, 5pm - 8pm
Appointment : 26640571, 9741765454

ಕಿವಿ – ಕೇಳುವ ಅಂಗವೇ ಆದರೂ ಅದರ ಒಂದು ಭಾಗ ನಮ್ಮ ದೇಹದ ಸಮತೋಲನ ಮಾಡುವ ಕೆಲಸ ನಿಭಾಯಿಸುತ್ತದೆ. ಕೇಳಿಸುವ ಭಾಗಕ್ಕೆ ತೊಂದರೆಯಾದರೆ ಕಿವುಡುತನ ಬರುತ್ತದೆ, ಹಾಗೆಯೇ ಉಳಿದ ಭಾಗಕ್ಕೆ ತೊಂದರೆಯಾದರೆ ತಲೆಸುತ್ತು ಕಿವಿಮೊರೆತ ಉಂಟಾಗುತ್ತದೆ. ಕಿವಿಮೊರೆತಕ್ಕೆ ಉಳಿದಂತೆ ಹಲವಾರು ಕಾರಣಗಳು ಇದ್ದರೂ ಈ ಸೂಕ್ಷ್ಮವಾದ ಅಂಗದ ತೊಂದರೆಯೇ ಬಹುಮಟ್ಟಿನ ಕಾರಣ. ಬಹಳ ಸಲ ಈ ತೊಂದರೆ ಔಷಧಿಗೆ ಒಗ್ಗದು. ಮೊರೆತ ಮುಚ್ಚುವಂತೆ ಶಬ್ದವನ್ನು ಹಿಯರಿಂಗ್ ಏಡ್ ಮೂಲಕ ಕೊಡಬೇಕಾಗುತ್ತದೆ. ಸದ್ಯಕ್ಕೆ ಅದೇ ಉತ್ತರ. ಕಿವಿಯ ಸೂಕ್ಷ್ಮತೆ ಕಡಿಮೆಯಾದ ನಂತರ ಹಿಯರಿಂಗ್ ಏಡ್ ಧರಿಸಿ ಎಲ್ಲರಂತೆಯೇ ಮಾತಿನ ಚಟುವಟಿಕೆಯಲ್ಲಿ ಭಾಗವಹಿಸಬೇಕು, ಅದು ಸಾಮಾನ್ಯ ಜೀವನ.

**ಡಾ|| ಜಿ. ಪುರುಷೋತ್ತಮ ಇಡಿ.ಡಿ.**
**ವಾಕ್ – ಶ್ರವಣದೋಷ ತಜ್ಞ, ವಿಸ್ಪರ್ ವಾಕ್ – ಶ್ರವಣ ಕೇಂದ್ರ**

# ಚಿಕ್ಕ ಚಿಕ್ಕ ಕಥೆಗಳು

- ಸುಕೇಶವ

## ಯಾರು ಶ್ರೀಮಂತರು

ಎದುರಿಗೆ ಬಂದವನನ್ನು ಬಹಳ ಶ್ರೀಮಂತನೆಂದೆಣಿಸಿದ ರಾಜು ವಿಚಾರಿಸಿದಾಗ, ಶಂಕರ ಹೇಳಿದ - ನಾನು ಹುಟ್ಟಿದ್ದು ಸದಾಶಿವನಗರದಲ್ಲಿ, ಬೆಳೆದಿದ್ದು ಕೋರಮಂಗಲ, ಇಂದಿರಾನಗರ, ಹೆಚ್.ಎಸ್.ಆರ್.ಲೇಔಟ್ ಮುಂತಾದ ಏರಿಯಾಗಳಲ್ಲಿ ಅಂತ. ಈಗೆಲ್ಲಿರೋದು ಅಂತ ಕೇಳಿದ್ರೆ ಕಲಾಸಿಪಾಳ್ಯದಲ್ಲಿ ಅಂದ. ಅಷ್ಟೆಲ್ಲ ಪಾಷ್ ಲೊಕಾಲಿಟಿನಲ್ಲಿದ್ದು ಈಗ ಕಲಾಸಿಪಾಳ್ಯದಂತ ಏರಿಯಾದಲ್ಲಿರೋದು ಕಷ್ಟ ಅಲ್ವ ಅಂತ ಕೇಳಿದ್ರೆ, ಏನಿಲ್ಲ ನಾವು ಎಲ್ಲಿರ್ತೀವೋ ಅಲ್ಲಿ ಅಡ್ಜಸ್ಟ್ ಆಗಿಬಿಡ್ತಿವಿ, ಅದೂ ಅಲ್ದೆ ನಮ್ಮ ತಂದೆ ತಾಯಿ ಇಬ್ಬರದೂ ಟ್ರಾನ್ಸ್‌ಫರಬಲ್ ಜಾಬು, ಅವರು ಎಲ್ಲಿ ಹೋದ್ರೆ ಅಲ್ಲಿ ಹೋಗಲೇಬೇಕಲ್ಲ ಅಂದ. ನಿಮ್ಮ ತಂದೆ ತಾಯಿ ಎಲ್ಲಿ ಕೆಲಸ ಮಾಡ್ತಿರೋದು ಅಂದ್ರೆ, ಅವರಿಬ್ಬರೂ ಕೂಲಿ ಕಾರ್ಮಿಕರು ಅಂದ ಶಂಕರ.

## ಸುಖ ಎಲ್ಲಿದೆ

ಬಹಳ ಸಂತೋಷವಾಗಿರುವ ರಾಮಯ್ಯನನ್ನು ನಿಮ್ಮ ಸಂತೋಷದ ಗುಟ್ಟೇನು ಅಂತ ಕೇಳಿದರೆ ಆಗಿರೋ ಮೂರು ಮದುವೆ ಅಂದ. ಅಲ್ಲ ಒಂದು ಮದುವೇಗೇ ನಾನು ಸುಸ್ತು ಹೊಡೆದಿರುವಾಗ ಅದ್ಹೇಗೆ ಮೂರು ಮೂರು ಮದುವೆಯಾಗಿ ನೀವು ಸುಖವಾಗಿದೀರ ಅಂತ ಕೇಳಿದರೆ, ಮೊದಲ ಹೆಂಡ್ತಿ ಸತ್ತಳು, ಎರಡನೆ ಮದುವೆಯಾದೆ, ಎರಡನೆ ಹೆಂಡತಿ ಸತ್ತಳು, ಮೂರನೇ ಮದುವೆಯಾದೆ ಈಗ ಸುಖವಾಗಿದೀನಿ ಅಂದ. ಹೋಗ್ಲಿ ಬಿಡಿ ಮೂರನೇ ಹೆಂಡ್ತಿ ಜೊತೆನಾದ್ರೂ ಸುಖವಾಗಿದೀರಲ್ಲ ಅಂದ್ರೆ, ಅದು ಹಾಗಲ್ಲ, ಈಗೊಂದು ತಿಂಗಳ ಹಿಂದೆ ಮೂರನೇ ಹೆಂಡತಿಯೂ ಸತ್ತಳು. ಹೀಗಾಗಿ ನಾನು ಈಗ ಸುಖವಾಗಿದೀನಿ ಅಂದ.

## ಹಾಡಿನ ಶಕ್ತಿ

ನಾಗರಾಜನ ಮಗಳು ಹಾಡ್ತಾಳೆ. ಹಾಡಿ ಹಾಡಿ ಜನರನ್ನ ಸಾಯಿಸ್ತಾಳೆ. ಅವಳು ಹಾಡಿದಾಗ ಅವರ ಮನೆ ಮುಂದೆ ಕತ್ತೆಯೊಂದು ಸತ್ತುಬಿತ್ತು. ಮನೆ ಬಾಡಿಗೆ ಕೇಳಲು ಬಂದ ಮಾಲೀಕ ಮನೆ ಮುಂದೇ ಸತ್ತ. ಭಿಕ್ಷೆ ಕೇಳಲು ಬಂದ ಭಿಕ್ಷುಕ ಅವಳ ಹಾಡು ಕೇಳಿ ಸತ್ತ. ಆದರೆ ನಾಗರಾಜ ಇವ್ಯಾವುದನ್ನೂ ಒಪ್ಪದೇ ಇವೆಲ್ಲ ಕೇವಲ ಕಾಕತಾಳೀಯ ಅಂದ. ಬೇಕಾದ್ರೆ ನೀನು ಬಂದು ನನ್ನ ಮಗಳ ಹಾಡು ಕೇಳು ಅಂದಾಗ ಶ್ರೀಪತಿ, ನಾನು ಈಗ ಬಂದಿದ್ದು ಅದಕ್ಕೇ, ಆದ್ರೆ ಹಾಡು ನಾನು ಕೇಳಲ್ಲ, ನನ್ನ ಹೆಂಡ್ತಿನ ನಿಮ್ಮ ಮನೆಗೆ ಕಳಿಸ್ತೀನಿ ಅವಳ ಮುಂದೆ ನಿಮ್ಮ ಮಗಳಿಗೆ

ಹಾಡಲು ಹೇಳಿ ಅಂದು ಹೊರಟ. ಎಲ್ಲಿಗೆ ಹೊರಟಿರಿ ಅಂತ ಕೇಳಿದ್ರೆ ಹೇಗಾದ್ರೂ ಆಗ್ಲಿ ನಾಲ್ಕು ಜನ ಬ್ರಾಹ್ಮಣರಿಗೆ ಒಬ್ಬರು ಪುರೋಹಿತರಿಗೆ ಹೇಳಿಬರ್ತಿನಿ ಅಂದ,

## ಕಳ್ಳನ ಹೆಂಡತಿ

ಕಳ್ಳತನ ಮಾಡ್ತಿದ್ದ ನಾಗಣ್ಣನಿಗೆ ಆ ಕೆಲಸ ಬಹಳ ಸಲೀಸು. ಅವನಿಗೆ ಜೈಲಲ್ಲಿರೋದೇ ಒಂದು ರೀತಿ ಸಂತೋಷ. ಜೈಲಿಗೆ ಹೋಗದೇ ಹೊರಗೇ ಇದ್ರೆ ಚಡಪಡಿಸುತ್ತಿರುತ್ತಾನೆ. ಇದನ್ನು ಕೇಳಿದ ಸುರೇಶ ಹುಷಾರಪ್ಪ , ಗಾದೆನೇ ಕೇಳಿಲ್ವಾ ಕಳ್ಳನ ಹೆಂಡತಿ ಎಂದಿದ್ರೂ ಮುಂಡೆ ಅಂತ. ನಿನ್ನ ಹೆಂಡ್ತಿಗೋಸ್ಕರನಾದ್ರೂ ನೀನು ಹುಷಾರಾಗಿರಬೇಕು ಅಂದ್ರೆ, ನಾಗಣ್ಣ ಅದಿಕ್ಕೇ ನಾನು ಮದುವೆನೇ ಆಗಿಲ್ಲ, ಒಂದೊಂದು ಏರಿಯಾದಲ್ಲಿ ಒಬ್ಬೊಬ್ಬಳನ್ನ ಇಟ್ಕೊಂಡಿದೀನಿ ಅಂದ.

## ಹೆಂಡ್ತಿ ಅಂದ್ರೆ ಹೇಗಿರಬೇಕು

ಹೆಂಗಸರ ವಿಚಾರದಲ್ಲಿ ಬಹಳ ಅಸಮಾಧಾನಗೊಂಡಿದ್ದ ಶ್ರೀಪತಿ ಇಂಥಾ ಹೆಂಗಸರ ಜೊತೆ ಸಂಸಾರ ಮಾಡೋದು ಹೇಗೆ ಅಂತ ತಲೆ ಕೆಡಿಸಿಕೊಂಡಿದ್ದ. ಸುಬ್ರಾಮು ಅವನಿಗೆ ಸಮಾಧಾನ ಹೇಳಿದ. ಶ್ರೀಪತಿ ಕೇಳಿದ ಎಲ್ಲ ಅನುಮಾನಗಳಿಗೂ ಸಮಾಧಾನ ಹೇಳಿದ ಸುಬ್ರಾಮು, ಯಾಕೆ ನಿನ್ನ ಹೆಂಡ್ತಿ ನಿನ್ನನ್ನ ತುಂಬಾ ಗೋಳು ಹುಯ್ಕೊತಾಳಾ ಅಂತ ಕೇಳಿದ್ರೆ, ಇಲ್ಲ ನನಗಿನ್ನೂ ಮದುವೆನೇ ಆಗಿಲ್ಲ, ಎಂಥಾ ಹೆಂಗಸನ್ನ ಮದುವೆಯಾಗಬೇಕು ಅಂತ ಯೋಚಿಸಿ ಯೋಚಿಸಿ ತಲೆ ಕೆಟ್ಟುಹೋಯ್ತು ಅಂದ.

✵

---

### ಯಾವುದು ಸೂಕ್ತ

30 ವರ್ಷಗಳ ಸರ್ಕಾರಿ ಸೇವೆಯಿಂದ ಮೊನ್ನೆಮೊನ್ನೆ ರಾಯರಿಗೆ ರಿಟೈರಾಯಿತು. ಸದಾ ಅವರ ಮನೆಯ ಮುಂದೆಯೇ ಮಲಗಿರುತ್ತಿದ್ದ ನಾಯಿ ಇದ್ದಕ್ಕಿದ್ದಂತೆ ಕಾಣೆಯಾಯಿತು. ಒಂದು ದಿನ ಕುತೂಹಲದಿಂದ ಓಡಿಬಂದ ಪಕ್ಕದ ಮನೆಯಾಕೆ ತುಂಬಾ ಗಾಬರಿಯಿಂದ ಏನ್ರೀ ಸಾವಿತ್ರಮ್ಮ ನಿಮ್ಮನೇಲಿ ನಾಯಿ ಇತ್ತಲ್ಲ ಈಗ ಅದು ಕಾಣಿಸ್ತನೇ ಇಲ್ಲ, ಕಾರ್ಪೊರೇಷನ್‌ನವರು ಏನಾದ್ರು ಹಿಡ್ಕೊಂಡ್ ಹೋದ್ರಾ ಅಂತ ಕೇಳಿದರು. ಅದಕ್ಕೆ ಸಾವಿತ್ರಮ್ಮ ನಮ್ಮೆಜಮಾನರಿಗೆ ರಿಟೈರ್ ಆಯ್ತಲ್ಲ ಅದಿಕ್ಕೆ ಸುಮ್ನೆ ಎರಡೆರಡು ಯಾಕೆ ಒಂದೇ ಸಾಕು ಅಂತ ನಾಯಿನ ಮಾರಿಬಿಟ್ಟೆ ಅಂದ್ರು. ಅದಕ್ಕೆ ಪಕ್ಕದ ಮನೆಯಾಕೆ ಒಂದೇ ಸಾಕು ಅನ್ನೋ ಹಾಗಿದ್ರೆ ನಾಯಿನೇ ಇಟ್ಕೊಬಹುದಿತ್ತು ಅನ್ನೋದೇ.

- ಸುಕೇಶವ

# ಕ್ರಿಕೆಟ್ಟಿನಲ್ಲಿ ಕಾಮ್ರೇಡರಿ....

- ಎಚ್. ಗೋಪಾಲಕೃಷ್ಣ

ಸಾಮಾನ್ಯವಾಗಿ ಆಟಗಾರರಲ್ಲಿ ಕ್ರೀಡಾಮನೋಭಾವ ಅತ್ಯುತ್ತಮವಾಗಿರುತ್ತದೆ ಎಂಬುವುದು ಅನುಭವದ ಮಾತು. ಈ ವಿಷಯಕ್ಕೆ ಬಂದರೆ ಕ್ರಿಕೆಟ್ ಆಟಗಾರರಲ್ಲಿ ಇದು– ಕ್ರೀಡಾಮನೋಭಾವ – ತುಂಬಾ ಉತ್ತಮ ಮಟ್ಟದಲ್ಲಿ ಇರುತ್ತದೆ. ನಾನು ಕಾಲೇಜಿನಲ್ಲಿ ಓದುತ್ತಿದ್ದ ಕಾಲದಲ್ಲಿ ವಿಶ್ವವಿದ್ಯಾಲಯಗಳಿಗೆ ಎಂದೇ ಒಂದು ಅಖಿಲ ಭಾರತ ಮಟ್ಟದ ಪಂದ್ಯಾವಳಿ ನಡೆಯುತ್ತಿತ್ತು. ಈಗಲೂ ಅದು ಇದೆ. ವಿಶ್ವವಿದ್ಯಾಲಯಗಳಿಗೆ ಅಂತರ ವಿಶ್ವವಿದ್ಯಾಲಯ ಟೂರ್ನಮೆಂಟು ಇದ್ದು ಅದರಲ್ಲಿ ಆಯ್ದ ಆಟಗಾರರು ಭಾಗವಹಿಸುತ್ತಿದ್ದರು. ಇಂತಹ ಒಂದು ಪಂದ್ಯದಲ್ಲಿ ಅತಿ ಹೆಚ್ಚಿನ ವಿಕೆಟ್ ಪಡೆದವರು, ಅತಿ ಹೆಚ್ಚು ರನ್ನುಗಳಿಸಿದವರು, ಅತಿ ಹೆಚ್ಚು ಕ್ಯಾಚು ಹಿಡಿದವರು ಎಂದು ಒಂದು ಪಟ್ಟಿ ತಯಾರಿಸಿ ಮೊದಲ ಸ್ಥಾನದಲ್ಲಿರುವವರಿಗೆ ಮುಂದೆ ಓದಿಗೆ ವಿಶೇಷ ನೆರವು ನೀಡುವುದು ಒಂದು ಸಂಪ್ರದಾಯವಾಗಿತ್ತು. ಒಂದು ಪಂದ್ಯ ನನಗಿನ್ನೂ ನೆನಪಿದೆ. ಇಬ್ಬರು ಬೋಲರುಗಳು ಸರಿಸಮಾನವಾಗಿ ವಿಕೆಟ್ಟು ಪಡೆದಿದ್ದರು. ಫೈನಲ್ ಮ್ಯಾಚು ಬಾಕಿಯಿತ್ತು. ಫೈನಲ್ ಮ್ಯಾಚಿನಲ್ಲಿ ಹೆಚ್ಚು ವಿಕೆಟ್ ಪಡೆದವರು ಮುಂದೆ ಉದ್ಯೋಗಕ್ಕೋ ಅಥವಾ ಹೆಚ್ಚಿನ ಓದಿಗೋ ನಿರ್ದೇಶನಗೊಳ್ಳುವ ಸಾಧ್ಯತೆಯೂ ಇತ್ತು. ಹೆಚ್ಚು ವಿಕೆಟ್ ಪಡೆದವರಲ್ಲಿ ಒಬ್ಬ ಸಾಮಾನ್ಯ ಕುಟುಂಬದಿಂದ ಬಂದವನು, ಮತ್ತೊಬ್ಬ ಇವನಿಗಿಂತಲೂ ಹೆಚ್ಚು ಆರ್ಥಿಕ ಬಲವಿದ್ದವನು. ಫೈನಲ್ ಪಂದ್ಯದ ಹಿಂದಿನ ದಿವಸ ಇಬ್ಬರೂ ಕೂತು ತಾವು ಮುಂದೆ ಇಚ್ಛಿಸುವ ಹಾದಿಯ ಬಗ್ಗೆ ಮಾತನಾಡುತ್ತಿದ್ದರು. ಆರ್ಥಿಕವಾಗಿ ಬಲವಾಗಿದ್ದವನು ತಾನು ಮುಂದೆ ಓದಲಿರುವ ಸಂಗತಿಯ ಬಗ್ಗೆ ಹೇಳಿಕೊಂಡ. ಅವನೆದುರಾಳಿ ಮುಂದೆ ಓದಲು ಮನೆಯಲ್ಲಿ ಬಡತನ, ತಾನು ಉದ್ಯೋಗಕ್ಕೆ ಸೇರಿ ಸಂಬಳ ತಂದು ಮನೆಯವರ ಜವಾಬ್ದಾರಿ ಹೊರಬೇಕಾಗಿರುವ ಸಂಗತಿ ತಿಳಿಸಿದ. ಇಬ್ಬರೂ ಕೈಕುಲುಕಿ ಎದ್ದರು. ಮಾರನೇ ದಿವಸ ಪಂದ್ಯ ಪ್ರಾರಂಭವಾಯಿತು. ಇಬ್ಬರೂ ಒಂದೇ ಟೀಮನ್ನು ಪ್ರತಿನಿಧಿಸುತ್ತಿದ್ದಾರೆ. ಮೊದಲನೆಯವನು ಬೋಲಿಂಗ್ ಮಾಡಿ ಮೂರುವಿಕೆಟ್ ಕಬಳಿಸಿದ್ದ. ಇಬ್ಬರು ರನ್ ಔಟಾಗಿದ್ದರು. ಉಳಿದಿರುವ ಐದು ವಿಕೆಟ್ಟಿನಲ್ಲಿ ಬಡ ಆಟಗಾರ ನಾಲ್ಕನ್ನಾದರೂ ಪಡೆಯಲೇಬೇಕು: ರನ್ ಔಟಾದರೆ ಆ ವಿಕೆಟ್ಟುಗಳು ಇವನ ಲೆಕ್ಕಕ್ಕೆ ಸಿಗದು. ಹತಾಶನಾಗಿ ಲಂಚ್ ಸಮಯದಲ್ಲಿ ಬಡವ ತಲೆ ತಗ್ಗಿಸಿಕೊಂಡು ಪೆವಿಲಿಯನ್ ಒಳಸೇರಿದ. ಇವನ ಒಳಗುದಿಯನ್ನು, ಸಂಕಟವನ್ನು ಉಳಿದ ಆಟಗಾರರು ಮೌನವಾಗಿಯೇ ನೋಡುತ್ತಿದ್ದರು. ಇವನ ಚಿಂತಿತ ಮುಖ ನೋಡಿ ನಾಲ್ಕು ವಿಕೆಟ್ ತೆಗೆದುಕೊಂಡಿದ್ದ ಬೋಲರು ಹತ್ತಿರ ಬಂದ. ಯೋಚಿಸಬೇಡ, ಏನಾದರೂ ಮಾಡೋಣಾ.... ಅಂದ. ಮತ್ತೆ ಆಟ ಪ್ರಾರಂಭವಾಯಿತು. ನಾಲ್ಕು ವಿಕೆಟ್ಟು ತೆಗೆದುಕೊಂಡಿದ್ದವನು ಅವತ್ತು ಒಳ್ಳೇ ಫಾರ್ಮು. ಅವನ ಕೈಗೇ ಮತ್ತೆ ಬೋಲ್ ಮಾಡಲು ಚೆಂಡುಬಂದಿತು. ನಾಲ್ಕು ಬೋಲು ವೈಡು ಎಸೆದ.


ಎರಡು ಲೂಸು ಬಾಲು ಹಾಕಿದ. ವಿಕೆಟ್ ಪಡೆಯಬಾರದು ಎಂದು ಆತ ನಿರ್ಧರಿಸಿದಹಾಗಿತ್ತು. ಮತ್ತೆ ಬೋಲಿಂಗು ಬಡ ಆಟಗಾರನಿಗೆ ಸಿಕ್ಕಾಗ ಆಟಗಾರರು ಅವನಿಗೆ ಎಲ್ಲಿಲ್ಲದ ಉತ್ತೇಜನವನ್ನು ನೀಡಿದರು. ಅವರ ಬೆಂಬಲ ಹೇಗೆ ದೊರಕಿತು ಅಂದರೆ ಮೂರು ಓವರಿನಲ್ಲಿ ಮೂರು ವಿಕೆಟ್ಟು ಗಳಿಸಿದ್ದ. ಮುಂದಿನ ಓವರು ಮತ್ತೆ ಮೊದಲ ಹುಡುಗನದ್ದು. ಎರಡು ಬಾಲು ವೈಡು. ಕ್ಯಾಪ್ಟನ್ನಿಗೆ ಕೋಪ. ಯಾಕೋ ಹೀಗೆ ಮಾಡ್ತಿದೀ?

ನನಗೆ ವಿಕೆಟ್ಟು ಬೇಡ ಅವನಿಗೆ ಬರಲಿ...

ಎದುರಾಳಿ ಹುಡುಗ ಹೆಚ್ಚು ವಿಕೆಟ್ಟು ಪಡೆಯಲು ಈತ ಸಹಕರಿಸಿದ್ದು ಹೀಗೆ. ನೋಡಿ ನನಗೆ ಮನೆಕಡೆ ಚೆನ್ನಾಗಿದೆ, ಪಾಪ ಅವನ ಮನೇಲಿ ತೊಂದರೆ, ಅವನಿಗೆ ಸಿಕ್ಕಬಹುದಾದ ಅವಕಾಶ ನಾನು ಪಡೆಯೋದು ಸರಿಯೇ ಅಂತ ಅನಿಸಿಬಿಟ್ಟಿತು.... ಅನಂತರ ಈತ ಹೇಳಿದ! ಇಂತಹ ವಿಷಯದಲ್ಲಿಯೇ ಅಲ್ಲದೇ ಕಾಮ್ರೇಡರಿ ಇನ್ನೂ ಚೆನ್ನಾಗಿ ನಡೆದಿರುವ ಸಂಗತಿಗಳು ಹಲವಿವೆ. ಅದರಲ್ಲಿ ಒಂದು ಇನ್ನೂ ನೆನೆಪಿನಲ್ಲಿ ಉಳಿದಿರುವುದು – ಅದೇ ತಾನೇ ಕಿರಿಯರ ಟೀಮಿಗೆ ಆಯ್ಕೆಗೊಂಡ ಒಬ್ಬನಿಗೆ ಟೀಮಿನ ಇತರರು ನೆರವಾದದ್ದು. ಅವನ ಡ್ರೆಸ್ಸಿನಿಂದ ಹಿಡಿದು ಅವನಿಗೆ ಬೇಕಾಗಿದ್ದ ಸಕಲವನ್ನೂ ಗೆಳೆಯರು ನೋಡಿಕೊಂಡಿದ್ದರು. ಇನ್ನೂ ತಮಾಷೆ ಗೊತ್ತಾ? ಹಲವಾರು ಜನ ಕ್ರಿಕೆಟ್ಟಿನಲ್ಲಿ ಮೇರು ಸ್ಥಾನ ಅಪೇಕ್ಷಿಸುತ್ತಾರೆ ಮತ್ತು ಅವರವರ ಆಟಗಳು ಅವರು ಈ ಮಟ್ಟಕ್ಕೆ ಏರಬಹುದು ಎನ್ನುವ ಸೂಚನೆಯನ್ನೂ ಕೊಟ್ಟಿರುತ್ತೆ. ಆದರೆ ಕ್ರಿಕೆಟ್ಟಿನ ಒಳ ಹೊರ ರಾಜಕೀಯದಲ್ಲಿ ಹಲವು ಸಹಸ್ರ ಪ್ರತಿಭೆಗಳು ಬೆಳಕನ್ನೇ ಕಾಣುವುದಿಲ್ಲ. ಆದರೂ ಬೆಳಕನ್ನು ಕಾಣದಿರುವ ಪ್ರತಿಭಾವಂತರು ಅದರ ಬಗ್ಗೆ ತಲೆಯನ್ನೇ ಕೆಡಿಸಿಕೊಳ್ಳದೇ ತಮ್ಮನ್ನು ತುಳಿದು ಮೇಲೇರಿದವರಿಗೂ ಶುಭ ಹಾರೈಸುತ್ತಾರೆ. ಅಬ್ಬಾ ಎಂಥಹ ಕಾಮ್ರೇಡರಿ ಇವರದ್ದು ಅನಿಸುತ್ತದೆ!

✵

---




ಏನೇ ಆದ್ರೂ ನಾಳೆವರ್ಗೂ ಆಡ್ಬೇಕು. ರಾತ್ರಿ ಇಲ್ಲೇ ಮಲಗಿದ್ರೂ ಪರವಾಗಿಲ್ಲ

# ಕಾಮನಬಿಲ್ಲಿನ ಸೇತುವೆಯ ಬದಿಯಲ್ಲಿ...

**- ವಾಣೀ ಸುರೇಶ್**



– "**ನೀ**ವುಗಳು ನಿಮ್ಮ ಸುಜೂನ್ನೂ ಕರೆದುಕೊಂಡು ಯು.ಎಸ್.ಗೆ ಹೋಗ್ತಿದ್ದೀರಂತೆ!"

– "ಅದ್ಯಾಕೆ?"

– "ಅದರ ಯೋಗವೇ ಯೋಗ!"

– "ಅದನ್ನ ಏರೋಪ್ಲೇನಲ್ಲಿ ಬಾತ್ರೂಮಿಗೂ ಕರೆದುಕೊಂಡು ಹೋಗ ಬಹುದಂತೋ?"

– "ತಿಂದ ಹಾಗಲ್ಲ ಉಂಡಹಾಗಲ್ಲ, ಸುಮ್ಮನೆ ದುಡ್ಡು ದಂಡ"

– "ಇದು ನಾಕು ಬೀದೀಗೆ ಕೇಳಿಸೋ ಹಾಗಿರೋ ಅದರ ಧ್ವನೀಲಿ ಬೊಗಳುಕ್ಕೆ ಶುರು ಮಾಡಿದರೆ ಪ್ಲೇನಲ್ಲಿರೋ ಉಳಿದವರ ಗತಿ ಏನಂತೆ?"

– "ಒಳ್ಳೇ ಹುಚ್ಚು! ಅಲ್ಲಿ ಮನೆಗಳಲ್ಲಿ ಇಲ್ಲೀ ತರಹ ಗಾರೆ ನೆಲ ಅಲ್ಲ, ಬರೀ ಕಾರ್ಪೆಟ್ಟು ಇದು ಏನಾದರೂ ಮಾಡಿಗೀಡಿದ್ರೆ.."

– "ಅದಕ್ಕೂ ಟಿಕೆಟ್ ಇರುತ್ಯೇ? ಎಷ್ಟಾಗ್ತತಂತೋ!?"

– "ಅಲ್ಲಿ ನಾಯಿಗಳನ್ನ ಎಲ್ಲೀಂದರಲ್ಲಿ ವಾಕ್ ಮಾಡಿಸೋ ಹಾಗಿಲ್ಲವಂತೆ. ಅದು ಎಲ್ಲಿ ಏನು ಮಾಡಿದರೂ ನೀವೇ ಕ್ಲೀನ್ ಮಾಡಬೇಕಂತೆ, ನಿಮಗೆ ಗೊತ್ತೂ ತಾನೇ?"

ಅಬ್ಬಾ, ಒಂದೇ ಎರಡೇ ಮಾತುಗಳನ್ನು ನಾವು ಕೇಳಿದ್ದು – ನಮ್ಮ ಸುಜೂನ್ನ ಅಮೇರಿಕೆಗೆ ನಮ್ಮ ಜೊತೆ ಕರ್ಕೊಂಡು ಹೊರಟಾಗ! ...ಬಿಡಿ, ಅವರವರ ಮರ್ಜಿ...

ಆದರೆ, ಇದಕ್ಕೆ ತದ್ವಿರುದ್ಧವಾದ ಅನುಭವ ಪಾಶ್ಚಿಮಾತ್ಯ ದೇಶಗಳಲ್ಲಿ! ಅಲ್ಲಿಯ ಪೆಟ್ ಫ್ರೆಂಡ್ಲಿ ಹೋಟೆಲುಗಳಿಂದ ಹಿಡಿದು ಯಾವುದೇ ಪ್ರೇಕ್ಷಣೀಯ ಸ್ಥಳ ಅಥವಾ ಅಲ್ಲಿಯ ಅಸಂಖ್ಯ ಮಳಿಗೆಗಳಲ್ಲಿ ಎಲ್ಲಿಗೆ ಹೋದರೂ ಸಹಾ! ಇನ್ನು ಜರ್ಮನಿ ಹಾಗೂ ಅಮೇರಿಕೆಯ ಏರ್‌ಪೋರ್ಟುಗಳ ಕಸ್ಟಮ್ ಕ್ಲಿಯರೆನ್ಸ್ ಮತ್ತು ಇಮಿಗ್ರೇಶನ್‌ಗಳಲ್ಲಿ 2002ರಿಂದ 2010ರ ವರೆಗಿನ ನಮ್ಮ ಮೂರು ಪ್ರವಾಸ ಸಮಯಗಳಲ್ಲಾದ ಬೇರೆ ಬೇರೆ ಪ್ರಸಂಗಗಳ ಬಗ್ಗೆ, ಅವರ ಮಾತುಗಳಲ್ಲೇ ಹೇಳಬೇಕೆಂದರೆ:

– ''ಓ! ನೀವು ನಿಮ್ಮ ಪೆಟ್ ಡಾಗ್ ಜೊತೆ ಪ್ರಯಾಣ ಮಾಡುತ್ತಿದ್ದೀರಿ! ನಮ್ಮ ಎಕಾನಮಿ ಕ್ಲಾಸ್ ಓವರ್ ಬುಕ್ ಆಗಿರುವುದರಿಂದ ಅಲ್ಲಿ ನಿಮಗೆ ಸೀಟ್ ಕೊಡಲು ಆಗುವುದಿಲ್ಲ. ಆದರೆ ನಿಮ್ಮ pet ಅನ್ನು ಆಗಲೇ ಬೋರ್ಡ್ ಮಾಡಿಬಿಟ್ಟಿರುವುದರಿಂದ ನಿಮ್ಮ ಅಭ್ಯಂತರವಿಲ್ಲದಿದ್ದರೆ ನೀವು ನಮ್ಮ ಬಿಸಿನೆಸ್ ಕ್ಲಾಸಿನಲ್ಲಿ ಪ್ರಯಾಣ ಮಾಡಬಹುದು, ಆಗಬಹುದೇ?..''

– ''ವಂಡರ್ಫುಲ್, ನಿಮ್ಮ ನಾಯಿಮರಿಯ ಜೊತೆ ಪ್ರಯಾಣಿಸುತ್ತಿದ್ದೀರಿ, ಐ ಲವ್ ಇಟ್! ಕೇಳುವುದಕ್ಕೇನೂ ಇಲ್ಲ, ನೀವು ನಿಮ್ಮ ಬೆರಳಚ್ಚನ್ನು ಇಲ್ಲಿ ಒತ್ತಿ ಕೂಡಲೇ ಹೊರಡಿ. ತೆಗೆದುಕೊಳ್ಳಿ, ನಿಮ್ಮ ಪಾಸ್ ಪೋರ್ಟ್ ಇಲ್ಲಿದೆ''...

– ''ಟಾರ್‌ಮ್ಯಾಕಿನ ಮೇಲೆ ನಡೆಯುತ್ತಿರುವ ಆ ದೊಡ್ಡ ಕರಿಯ ಲಾಬ್ರಡಾರ್ ರಿಟ್ರೀವರ್ ನಾಯಿ ನಿಮ್ಮದೇ. ಶಿ ಈಸ್ ಡೂಯಿಂಗ್ ಗ್ರೇಟ್, ಡೋಂಟ್ ವರಿ.''

– ''ಹೌನ್ಯೆಸ್! ಹೇಗೆ ಉಚ್ಚರಿಸುವುದು ನಿಮ್ಮ ಪೆಟ್ಟಿನ ಹೆಸರನ್ನು? ಹಾಗಂದರೇನರ್ಥ? ಓ, ವಾಟ್ ಅ ಲವ್ಲೀ ಕೋಟ್ ಶಿ ಹ್ಯಾಸ್!''

– ''ಡಿಕ್ಲೇರ್ ಮಾಡಲು ಏನಿಲ್ಲ ಎಂದಿರಾ? ಒಳ್ಳೆಯದು, ಹೋಗಿ. ನಿಮಗೆ ಹೆಚ್ಚು ಕಾಲಹರಣ ಮಾಡಿಸುವುದಿಲ್ಲ. ಏಕೆಂದರೆ ನಿಮಗಾಗಿ ಅಲ್ಲಿ ನಿಮ್ಮ ಪೆಟ್ ತಾಳ್ಮೆಯಿಂದ ಕಾಯುತ್ತಿದೆ ಪಾಪ. ಹೊರಡಿ, ಹೊರಡಿ ಬೇಗ..''

– ''ನಾವು ಆಗಲೇ ಎಲ್ಲಾ ಕೆನೆಲ್ಲುಗಳನ್ನು ನೀವುಗಳು ಡಿಸ್ ಎಂಬಾರ್ಕ್ ಮಾಡುವ ಮೊದಲೇ ಇಳಿಸಿಯಾಯಿತು. ಬೇರೆ ಎಷ್ಟೊಂದು ಕೆನೆಲ್‌ಗಳಿಂದ ಬೊಗಳುವಿಕೆ ಕೇಳಿಸಿದರೂ, ಈ ನಿಮ್ಮ ಮರಿ ಮಾತ್ರಾ ಎಲ್ಲವನ್ನೂ ನೋಡುತ್ತಾ ಸುಮ್ಮನಿದೆ. ಪಾಪ ಮುದ್ದುಮರಿ. ಬೇಗ ಕರೆದುಕೊಂಡು ಹೋಗಿ, ನಿಮಗಾಗಿ ಕಾಯುತ್ತಿದೆ. ತುಂಬಾ ಒಳ್ಳೆಯ ಮಗು.''

– ''ಹೇ, ಇವರಿಗೆ ಗ್ರೀನ್ ಚಾನೆಲ್ಲಿನಲ್ಲಿ ಹೋಗಲು ಮೊದಲು ಅವಕಾಶ ಕೊಡೋಣ. ಇವರಿಗಾಗಿ ಇವರ ಪೆಟ್ ತುಂಬಾ ಹೊತ್ತಿನಿಂದಾ ಕಾಯುತ್ತಿರಬೇಕು.''

ಇದಕ್ಕೆ ಲೋಕೋಭಿನ್ನರುಚಿಃ ಅಂತನ್ನಬೇಕೋ ಅಥವಾ ಪಾಶ್ಚಾತ್ಯರ ಶ್ವಾನಪ್ರೇಮದ ಪರಮಾವಧಿಯೆನ್ನಬೇಕೋ ಗೊತ್ತಿಲ್ಲ.

ನಿಜ, ಹೋದಲ್ಲೆಲ್ಲಾ ನಮ್ಮ ನಾಯಿಮರಿಯನ್ನೂ ಕರೆದುಕೊಂಡು ಹೋಗಬೇಕು ಅಂದರೆ ಮೇಲ್ನೋಟಕ್ಕೆ ಸ್ವಲ್ಪ ತೊಂದರೆಯ ವಿಷಯವೇ. ಆದರೆ ನಮ್ಮ ಸುಜುವಿನ ವಿಷಯದಲ್ಲಿ ನಾವು ನಾಲ್ಕಾರು ಅಂಶಗಳನ್ನು ಗಮನಿಸಲೇಬೇಕಾಯ್ತು.

– ಮಕ್ಕಳು ಅವರವರ ಜೀವನವನ್ನು ಪಾಶ್ಚಾತ್ಯ ದೇಶಗಳಲ್ಲಿ ರೂಪಿಸಿಕೊಂಡಾಗ, ವಿದೇಶ ಪ್ರವಾಸದಂಥಾ ವಿಷಯವು, ಒಮ್ಮೆ ಸಮ್ಮತವಾಗಿರುವ ಸಂಸಾರಗಳ ಅನಿವಾರ್ಯತೆ ಹಾಗೂ ಅವಿಭಾಜ್ಯ ಅಂಗವಾಗಿಬಿಡುವುದು.

– 'ನನ್ನ ಒಡತಿ ನೀಡದಿದ್ದರೆ ನನಗೆ ಊಟ–ನೀರು ಏನೂ ಬೇಡವೇಬೇಡ, ಉಪವಾಸ ಇರ್ತೀನಿ' – ಎನ್ನುವ ಸುಜುವಿನ ಹಠದ ಸ್ವಭಾವ, ಮತ್ತು ಅದರಿಂದಾಗಿ ನಮ್ಮ ಜೀವನಶೈಲಿ, ಚಲನವಲನಗಳಲ್ಲಿ ಮಾಡಿಕೊಳ್ಳಬೇಕಾಗಿ ಬಂದ ಕೆಲವು ಹೊಂದಾಣಿಕೆಗಳು.

– ನಮಗೆ ಮತ್ತು ನಮ್ಮ ಮಕ್ಕಳಿಗೆ ಸುಜುವಿನ ಮೇಲಿದ್ದ ವ್ಯಾಮೋಹ, ಹಾಗೂ ಪ್ರವಾಸದ ವಿಷಯದಲ್ಲಿ ನಮ್ಮ ಮಕ್ಕಳು ನಮಗಿತ್ತ ಒತ್ತಾಸೆ, ಸಹಾಯ ಹಾಗೂ ಭರವಸೆಗಳು.

– ಸಾಕುಪ್ರಾಣಿಗಳ ವಿದೇಶ ಪ್ರವಾಸದಲ್ಲಿ, ಹೊರನೋಟಕ್ಕೆ ಕಾಣಿಸುವ ತೊಂದರೆಗಳು ವಾಸ್ತವದಲ್ಲಿ ಇಲ್ಲದಿರುವುದು.

– ನಮ್ಮ ಪರಿಣಿತ ಪಶುವೈದ್ಯ ಯು.ಎ.ಎಸ್.ನ ಡೀನ್ ಡಾ. ಯತಿರಾಜ್‌ರವರು ನಮಗಿತ್ತ ಧೈರ್ಯ, ಸಹಕಾರಗಳು.

ಇಷ್ಟೆಲ್ಲಾ ಇದ್ದಾಗ ಇನ್ನು ಹೊರಡಲು ನಿರ್ಧರಿಸಲು ಮೀನಾಮೇಷ ಎಣಿಸಲಿಲ್ಲ ನಾವು.

ಮುಟ್ಟಿದ್ದಕ್ಕೆ ಮೂರು ಬಾರಿ ಎನ್ನುವಂತೆ ಸುಜು ಇಲ್ಲಿಗೆ, ಹಾಗೂ ಇಲ್ಲಿ ನಾಲ್ಕೂ ದಿಕ್ಕುಗಳಲ್ಲಿ ಇರುವ ಅನೇಕ ಸ್ಥಳಗಳಿಗೆ ಪ್ರಯಾಣ ಮಾಡಿದ್ದಲ್ಲದೆ, ಟೆಕ್ಸಾಸ್ ಮತ್ತು ಮಿಷಿಗನ್ ರಾಜ್ಯಗಳಲ್ಲಿ ನಮ್ಮೊಡನೆ ತನ್ನ ಸುದೀರ್ಘ ವಾಸ್ತವ್ಯ ಹೂಡಿದ್ದು ಇತಿಹಾಸ. ಕಳೆದ ತಿಂಗಳು, ಹದಿನಾಲ್ಕು ವರ್ಷದ ಒಡನಾಟದ ನಂತರ, ಒಲವಲ್ಲದೇ ನಮ್ಮಿಂದ ಬೇರೇನನ್ನೂ ನಿರೀಕ್ಷಿಸದೆ ತನ್ನ ನಿರ್ವಾಜ್ಯ ಪ್ರೀತಿಯನ್ನಷ್ಟೇ ಧಾರಾಳವಾಗಿ ನಮಗಿತ್ತ, ತನ್ನ ಸಾರ್ಥಕ ಬಾಳ್ವೆಯ ನಂತರ ಹೆಚ್ಚು ನರಳದೆ – ತನ್ನ ಅಸಾಧಾರಣ ಪ್ರವಾಸಗಳನ್ನು ಮೀರಿದ – ಮತ್ತೊಂದು ದೀರ್ಘಪಯಣವನ್ನು ಸುಜು ಕೈಗೊಂಡದ್ದು ಸಹಾ ಈಗ ಇತಿಹಾಸವೇ..

ಕುಟುಂಬದ ಸದಸ್ಯರೊಬ್ಬರನ್ನೇ ಕಳೆದುಕೊಂಡಷ್ಟು ತೀವ್ರ ವ್ಯಸನ, ವಿಯೋಗಗಳನ್ನು ಉಂಟು ಮಾಡಿದ ಈ ಇದ್ದಕ್ಕಿದ್ದಾಗಿನ ಅನುಭವ, ಕೆಲವಾರು ಅನಿರೀಕ್ಷಿತ ತಾತ್ಕಾಲಿಕ ಸಮಸ್ಯೆಗಳನ್ನು ಹುಟ್ಟುಹಾಕಿತು. ಮುಂದಿನ ವ್ಯವಸ್ಥೆ ಹೇಗಾಗಬೇಕು – ಎನ್ನುವುದು ನಮ್ಮೆದುರು ಧುತ್ ಎಂದು ನಿಂತ ಮೊಟ್ಟಮೊದಲ ಪ್ರಶ್ನೆ. ನಮ್ಮೂರಲ್ಲಾದರೆ ಮನೆಯ ಕಾಂಪೌಂಡ್ ಮೂಲೆಯೊಂದರಲ್ಲಿ ಬಗೆ ಹರಿಯುವ ಈ ವಿಷಯ, ಆ ಮಟ್ಟಿಗಿನ ಅನುಕೂಲವಿಲ್ಲದ ಇಲ್ಲಿ, ನಾವು ಅದಕ್ಕಾಗಿಯೇ ಇರುವ ಸರ್ವೀಸಸ್‌ಗಳನ್ನು ತಡಕುವಂತೆ ಮಾಡಿತು..

ಇಲ್ಲಿಂದ ಮೊದಲಾಯಿತು ನಮಗೆ ಈ ದೇಶದ, ಈ ಮುಖದ, ಅತ್ಯಂತ ನಿಕಟವಾದ ಪರಿಚಯ!!

ಇಲ್ಲಿ ಈ ಬಗೆಯ ಸೇವೆಯೊದಗಿಸಲು ಇರುವ ಸಂಸ್ಥೆಗಳು ಅನೇಕಾನೇಕ ಹಾಗೂ ಅವುಗಳ ಬಗೆಗಿನ ಮಾಹಿತಿ ಎಂತಹವರಿಗೂ ಅಚ್ಚರಿಯುಂಟು ಮಾಡುವಷ್ಟು! ''ಅಲ್ ಪಾಸ್ (Paws) ಗೋ ಟು ಹೆವೆನ್'' – ಎಂಬ ಒಂದು ಸಂಸ್ಥೆಯನ್ನು ಅರಿಸಿದ ನಮಗೆ ಮತ್ತೆ ಎದುರಾದದ್ದು ಭಾನುವಾರದ ರಜೆಯ ಸಮಸ್ಯೆ! ಆದರೆ, ಅದೃಷ್ಟವಶಾತ್ ಅದೂ ಸಹಾ ಒಂದು ಸಮಸ್ಯೆಯೇ ಅಲ್ಲವೆನ್ನುವಷ್ಟು ಸುಲಭದ ಪರಿಹಾರವನ್ನು ಹೊಂದಿತ್ತು!..

ಕೆಲವೇ ಕ್ಷಣಗಳಲ್ಲಿ, ''ಎಮರ್ಜೆನ್ಸಿ ವೆಟ್ ಕೇರ್''ಗಳಲ್ಲೇ ವಾರಾಂತ್ಯದಲ್ಲಿ ಅವಸಾನ ಹೊಂದಿದ ಸಾಕು ಪ್ರಾಣಿಗಳನ್ನು ಸೋಮವಾರ ಬೆಳಗಿನವರೆಗೂ ಕಾದಿರಿಸಿಕೊಂಡಿದ್ದು, ಆಲ್ paws ಸಂಸ್ಥೆಗೆ ಕಳಿಸಿಕೊಡುವ ಅನುಕೂಲವಿದೆಯೆಂದು ತಿಳಿದದ್ದು – ಅಂತರ್ಜಾಲದ

ಕೃಪೆಯಿಂದ! ಈ ''ಎಮರ್ಜೆನ್ಸಿ ವೆಟ್ ಕೇರ್'' ಎಂಬ ಈ ದೇಶದ ವಿಸ್ತಾರದುದ್ದಕ್ಕೂ ಇರುವ ಸರಪಳಿ ಸಂಸ್ಥೆಯೇ ಮತ್ತೊಂದು ಅದ್ಭುತ ಕಾನ್ಸೆಪ್ಟ್! ಮುಂದಿನ ಎರಡು ಘಂಟೆಗಳಲ್ಲಿ ನಾವು ಕಣ್ಣಾರೆ ಕಂಡ ಅಲ್ಲಿದ್ದ ಈ ವ್ಯವಸ್ಥೆ, ನಮ್ಮ ಯಾವುದೇ ಆಧುನಿಕ ಆಸ್ಪತ್ರೆಯ 'ಮಾರ್ಗ'ವನ್ನೂ ನಾಚಿಸುವಂತಿತ್ತು!

ಅಲ್ಲಿಗೆ ಹೋದ ನಮ್ಮನ್ನು ಅವರು ಎದುರುಗೊಂಡು ಸಂತಾಪವನ್ನು ವ್ಯಕ್ತಪಡಿಸಿ, ಹಲವು ಸಾಂತ್ವನದ ಮಾತಾಡಿ, ಸುಜುವಿನ ಬಗ್ಗೆ ಕೆಲವು ವಿವರಗಳನ್ನು ಅದಕ್ಕಾಗೇ ಇದ್ದ ಫಾರ್ಮ್ ಒಂದರಲ್ಲಿ ತುಂಬಿಸುವಂತೆ ವಿನಂತಿಸಿದರು. ನಂತರ ಕೆಲವೇ ನಿಮಿಷಗಳಲ್ಲಿ ಅವರ ಆದೇಶದಂತೆ ನಮ್ಮ ಕಾರು ಕಟ್ಟಡದ ಪಕ್ಕಕ್ಕೆ ತೆರಳಿತು. ಅಚ್ಚ ಬಿಳಿಯ ಹಾಸಿನ ಪುಟ್ಟದೊಂದು ಸ್ಟ್ರೆಚರ್ ಹೊಂದಿದ್ದ ಟ್ರಾಲಿಯೊಂದರೊಡನೆ ಅಲ್ಲಿ ಮೂವರು ಹುಡುಗಿಯರು ಒಂದು ಗುಲಾಬಿ ಮೊಗ್ಗಿನೊಡನೆ ಕಾದಿದ್ದು, ಸುಜುವನ್ನು ಅತ್ಯಂತ ಜತನದಿಂದ (!!) ಅವರ ವಶಕ್ಕೆ ತೆಗೆದುಕೊಂಡರು. ಹದಿನಾಲ್ಕು ವರ್ಷ ಅವಿರತ ನನ್ನ ನೆರಳಾಗಿದ್ದ ಪ್ರೀತಿಯ ಸಂಗಾತಿಗೆ ನಸುವರಳಿದ ಕೆಂಪು ಗುಲಾಬಿಯೊಂದಿಗೆ ವಿದಾಯ ಹೇಳಿ ಭಾರವಾದ ಮನಸ್ಸಿನಿಂದ ಹಿಂದಿರುಗಿದೆವು.

ಮಂಗಳವಾರದಿಂದ ನಮಗೆ ಸಂತಾಪ ಸೂಚಕ ಕಾರ್ಡುಗಳ ಮಹಾಪೂರ! ''ಆಲ್ paws ಗೋ ಟು ಹೆವೆನ್''ನ್ನಿಂದ, ''ಎಮರ್ಜೆನ್ಸಿ ವೆಟ್ ಕೇರ್''ನ್ನಿಂದ, ಸುಜುವಿನ ರೇಬಿಸ್ ಚುಚ್ಚುಮದ್ದು ಇತ್ಯಾದಿಗಳನ್ನು ಗಮನಿಸುತ್ತಿದ್ದ ವೆಟರ್ನರಿ ಡಾಕ್ಟರ್ ಹಾಗೂ ಅವರ ಆಸ್ಪತ್ರೆಯ ಸಿಬ್ಬಂದಿಯೆಲ್ಲರಿಂದ! ಬುಧವಾರ ಸಂಜೆ ಪಾರ್ಸೆಲ್ಲಿನಲ್ಲಿ ''ಆಲ್ paws''ನಿಂದ ಬಂದಿತು – ಪಳಗುಟ್ಟುವ ಪುಟಾಣಿ ಕಂಚಿನ ಬೀಗ ಹಾಕಿದ, ಸುಜುವಿನ ಪೂರ್ತಿ ಹೆಸರು ಮತ್ತು ಅದರ ಜೀವಿತಾವಧಿಯ ಕಾಲವನ್ನು ತಿಳಿಸುವ ಫಲಕವಿದ್ದ, ಘಮ್ಮನೆಯ ಒಂದು ಚಿಕ್ಕ ಸೀಡಾರಿನ ಪೆಟ್ಟಿಗೆ! ಅದರೊಳಗೆ ನಾಜೂಕಾಗಿ ಇರಿಸಿದ್ದ ಓಲೆಯ ಸುರುಳಿಯೊಂದು! ತಿಳಿ ನೀಲಿ ಬಣ್ಣದ ರಿಬ್ಬನ್ ಕಟ್ಟಿದ್ದ, ನಾಯಿಮರಿಯ ಹೆಜ್ಜೆ ಗುರುತುಗಳ ಪ್ರಿಂಟಿನ ಹಿನ್ನೆಲೆಯಿದ್ದ ಆ ಸುರುಳಿಯಲ್ಲಿ ''ರೈನ್‌ಬೋ ಬ್ರಿಜ್ಜಿನ'' ಬಗ್ಗೆ ಒಂದು ಕವಿತೆ!! ಅದರ ಜೊತೆಯಲ್ಲಿ ದುಃಖಿತ ವಿಯೋಗಿಗಳ ಭಗ್ನ ಹೃದಯದ ಪ್ರತೀಕವಾಗಿ, ಬಂಗಾರದಂತೆ ಮಿನುಗುತ್ತಿದ್ದ, ಚಿಕ್ಕದೊಂದು ಮುರಿದ ಹೃದಯದ ಸೀಳಿನ ಎರಡು ಚಿಕ್ಕ ಚೂರುಗಳು. ಒಂದು ಚೂರಿನ ಮೇಲೆ ''ಫ್ರೆಂಡ್ಸ್'' ಎಂದು ಕೆತ್ತಿದ್ದರೆ, ಮತ್ತೊಂದರ ಮೇಲೆ ''ಫಾರ್ ಎವರ್'' ಎಂದು! ಅಷ್ಟೇ ಅಲ್ಲ, ತಿಳಿ ನೀಲಿ ಲೇಸಿನಲ್ಲಿ ಸುತ್ತಲ್ಪಟ್ಟ ಗಾಜಿನ ಕೇಸಿನಲ್ಲಿ ಹುದುಗಿದ್ದ, ನವಿರಾದ ಸುವಾಸನೆಯುಳ್ಳ, ಅಗಲನೆಯ, ಒಂದು ಪುಟ್ಟ ಹಳದಿ ಬಣ್ಣದ ಕ್ಯಾಂಡಲ್ ಸಹಾ!

ಇಲ್ಲಿಯವರ ಸಾಕುಪ್ರಾಣಿ ಪ್ರಿಯರ ನಂಬಿಕೆಯಂತೆ – ಸಾಕುಪ್ರಾಣಿಪಕ್ಷಿಗಳ, ವಿಜ್ಞಾನಿಗಳ ಪ್ರಯೋಗಕ್ಕೆ ನೆರವಾಗಿ ಜೀವ ಕಳೆದುಕೊಳ್ಳುವ ಪಶುಪಕ್ಷಿಗಳ, ಅನಾಥ ಪಶುಪಕ್ಷಿಗಳ, ಮತ್ತಿತರ ಪಶುಪಕ್ಷಿಗಳ – ಆತ್ಮಗಳು, ತಮ್ಮ ಸಾವಿನ ನಂತರ ಮೋಡಗಳ ಮಧ್ಯೆಯಿರುವ ''ಕಾಮನ ಬಿಲ್ಲಿನ ಸೇತುವೆ'' ("Rainbow Bridge")ಯ ಬದಿಯಲ್ಲಿರುವ ಒಂದು ಹುಲ್ಲುಗಾವಲಿಗೆ ತೆರಳುತ್ತದೆ! ಸದಾ ಹೊಂಬಿಸಿಲೇ ಇದ್ದು ತಂಗಾಳಿ ಬೀಸುತ್ತಿರುವ ಆ ಅತಿ

ರಮ್ಯ ಪರಿಸರದಲ್ಲಿ, ತಮ್ಮೆಲ್ಲಾ ಅನಾರೋಗ್ಯ, ಅಂಗವಿಕಲತೆಗಳಿಂದ ಮುಕ್ತಿ ಹೊಂದಿ, ಪುನಃ ತಾರುಣ್ಯವನ್ನು ಪಡೆದು, ಎಲ್ಲವೂ ವೈರವಿಲ್ಲದೇ ಕಲೆತು ನಿರಂತರ ಸಹ ಜೀವನ ನಡೆಸುತ್ತವೆ, ಅವುಗಳ ಪ್ರೀತಿ ಪಾತ್ರ ಒಡೆಯ – ಒಡತಿಯರ ಆತ್ಮದೊಂದಿಗೆ ಪುನರ್ಮಿಲನ ವಾಗುವವರೆಗೂ, ಪುನರ್ಮಿಲನವಾದ ನಂತರವೂ!! ಹಾ, ತಡೆಯಿರಿ..., ಅವುಗಳ ಕೊರಗೊಂದೇ ಒಂದು.., ತಮ್ಮ ಪ್ರೀತಿಪಾತ್ರರೊಂದಿಗಿನ ಪುನರ್ಮಿಲನದವರೆಗೂ ಅನುಭವಿಸಬೇಕಾದ ವಿಯೋಗದ ವ್ಯಸನ! ...ಆಹಾ ಎಂತಹ ಸುಂದರ ಪರಿಕಲ್ಪನೆ!... ಪುನರ್ಜನ್ಮದ ಬಗೆಗಿನ ವಿವರಗಳೊಂದಿಗೆ ಹಾಸುಹೊಕ್ಕಾಗಿ ಬೆರೆತ ಮನಸ್ಸುಳ್ಳ ನಮಗೆ ಸ್ವಲ್ಪ ವಿರೋಧಾಭಾಸವೆನ್ನಿಸಿದರೂ ಸಹಾ!!

ಇನ್ನು, ಪಾಶ್ಚಾತ್ಯ ವಿಧಿಗಳಿಗನುಗುಣವಾಗಿ ಈ ಸಾಕುಪ್ರಾಣಿ ಪಕ್ಷಿಗಳಿಗೂ ಮನುಷ್ಯರಿಗಿರುವಂತೆಯೇ ವಿವಿಧ ಅನುಕೂಲಗಳಿರುವ ಬೇರೆಯೇ ಸಮಾಧಿಸ್ಥಳಗಳುಂಟು! ಚಿತಾಭಸ್ಮ ಸಂಗ್ರಹವನ್ನಿಡಲು ವಿವಿಧ ವಿನ್ಯಾಸದ ಕರಂಡಕಗಳೂ ಲಭ್ಯ! ಅದಷ್ಟೇ ಅಲ್ಲದೆ ಅಂತರ್ಜಾಲದಿಂದ ಸಂಪರ್ಕಿಸಬಹುದಾದ ಇನ್ನೆಷ್ಟೆಷ್ಟೋ ವೈವಿಧ್ಯಮಯ ಆಯ್ಕೆಗಳು! ವಾರಕ್ಕೊಮ್ಮೆ ಭೇಟ್ಟಿಯಾಗುವ ಪ್ರಾರ್ಥನೆಯ ಗ್ರೂಪುಗಳು, ಅತಿಯಾಗಿ ನೊಂದ ವಿಯೋಗಿಗಳಿಗೆ ಸಾಂತ್ವನ ನೀಡಿ ಪುನರುತ್ಸಾಹ ತುಂಬುವ ಚಾಟ್ ರೂಮುಗಳು, ಅಲ್ಲದೆ ಅಂಥಹವರು ನಿಗದಿತವಾಗಿ ಟೆಲಿಫೋನ್ ಮೂಲಕ ಸಹಾ ಸಂಪರ್ಕಿಸಿ ಸಾಂತ್ವನಪಡೆಯಬಹುದಾದ ಚಾಟ್ ರೂಮುಗಳ ಕಾರ್ಯಕರ್ತರು..., ಆನ್ ಲೈನ್ ಕ್ಯಾಂಡಲ್ ಲೈಟ್ ಸೆರ್ಮನಿಗಳು, ...ಒಂದೇ ಎರಡೇ?

...ಇದನ್ನೆಲ್ಲವನ್ನೂ ಗಮನಿಸಿದಾಗ, ಇದು ಸಂಪದ್ಭರಿತ ರಾಷ್ಟ್ರವೊಂದರ ಹುಚ್ಚಾಟವಷ್ಟೇ ಅಂತನ್ನಿಸದೇ, ಇದು ಅವರ ಹೃದಯ ವೈಶಾಲ್ಯತೆಯ, ಸಾಕುಪ್ರಾಣಿಗಳ ಬಗೆಗಿನ ಕಾಳಜಿಯ ಪರಾಕಾಷ್ಟೆ– ಎಂದೇ ನಂಗನ್ನಿಸುತ್ತೆ!.. ತಮ್ಮ ಆಪ್ತವಾದ ಪರಿಧಿಯೊಳಗೆ ಬರಮಾಡಿಕೊಂಡು ಸಾಕುವ ಜೀವವನ್ನು ಕುಟುಂಬದ ಮತ್ತೊಬ್ಬ ಪ್ರೀತಿಪಾತ್ರ ಸದಸ್ಯನಂತೆ ನಡೆಸಿಕೊಳ್ಳುವ ಈ ಜನರ ಬಗ್ಗೆ ಹೆಚ್ಚಿನ ಗೌರವ ಮೂಡುವುದರಲ್ಲಿ ಆಶ್ಚರ್ಯವೇನಿದೆ!....

✵

---

## ಕಾರಣ

**ಹೆಂಡತಿ – ನಾನು ಬಂದಾಗಲೆಲ್ಲ ನೀವು ಯಾಕೆ ಕನ್ನಡಕ ಹಾಕಿಕೊಳ್ತೀರಿ?**

**ಗಂಡ – ಡಾಕ್ಟರ್ ಹೇಳಿದಾರೆ.**

**ಹೆಂಡತಿ – ಏನು?**

**ಗಂಡ – ತಲೆನೋವು ಬಂದಾಗಲೆಲ್ಲ ಹಾಕಿಕೊಳ್ಳಿ ಅಂತ.**

# ಅದು ಮುಂಗುಸಿಯಲ್ಲ, ಹಿಂಗು-ಸಿ

**- ನಾಗೇಶ ಹೆಗಡೆ**

**ಬೆ**ಳ್ಳಂಬೆಳಿಗ್ಗೆ ಎದ್ದು ಸೂರ್ಯನನ್ನು ಎಬ್ಬಿಸಲೆಂದು ಕಾಫಿಯ ಜತೆಗೆ ನಾನೂ ಅಪರೂಪಕ್ಕೆ ವಾಕಿಂಗ್ ಹೋಗುವುದುಂಟು ('ಕಾಫಿ' ನಮ್ಮ ನಾಯಿಯ ಹೆಸರು). ತೀರಾ ಅಪರೂಪಕ್ಕೆ ಮಾತ್ರ ಹೊರಡುತ್ತೇನೆ. ದಿನಾಲೂ ಯಾಕೆ ಹೋಗುತ್ತಿಲ್ಲ ಎಂಬ ಪ್ರಶ್ನೆಗೆ ನನ್ನದೇ ಅನೇಕ ಕುಂಟು ನೆಪಗಳಿವೆ:- ಮೊದಲನೆಯದಾಗಿ ನನಗೆ ಕನ್ನಡ ಕವಿಗಳ ಬಗ್ಗೆ ತುಂಬಾನೇ ಗೌರವ ಮತ್ತು ಆದರವಿದೆ. ಅವರ ಸುಂದರ ಕಲ್ಪನೆಗಳು ವಾಸ್ತವ ಜಗತ್ತಿನಲ್ಲಿ ಕಗ್ಗೊಲೆಯಾಗಿ ಹೋಗುವುದನ್ನು ನೋಡಲು ನನಗೆ ಸಾಧ್ಯವಿಲ್ಲ. ಇದಕ್ಕೆ ಎರಡು ಉದಾಹರಣೆಗಳನ್ನು ಕೊಟ್ಟು ಹಿಂದಕ್ಕೆ ಬರುತ್ತೇನೆ.

ನಸುಕು ಹರಿಯುವ ಮುನ್ನವೇ ನಾನು ಕ್ಯಾಮರಾ ಹಿಡಿದು, ಶೂ ಹಾಕಿದೆ ಎಂದರೆ ಕಾಫಿಗೆ ಥ್ರಿಲ್ಲೋ ಥ್ರಿಲ್ಲು. ನನಗಿಂತ ಮುಂದೆ ಧಾವಿಸಿ, ಕಂಡ ಕಂಡ ಪೊದೆಯೊಳಕ್ಕೆ ಹೊಕ್ಕು ಹಾವಳಿ ಎಬ್ಬಿಸುತ್ತದೆ. ಅಲ್ಲಿ ಈಗಿನ್ನೂ ತಂಪು ನಿದ್ದೆಯಲ್ಲಿರುವ ಬಡಪಾಯಿ ಪಕ್ಷಿಗಳು ಗಡಬಡಿಸಿ ಎದ್ದು ಕಿರಿಚಾಡುತ್ತವೆ. ಅಲ್ಲಿಗೆ ಬೇಂದ್ರೆಯವರ 'ಗಿಡಗಂಟಿಗಳ ಕೊರಳೊಳಗಿಂದ ಹಕ್ಕಿಗಳ ಹಾಡು' ಹಳೇ ಎಚ್.ಎಮ್.ವಿ. ರೆಕಾರ್ಡ್ ಥರಾ ಆರ್ತನಾದವೇ ಕೇಳಿಬರುತ್ತದೆ. ಬೇಂದ್ರೆ ಮಾಸ್ತರರ ಸಾಧನಕೇರಿಯಲ್ಲಿ ಪೊದೆ ಎಂದರೆ ಪಾರಿಜಾತ, ದಾಸವಾಳ, ದುಂಡುಮಲ್ಲಿಗೆ ಹೂಬನಗಳ ಚಿತ್ರಣವೇ ಮನಸ್ಸಿನಲ್ಲಿ ಅಚ್ಚೊತ್ತಿದೆ. ಇಲ್ಲಿ ಪೊದೆ ಎಂದರೆ ಪಾರ್ಥೇನಿಯಂ, ಯುಪಟೋರಿಯಂ ಮತ್ತು ಲಂಟಾನಾದಂಥ ಕಳೆಗಿಡಗಳು. ಅವು ಕಾಫಿಯ ನುಗ್ಗಾಳಿಕೆ ತಾಳದೆ ಗಲಗಲ ನಲುಗಿದಾಗ ಮುತ್ತಿನ ನೀರಿನ ಎರಕವ ಹೊಯ್ಯುವುದಿಲ್ಲ, ಬದಲಿಗೆ ಪರಾಗಕಣಗಳನ್ನು ಎಲ್ಲ ಕಡೆ ಚದುರಿಸುತ್ತವೆ.

ಹಾಗೆ ಹಾರಿದ ಪರಾಗ ಕಣಗಳು ನನ್ನ ಗಂಟಲಿಗೆ ನುಗ್ಗುತ್ತಲೇ ಅಲ್ಲಿರುವ ರಕ್ತನಾಳಗಳು ಅಲರ್ಟ್ ಆಗುತ್ತವೆ. ದೇಹಕ್ಕೆ ಎಂಥದೋ ಭಾರೀ ಅಪಾಯ ಬಂತೆಂಬಂತೆ ಬಿಳಿ ರಕ್ತಕಣಗಳು ಬಾವುಟ ಬೀಸುತ್ತವೆ. ಅಲ್ಲಿಂದ ಹಿಸ್ಟಮೈನ್‌ಗಳಿಗೆ ಸುದ್ದಿ ಹೋಗಿದ್ದೇ ತಡ ತ್ವರಿತವಾಗಿ ಅವೆಲ್ಲ ಮಿಲಿಟರಿ ಯೋಧರಂತೆ ಯುದ್ಧ ದುಂದುಭಿ ಮೊಳಗಿಸಿ, ಹಗ್ಗ ಬಲೆ ಹಿಡಿದು ಧಾವಿಸಿ ಬಂದು ನನ್ನ ಶ್ವಾಸನಾಳದ ಸುತ್ತ ಸಾಲುಗಟ್ಟಿ ನಿಂತು, ಪರಾಗದ ಒಂದು ಕಣವೂ ಒಳನುಗ್ಗದಂತೆ ಸ್ನಾಯುಗಳನ್ನು ಜಗ್ಗಿ ಹಿಡಿಯುತ್ತವೆ. ಮುಂದೆ ಐದೇ ನಿಮಿಷದಲ್ಲಿ ನನಗೆ ಉಬ್ಬಸ ಬರುತ್ತದೆ. ಉಸಿರುಗಟ್ಟಿ ನಾನು ಸತ್ತರೂ ಪರವಾಗಿಲ್ಲ, ಪರಾಗಕಣಗಳು ನನ್ನ ಶ್ವಾಸಕೋಶದ ಒಳಕ್ಕೆ ಬರಕೂಡದು ಎಂದು ನನ್ನ ರಕ್ತದಲ್ಲಿ ಬಿಳಿಗೋಲಗಳು ಬೆಂಗಾವಲಿಗೆ ನಿಲ್ಲುತ್ತವೆ. ರೈತಸಂಘದ ಹತ್ತಿಪ್ಪತ್ತೇ ಪ್ರತಿಭಟನಕಾರರು ರಾಜಭವನದ ಕಡೆ ಘೋಷಣೆ ಕೂಗುತ್ತ ಹೊರಟರೂ

ಇನ್ನೂರೈವತ್ತು ಪೊಲೀಸರ ದೊಡ್ಡ ದಂಡೇ ಅಲ್ಲಿಗೆ ಧಾವಿಸಿ ನಗರದ ಸಂಚಾರವನ್ನೆಲ್ಲ ಅಸ್ತವ್ಯಸ್ತಗೊಳಿಸುವ ಹಾಗೆ. ನನ್ನ ಶ್ವಾಸನಾಳ ಬಿಗಿಯಾಗುತ್ತ ಹೋಗುತ್ತದೆ. ಉಸಿರಾಟವೇ ಕಷ್ಟವಾಗುತ್ತದೆ. ಪೊದೆಯಿಂದ ಪಕ್ಷಿ ಹಾರಲಿ ಬಿಡಲಿ, ಇತ್ತ ನನ್ನ ಪ್ರಾಣಪಕ್ಷಿಯೇ ಹಾರಿ ಹೋದಂತಾಗಿ, ನಾನು ಉಸಿರು ಬಿಗಿ ಹಿಡಿದು (ಸಡಿಲ ಮಾಡಲು ಸಾಧ್ಯವೇ ಇಲ್ಲದ್ದರಿಂದ) ಮನೆಯ ಹಾದಿ ಹಿಡಿಯಬೇಕಾಗಿ ಬರುತ್ತದೆ.

ಮುಂದೆ ಮೂರುವಾರ ಬೆಳಗಿನ ವಾಕಿಂಗ್ ಇಲ್ಲ, ಬೇಂದ್ರೆ ಮಾಸ್ತರರು ಹೇಳಿದಂತೆ 'ರತ್ನದ ರಸದ ಕಾರಂಜಿಯು ಪುಟಪುಟನೇ ಪುಟಿಯಲಿ' ಅಥವಾ ಕುವೆಂಪು ವರ್ಣಿಸಿದಂತೆ 'ಹೊಂಗದಿರ್ಗಳ ಮಳೆ' ಸುರಿಯಲಿ, ಆ ಕಳೆಗಿಡಗಳಲ್ಲಿ ಹೂವು ಇರುವವರೆಗೂ ನಾನು ನಸುಕಿನ ವಾಕಿಂಗ್‌ಗೆ ಹೋಗುವುದಿಲ್ಲ. ಕೆಲವೊಮ್ಮೆ ಕೆ.ಎಸ್. ನರಸಿಂಹಸ್ವಾಮಿಯವರು ಹೇಳಿದ 'ಬಿಳಿಕೆರೆಯ ಕೆರೆಯ ತೆರೆಗೊಂದು ತಾವರೆಯರಳಿ/ನೀರೆಲ್ಲ ಕೆಂಪಾಗಿ ಬೆಳಗಾಯಿತು' ಸಾಲುಗಳು ಕಾಡುತ್ತವೆ ನಿಜ. ಕೆರೆಯತ್ತ ಹೋಗಿ ಬರೋಣವೆ ಎಂದೂ ಅನ್ನಿಸುತ್ತದೆ. ಆದರೆ ಮರಳು ಲಾರಿಗಳು ತಮ್ಮ ಕೊಳೆಯನ್ನೆಲ್ಲ ಕಳಚಲೆಂದು ಅಲ್ಲಿ ಬಂದುಬಂದು ನೀರು ಸದಾ ಕೆಂಪಾಗಿಯೇ ಇರುವುದರಿಂದ ನಸುಕಿನಲ್ಲಿ ಎದ್ದರೂ ಅಷ್ಟೆ, ಹಗಲು ಹನ್ನೆರಡಕ್ಕೆ ಎದ್ದರೂ ಅಷ್ಟೆ ತಾನೆ?

ಬೇಂದ್ರೆ, ಕುವೆಂಪು, ಕೆ.ಎಸ್.ನರಂಥ ರಮ್ಯ ಮುಂಜಾವಿಗಿಂತ ನವ್ಯಕವಿಗಳ ಮುಂಜಾವನ್ನೇ ತೋರಿಸುತ್ತೇನೆಂದು ಕಾಫಿ ಆಗಾಗ ದುಂಬಾಲ ಬೀಸುವುದುಂಟು. ನಿಮಗೆ ಮರೆತಿದ್ದರೆ ಶ್ರೀಕೃಷ್ಣ ಆಲನಹಳ್ಳಿಯವರ ಮುಂಜಾವನ್ನು ಇಲ್ಲಿ ನೆನಪಿಸುತ್ತೇನೆ: ಹಳೆಯ ಕವಿಗಳನ್ನು ಧಿಕ್ಕರಿಸುತ್ತ ಅವರು ಹೀಗೆ ಬರೆದಿದ್ದಾರೆ:

*'ಕಿಲುಬಿಡಿದ ಹಳೆಯ ಕವಿಸಮಯಗಳ/ಥಳಥಳಿಸಿ ಹೊಳೆಯಲೆಂದುಜ್ಜಿ ಬೆಳಗಲು/ ಹೊಳೆಯ ಕಡೆ ಹೊರಟಾಗ/ಹಡೆದ ಹೂಮರಿಗಳ ಬಿಟ್ಟೋಡಲಾಗದಯ/ಲಂಟಾನ ಪೊದೆಯೊಳಗೆ ಪತರಗುಟ್ಟುವ/ಬೆಳ್ಳಿ ಮೊಲವ/ನನ್ನ ಮನೆ ಧಾಂಡಿಗ ನಾಯಿ ಗಬಕ್ಕನೆ/ಕಚ್ಚಿ ಕಿತ್ತೆಳೆದೊಡನೆ ರಕ್ತ ಚಿಲ್ಲೆಂದಾಗ-/ನನ್ನೂರಿನಲಿ ಬೆಳಗಾಯಿತು.....'*

ಒಂದು ಮುಂಜಾನೆ ಹೀಗೇ ಹೊರಟಾಗ ಜತೆಗಿದ್ದ ಕಾಫಿ ಎಂದಿನಂತೆ ಪೊದೆಯೊಳಗೆ ನುಗ್ಗಿತು 'ಹಕ್ಕಿ ಓಡಿಸಬೇಡ ಬಾ ಈಚೆ' ಎಂದು ಗದರಿದರೂ ಕ್ಯಾರೇ. ತುಸು ಹೊತ್ತು ಎಗರಾಡಿ ಕೊಸರಾಡಿ ನಸುಗೆಂಪು ಬಣ್ಣದ ಏನನ್ನೋ ಈಚೆ ತಂದು ನನಗೆ ತೋರಿಸಿ ದೂರ ಓಡಿತು. ಆಲನಹಳ್ಳಿಯವರ 'ಬೆಳ್ಳಿ ಮೊಲ'ವಂತೂ ಅಲ್ಲ (ಅವೇನಿದ್ದರೂ ಬೆಂಗಳೂರಿನ ಸೈನ್ಸ್ ಲ್ಯಾಬ್‌ಗಳಲ್ಲಿರುತ್ತವೆ) ನಮ್ಮೂರು ಗುಡ್ಡ ಬೆಟ್ಟ ಪೊದೆಗಳಲ್ಲಿ ಇರುವುವೆಲ್ಲ ಬೂದಿ ಬಣ್ಣದ, ಇಲ್ಲವೆ ಮಣ್ಣಿನ ಬಣ್ಣದ ಮೊಲಗಳು. ಈಗ ಇದೇನಿರಬಹುದು ಎಂದು ಕಾಫಿಯನ್ನು ಕರೆದೆ. ಸಾಕಿದ ನಾಯಿಗಳ ಆಟ ನಿಮಗೆ ಗೊತ್ತಲ್ಲ, ಕಚ್ಚಿ ಹಿಡಿದದ್ದನ್ನು ದೂರ ಒಯ್ದು ನೆಲದ ಮೇಲಿಟ್ಟು ನಮಗಾಗಿ ಕಾಯುತ್ತವೆ; ನಾವು ತೀರ ಸಮೀಪ ಹೋಗುವವರೆಗೂ ಕಾದು ಕೂತು ಮತ್ತೆ ಗಬಕ್ಕನ್ನೆ ಅದನ್ನು ಕಚ್ಚಿಕೊಂಡು ದೂರ ಓಡುತ್ತವೆ. ಇದೂ ಓಡಿತು. ಅದರ ಬಾಯಲ್ಲಿ

ಮೊಲದ ಬಾಲದಂಥೆ ಎಂಥದ್ದೋ ಜೋತಾಡುತ್ತಿತ್ತು. ಉಡ ಇದ್ದೀತೆ, ಮುಂಗುಸಿ ಇದ್ದೀತೆ? ರಕ್ತದ ಕಲೆಯಂತೆ ಕೆಂಪು ಛಾಯೆ ಬೇರೆ. ನಮ್ಮ ಅದೆಷ್ಟೋ ಕೋಳಿಮರಿಗಳನ್ನು ಕದ್ದೊಯ್ದು ಮುಗಿಸಿದ ಮುಂಗುಸಿಗಳ ಬಗೆಗೆ ನನಗೆ ಒಳಗೊಳಗೆ ಕೋಪ ಇದೆಯಾದರೂ ಆಗೀಗ ಅವುಗಳಿಂದ ಉಪಕಾರವೂ ಆಗುತ್ತಿರುತ್ತದೆ. ಹಾವುಗೀವು ನಮ್ಮ ಮನೆಯ ಆಸುಪಾಸಿನಲ್ಲಿ ಸುಳಿಯದಂತೆ ಮಾಡುತ್ತವೆ. (ಮುಂಗುಸಿಯ ಭಯದಿಂದಲೋ ಏನೊ ಹಾವುಗಳು ನಮ್ಮ ಮನೆಯೊಳಕ್ಕೇ ಅವಿತಿರುತ್ತವೆ.) ಕಾರಣ ಏನೇ ಇರಲಿ ಈಗಂತೂ ನಾಯಿಯ ಬಾಯಿಗೆ ಸಿಕ್ಕ ಪ್ರಾಣಿಯ ಬಗ್ಗೆ ಕರುಣೆ ಉಕ್ಕಿತ್ತು. ಆ ಬಡಪಾಯಿಯನ್ನು ಹೇಗಾದರೂ ಬಿಡಿಸಿ ಮನೆಗೆ ಒಯ್ದು, ಪ್ರಥಮ ಉಪಚಾರ ಮಾಡಿ ಬದುಕಿಸಬೇಕು, ಸಾಧ್ಯವಿದ್ದರೆ ಮನೆಯೊಳಗೇ ಸಾಕಿಕೊಳ್ಳಬೇಕು ಎಂಬ ಪ್ರೇರಣೆ ಬಂದಿತ್ತು.

ಕಾಫಿ ಮಾತ್ರ ನನ್ನ ಯಾವ ಅಪೀಲಿಗೂ ಜಗ್ಗಲಿಲ್ಲ. ಹಾಗೆಂದು ನನ್ನನ್ನು ತನ್ನತ್ತ ಜಗ್ಗುವುದನ್ನೂ ಬಿಡಲಿಲ್ಲ. ತುಂಬಾ ಹೊತ್ತು ನನ್ನನ್ನು ಕಾಡಿಸಿ, ಪೀಡಿಸಿ, ತೇಕು ಬರುವಷ್ಟು ದಣಿಸಿ ಕೊನೆಗೂ ತಾನು ಹಿಡಿದ 'ಬೇಟೆ'ಯನ್ನು ನನಗೆ ತೋರಿಸಿತು.

ನೋಡಿದೆ. ಧೂಳು ಮೆತ್ತಿ ಚಿಂದಿಯಂತಿದ್ದ ಅದರ ಮೇಲೆ ರಕ್ತದ ಕಲೆ ಸ್ಪಷ್ಟವಾಗಿ ಕಾಣಿಸಿತು. ಸತ್ತೇಹೋದ ಯಾವುದೋ ಪ್ರಾಣಿಯ ಕಾಲೋ ಬಾಲವೋ ಇದ್ದೀತೆಂದು ಕುತೂಹಲದಲ್ಲಿ ಕೈಯಲ್ಲಿ ಹಿಡಿದೆ. ಅಷ್ಟೇ ತರಾತುರಿಯಲ್ಲಿ ಅದನ್ನು ತುದಿಬೆರಳಲ್ಲಿ ಹಿಡಿದು ಆದಷ್ಟೂ ದೂರ – ನೆಲಕ್ಕೆ ಬೀಳದಂತೆ, ಕಾಫಿಗೆ ಸಿಗದಂತೆ, ಎತ್ತರದ ಪೊದೆಯ ಮೇಲೆ ಬಿಸಾಕಿದೆ.

ತೀರಾ ಹಿಂದುಳಿದಿರುವ, ಹೆಬ್ಬೆಟ್ಟಿನವರೇ ಹೆಚ್ಚಾಗಿರುವ ನಮ್ಮ ಹಳ್ಳಿಯ ಯಾವುದೋ ಕನ್ಯಾಮಣಿ ಬಳಸಿ ಬಿಸಾಕಿದ ಸ್ಯಾನಿಟರಿ ನ್ಯಾಪ್ಕಿನ್ ಅದಾಗಿತ್ತು.

ಈ ಘಟನೆಯಿಂದಾಗಿ ಆಧುನಿಕತೆಯ ಗಾಳಿ ನಮ್ಮ ಮನೆಗೂ ಬೀಸಿದೆ. ಕಾಫಿಯ ಕೊರಳಿಗೆ ಸರಪಳಿ ಬಂದಿದೆ. ಆಲನಹಳ್ಳಿಯನ್ನೂ ಮೀರಿಸಿದ, ಆಧುನಿಕ, ನವ್ಯೋತ್ತರ ಕವಿಗಳ ಕವನಕ್ಕಾಗಿ ನನ್ನ ಹುಡುಕಾಟ ನಡೆದಿದೆ.

✵

---

**ಅವಳಂದಿದ್ದು**

ನಮ್ಮೆಜಮಾನರು ಅರ್ಜೆಂಟು ಅಂದ್ರು ಅವರಿಗೆರಡು ತಟ್ಟಿ ಕಳಿಸಿದೆ. ಮಕ್ಕಳಿಗೆ ಸ್ಕೂಲಿಗೆ ಹೊತ್ತಾಗುತ್ತೆ ಅಂದ್ರು ಅವರಿಗೂ ತಟ್ಟಿ ಕಳಿಸಿದೆ. ಹೇಗೂ ನಾನೂ ತಟ್ಕೊಬೇಕು ನಿಮಗೂ ಒಂದೆರಡು ತಟ್ತೀನಿ ಬನ್ನಿ

ರಾಗಿರೊಟ್ಟೀನ

# ಬ್ರಾಮ್ರಿ ಬಾಳೆ ಸಾಬರ ಕೋಳಿ

**- ಗುರು**

**ಕಾ**ರ್ಖಾನೆಯಲ್ಲಿನ ನನ್ನ ಅನುಭವದಲ್ಲಿ ನನ್ನ ಸಂಪರ್ಕಕ್ಕೆ ಬಂದ ಹಲವಾರು ಸಾವಿರ ಜನರು ನನ್ನ ಮೇಲೆ ನೇರವಾಗಿ ಪ್ರಭಾವ ಬೀರಿದವರು ಇದ್ದಾರೆ, ಅಪರೋಕ್ಷವಾಗಿ ಪ್ರಭಾವ ಬೀರಿದವರು ಇನ್ನೂ  ಹೆಚ್ಚಾಗಿ ಇದ್ದಾರೆ. ಕೆಲವರ ಪ್ರಭಾವ ಎಷ್ಟಿತ್ತು ಅಂದರೆ ಸುಮಾರು ಕಾಲ- ಮೂವತ್ತು ವರ್ಷಗಳ ನಂತರವೂ ನನ್ನ ಮನಸ್ಸಿನಿಂದ ಅವರು ದೂರ ಸರಿದೇ ಇಲ್ಲ! ಸರಿ ರಾತ್ರಿಯಲ್ಲಿಯೂ ಅವರು ಮನಸ್ಸಿನ ಮುಂದೆ ಬಂದು ಕಾಣಿಸಿಕೊಳ್ಳುತ್ತಾರೆ. ಅಂತಹವರ ಕೆಲವು ನೆನಪು ಈಗ ನಿಮ್ಮೊಂದಿಗೆ....

ಅವರ ಹೆಸರು ವೆಂಕಟರಾಮು ಅಂತ. ನನ್ನ ಅವರ ಪರಿಚಯ ಮೊದಲು ಆಗಿದ್ದು ಕಾರ್ಖಾನೆಯಲ್ಲಿಯೇ. ಆಗ ಅವರಿಗೆ ಮೂವತ್ತೈದು ಇರಬಹುದು, ನನಗೆ ಇಪ್ಪತ್ತು. ಅವರದ್ದು  ನಡು ಎತ್ತರದ ಕೊಂಚ ಸ್ಥೂಲ ಎನ್ನಬಹುದಾದ ಶರೀರ. ದಪ್ಪಕ್ಕಿರುವವರ ಮುಖದಲ್ಲಿ ಎದ್ದು ತೋರುವ ಒಂದು ರೀತಿಯ ಹಸನ್ಮುಖತೆ (ದಪ್ಪಕ್ಕಿರುವವರು ಯಾವಾಗಲೂ ನಗುವ ಹಾಗೆಯೇ ಕಾಣಿಸುತ್ತಾರಂತೆ ಮತ್ತು ಅವರು ಅಳುವಾಗಲೂ ಅವರ ಮುಖ ನಸುನಗೆ ಬೀರುತ್ತದಂತೆ- ಇದನ್ನು ನನ್ನನ್ನು ನೋಡಿ ಸುಮಾರು ಜನ ಹೇಳಿರುವ ಮಾತು, ನಿಜವಿದ್ದರೂ ಇರಬಹುದು !), ಸಂತೃಪ್ತ ಭಾವ ಮತ್ತು ಪೆದ್ದುಕಳೆ ಎಲ್ಲವೂ ಈಕ್ವಲಿ ಡಿಸ್ಟ್ರಿಬ್ಯೂಟೆಡ್ ಫಿಫ್ಟಿ-ಫಿಫ್ಟಿ (ಇದೂ ಸಹ ನನ್ನ ಹಾಗೆಯೇ).

ಈತ ಕಾರ್ಖಾನೆಗೆ ಸೇರಿದಾಗ ಆಪರೇಟರುಗಳು ಕೆಲಸ ಮಾಡಬೇಕಾದರೆ ತೊಡಲು ಒಂದು ರೀತಿಯ ಓವರ್ ಕೋಟನ್ನ ನೀಡುತ್ತಿದ್ದರು. ಫ್ಯಾಕ್ಟರಿಯವರು ಮಾತ್ರಾ ಬಳಸುವ ವಿಶಿಷ್ಟವಾದ ನೀಲಿ ಬಣ್ಣದ ಮಧ್ಯದಲ್ಲಿ ಹಾರು ಹೊಡೆದಿರುವ ಮಂಡಿಯವರೆಗೆ ಬರುವ ಕೋಟು ಅದು. ಒಟ್ಟಾರೆ ಎಂಟು ಜೇಬು ಮತ್ತು ಸಕಲವನ್ನೂ ಅದರಲ್ಲಿ ಇರಿಸಿಕೊಳ್ಳಬಹುದಾದ ಸವಲತ್ತು ಆ ಕೋಟಿಗಿತ್ತು. ಆ ಕೋಟನ್ನು ಯಾವ ಆಪರೇಟರೂ ತೊಡುತ್ತಿರಲಿಲ್ಲವಾದ್ದರಿಂದ ಯಾರೂ ತೊಡುವುದಿಲ್ಲ ಅದಕ್ಕೇಕೆ ಹಣ ಸುರಿಯಬೇಕು ಎಂದು ಆಡಳಿತ ವರ್ಗ ಆಸ್ಟಿಯರಿಟಿ ಮೆಷರಿನ ಪ್ರಕಾರ ಅದರ ಸರಬರಾಜನ್ನ ಕೆಲವು ವರ್ಷ ಕೋಟು ನೀಡಿದ ನಂತರ ನಿಲ್ಲಿಸಿತ್ತು. ಕೈ ತುಂಬಾ ಸಂಬಳ ಪಡೆಯುವ ಕಾರ್ಮಿಕರು ಟೆರೀನು, ಟೆರಿಲೀನು ಷರಟು-ಪ್ಯಾಂಟು ಧರಿಸಿ ಕಾರ್ಖಾನೆಗೆ ಬರುತ್ತಿದ್ದರು, ಅದನ್ನು ಧರಿಸಿಯೇ ಮೆಷೀನುಗಳ ಮೇಲೆ ಕೆಲಸ ನಿರ್ವಹಿಸುತ್ತಿದ್ದರು. ಬಟ್ಟೆ ಕೊಳೆಯಾಯಿತು ಎಂದು ಆಗಾಗ ಮೇಲಿನವರ ಮೇಲೆ ಹರಿಹಾಯುತ್ತಿದುದೂ ಉಂಟು. ಆದರೆ ವೆಂಕಟರಾಮು ಮಾತ್ರಾ ತುಂಬಾ ಜೋಪಾನದಿಂದ ಈ ನೀಲಿ ಕೋಟು ಕಾಪಾಡಿಕೊಂಡು ಬಂದಿದ್ದರು. ಇದನ್ನು ಕೊಟ್ಟಿರೋದು ಯಾಕೆ? ತುರುಬು ಇರಬೇಕಾದರೆ ಹೂವು ಮುಡೀದೆಲೆ ಯಾವಾಗಲೋ

ಮುಡಿಯಲು ಆಗುತ್ಯೇ ? ಎನ್ನುವುದು ಅವರ ಲಾಜಿಕ್ಕು. ಸರ್ವೀಸು ಮುಗಿದ ನಂತರವೂ ಈತ ಈ ನೀಲಿ ಕೋಟು ಬಿಡುವುದಿಲ್ಲ ಎಂದು ಆಗಾಗ್ಗ ಈತನ ಗೆಳೆಯರು ಈತನನ್ನು ಛೇಡಿಸುತ್ತಿದ್ದರು. ಪ್ರೊ. ಪ್ರಭುಶಂಕರರ ''ಜನಮನ''ದಲ್ಲಿ ಪ್ರಾಚ್ಯಶಾಸ್ತ್ರದ ಪರಿಣತ ಶ್ರೀ ವೆಂಕಟಸುಬ್ಬರಾಯರನ್ನು ಪರಿಚಯಿಸುತ್ತಾ ಅವರ ಖಾಕಿ ಕಲರಿನ ಜುಬ್ಬಾ ಬಗ್ಗೆ ಬರೆಯುತ್ತಾರೆ. ಜುಬ್ಬಾ ಶ್ರೀ ವೆಂಕಟಸುಬ್ಬರಾಯರ ಅವಿಭಾಜ್ಯ ಅಂಗವಾಗಿತ್ತಂತೆ ! ಮೈಸೂರು ವಿಶ್ವವಿದ್ಯಾಲಯದ ಜಾನಪದ ವಿಭಾಗಕ್ಕೆ ಬರೆದರೆ ಅವರು ಬಂದು ಖಾಕಿ ಜುಬ್ಬಾವನ್ನು ತಮ್ಮ ಸಂಗ್ರಹಾಲಯಕ್ಕೆ ತೆಗೆದುಕೊಳ್ಳುತ್ತಿದ್ದರು ಎಂದು. ಅದೇ ರೀತಿ ಮೈಸೂರು ವಿಶ್ವವಿದ್ಯಾಲಯದ ಜಾನಪದ ವಿಭಾಗಕ್ಕೆ ಬರೆದು ಈ ಕೋಟು ವಶಪಡಿಸಿಕೊಳ್ಳಿ ಎಂದು ಕೋರಬೇಕು ಅಂತ ನಮ್ಮ ಕಾರ್ಮಿಕ ಮಿತ್ರ ಸುಂದರ ಉಳ್ಳಾಲ ಆಗಾಗ ತಮಾಷೆ ಮಾಡುತ್ತಿದ್ದ. ಈ ನೀಲಿ ಕೋಟು ವೆಂಕಟರಾಮುವಿನ ಅವಿಭಾಜ್ಯ ಅಂಗವಾಗಿತ್ತು. ಅದನ್ನು ಹೊರತು ಪಡಿಸಿ ಈತನನ್ನು ಬೇರೆ ಮಾಡಿ ಕಲ್ಪಿಸಿಕೊಳ್ಳುವುದೂ ಅಸಾಧ್ಯವಾಗಿತ್ತು. ವೆಂಕಟರಾಮುವನ್ನು ಹುಡುಕಬೇಕು ಎಂದರೆ ಯಾರೂ ಆತನ ಮುಖ ಹುಡುಕದೇ ಈ ನೀಲಿ ಕೋಟನ್ನು ಸರ್ಚ್ ಮಾಡುತ್ತಿದ್ದರು ! ಸಾಮಾನ್ಯವಾಗಿ ಕಾರ್ಖಾನೆಗಳು ದಿನದ ಇಪ್ಪತ್ತು ನಾಲ್ಕು ಘಂಟೆಗಳೂ ಕಾರ್ಯ ನಿರ್ವಹಿಸುತ್ತವೆ ಮತ್ತು ಕೆಲಸಗಾರರು ಮೂರೂ ಷಿಫ್ಟುಗಳಲ್ಲಿ ಕೆಲಸ ಮಾಡುತ್ತಾರೆ. ಅವರಿಗೆ ಸಮಯಕ್ಕೆ ಸರಿಯಾಗಿ ಅವರಿರುವ ಕಡೆಯೇ ರಿಫ್ರೆಷ್ ಮೆಂಟುಗಳ ವ್ಯವಸ್ಥೆ ಇರುತ್ತದೆ. ರಿಫ್ರೆಷ್ ಮೆಂಟುಗಳು ಅಂದರೆ ಬೇಕರಿ ಖಾದ್ಯಗಳು, ಊಟಕ್ಕೆ ದೊಡ್ಡದಾದ ಕ್ಯಾಂಟೀನು ಇರುತ್ತೆ. ಇದು ಎಲ್ಲಾ ಕಾರ್ಖಾನೆಗಳಲ್ಲೂ ಲಾಗಾಯ್ತಿನಿಂದಲೂ ನಡೆದುಬಂದಿರುವ ಸಿಸ್ಟಮ್ಮು. ಮೊದಲನೇ ದಿವಸ ವೆಂಕಟರಾಮು ಕಾಫಿ ತೆಗೆದುಕೊಂಡು ನನ್ನೆದುರೇ ನಡೆದರು. ಆರೆಂಟು ಬನ್ನುಗಳನ್ನು ಒಂದರಮೇಲೆ ಒಂದರ ಹಾಗೆ ಪಿರಮಿಡ್ಡಿನ ರೀತಿಯಲ್ಲೋ ಅಥವಾ ಹಾಸಿಗೆ ಜೋಡಿಸಿದಹಾಗೋ ಅಥವಾ ಮಕ್ಕಳು ಲಗೋರಿ ಆಡುವಾಗ ಬಚ್ಚಗಳ ಮೇಲೆ ಬಚ್ಚ (ಚಪ್ಪಡಿಕಲ್ಲು) ಜೋಡಿಸುತ್ತಾರಲ್ಲಾ ಹಾಗೆ ಪೇರಿಸಿಕೊಂಡು ತನ್ನ ಟೇಬಲ್ಲಿನ ಬಳಿಗೆ ಒಯ್ದು ಅದನ್ನು ಅಲ್ಲಿರಿಸಿ ನಂತರ ಮತ್ತೆ ಬಂದರು. ಲೀಟರ್ ಹಿಡಿಯಬಹುದಾದ ಲೋಟ ತೆಗೆದುಕೊಂಡು ಅದರಲ್ಲಿ ಕಾಫಿ ಹಿಡಿದುಕೊಂಡು ಟೇಬಲ್ಲಿನ ಬಳಿ ಹೋಗಿ ಅದರ ಮುಂದೆ ಕೂತರು. ನಿಧಾನಕ್ಕೆ ಬನ್ನು ಮುರಿದು ಕಾಫಿಯಲ್ಲಿ ಅದ್ದಿ ಅದ್ದಿ ಸೇವಿಸಿದರು. ಇವರ ಈ ಬನ್ ಪ್ರೇಮ ನೋಡುವ ಮೊದಲು ಅವರನ್ನು ಅವರ ಸಹೋದ್ಯೋಗಿಗಳು ಬನ್ ವೆಂಕಟರಾಮು ಎಂದು ಕರೆಯುವುದು ಕೇಳಿದ್ದೆ. ಆಸಾಮಿ ಗುಂಡಗುಂಡಗೆ ಇದ್ದಾರೆ, ದಪ್ಪಕ್ಕೆ ಇರುವುದರಿಂದ ಅವರನ್ನು ರೇಗಿಸಲು ಈ ಹೆಸರು ಎಂದು ಊಹಿಸಿಕೊಂಡಿದ್ದೆ. ನನ್ನ ಹಿಂದೆಯೂ ನನಗೆ ಬನ್ ಗೋಪಿ ಎಂದು ಕೂಗುತ್ತಿದ್ದರೋ ತಿಳಿಯದು. ಈಗ ಅನ್ವರ್ಥದ ಅರ್ಥವಾಯಿತು. ನಾಯಿಗಳೂ ತಿನ್ನುವುದಕ್ಕೆ ಲಾಯಕ್ಕಿಲ್ಲ ಎಂದು ಸಹಕಾರ್ಮಿಕರು ಗೊಣಗುತ್ತಿದ್ದರೆ ಇವರು ಮಾತ್ರಾ ನಿರ್ಲಿಪ್ತರಾಗಿ ಸಮಯಕ್ಕೆ ಸಿಕ್ಕಿದ್ದು ಪಂಚಾಮೃತ ಎನ್ನುತ್ತಿದ್ದರು.

ಕಾರ್ಖಾನೆಗಳಲ್ಲಿ ಕೆಲಸ ಮಾಡುವವರ ಸಂಗತಿ ಹೇಗೆಂದರೆ ಮೊದಲ ವರ್ಷ ನೀವು ಯಾವ ಕೆಲಸ ಮಾಡುತ್ತೀರೋ ರಿಟೈರು ಆಗುವವರೆಗೂ ಅದೇ ಕೆಲಸ ಮಾಡುತ್ತಲೇ ಇರುತ್ತೀರಿ– ಏನೂ ಬದಲಾವಣೆಗಳೇ ಇಲ್ಲದೇ ! ನನಗೆ ಗೊತ್ತಿರುವ ಒಬ್ಬರು ಹಿರಿಯರು

ಹೆಲ್ಪರ್ ಆಗಿ ಸೇರಿದ್ದರು, ಆಗ ಅವರಿಗೆ ಸಣ್ಣ ಉಪಾಂಗಗಳನ್ನು ಎಣಿಸುವ ಕೆಲಸ ನಿಗದಿ ಪಡಿಸಿದ್ದರಂತೆ. ಅವರು ಆಫೀಸರು ಆಗಿ ರಿಟೈರು ಆಗುವ ಸಮಯದಲ್ಲಿಯೂ ಎಣಿಕೆ ಕೆಲಸವನ್ನೇ ಮಾಡುತ್ತಿದ್ದರು ! ವೆಂಕಟರಾಮು ಕೆಲಸಕ್ಕೆ ಸೇರಿದಾಗ ಅವರಿಗೆ ರಬ್ಬರಿನ ಟ್ಯೂಬುಗಳನ್ನು ಕತ್ತರಿಸುವ ಕೆಲಸ ಅಂಟಿಸಿದ್ದರು. ಇಪ್ಪತೆಂಟು ವರ್ಷ ಸರ್ವಿಸಿನ ನಂತರವೂ ಇವರು ರಬ್ಬರು ಟ್ಯೂಬುಗಳನ್ನು ಯಾವುದೇ ಸ್ಕೇಲಿನ ನೆರವೂ ಇಲ್ಲದೇ ಅಳತೆಗೆ ಸರಿಯಾಗಿ ಕತ್ತರಿಸುವುದರಲ್ಲಿ ಸ್ಕಿಲ್ ಅಥವಾ ಕೌಶಲ್ಯ ಸಂಪಾದನೆ ಮಾಡಿದ್ದರು. ಟ್ಯೂಬನ್ನು ನೋಡಿಯೇ ಅದರ ಉದ್ದ ಎಷ್ಟು ಮಿಲಿಮೀಟರು, ದಪ್ಪ ಎಷ್ಟಿದೆ ಮುಂತಾದ ವಿವರಗಳನ್ನು ನೀಡುವಷ್ಟು ಕೌಶಲ್ಯ ಇವರಿಗಿತ್ತು. ಬೇರೆ ಯಾವ ಕೆಲಸವೂ ಬರೋಲ್ಲ ಎಂದು ಸಹೋದ್ಯೋಗಿಗಳು ಕುಚೇಷ್ಟೆ ಮಾಡುತ್ತಿದ್ದರು ! ಸುಮಾರು ವರ್ಷ ಸರ್ವೀಸಿನ ನಂತರ ಇವರು ಸೂಪರ್ ವೈಸರ್ ಅಂತ ಆದಾಗ ಇವರ ಪಾಡು ಕಂಡು ಅಯ್ಯೋ ಅನಿಸಿತ್ತು. ಸಿಕ್ಸ್ ಎಂಎಂ ಟ್ಯಾಪು ಮಾಡಬೇಕು, ಡ್ರಿಲ್ ಎಷ್ಟು ಸಾರ್ ಹಾಕಬೇಕು ? ತ್ರೀ ಎಂಎಂ ಸ್ಕ್ರೂಗೆ ಕೌಂಟರ್ ಸಿಂಕ್ ಮಾಡಬೇಕು ಅಂದರೆ ಹೇಗೆ ಸಾರ್? ಫೋರ್ ಎಂಎಂ ಹೆಲಿಕಾಯಲ್ ಟ್ಯಾಪಿಗೆ ತ್ರೀ ಎಂಎಂ ಡ್ರಿಲ್ ಹಾಕಿದೆ ಸಾರ್ ಯಾಕೋ ಟ್ಯಾಪೇ ಆಗ್ತಿಲ್ಲ.. ಮೊದಲಾದ ಪ್ರಾಬ್ಲಮ್ಮುಗಳು ಇವರದ್ದು!

ಕಾರ್ಮಿಕರಿಗೆ ಬೇಕಾದ ಸಲಕರಣೆಗಳನ್ನು ಒದಗಿಸಲು ಕಾರ್ಖಾನೆಯ ಪ್ರತಿ ಫ್ಲೋರಿನಲ್ಲಿಯೂ ಟೂಲ್ ಕ್ರಿಬ್ ಎಂಬ ಸಲಕರಣಾ ಮಳಿಗೆ ಇರುತ್ತದೆ. ಇಲ್ಲಿ ಟೋಕನ್ ನೀಡಿ ಸಲಕರಣೆಗಳನ್ನು ಪಡೆಯಬೇಕು. ಇದೇ ಕಾರಣಕ್ಕಾಗಿ ಪ್ರತಿಯೊಬ್ಬರಿಗೂ ಹತ್ತು ಟೋಕನ್ ನೀಡಿರುತ್ತಾರೆ. ಸುಮಾರು ಕಾರ್ಮಿಕರಿಗೆ ಈ ಟೋಕನ್‌ಗಳ ಬಗ್ಗೆ ಅಂತಹ ಚಿಂತೆ ಇರುವುದಿಲ್ಲ- ಬೇಕಾಬಿಟ್ಟಿಯಾಗಿ ಎಲ್ಲೆಂದರಲ್ಲಿ ಬಿಸಾಕಿರುತ್ತಾರೆ. ಆದರೆ ವೆಂಕಟರಾಮು ಇದಕ್ಕೆ ಒಂದು ಅಪವಾದ. ಒಂದು ಪ್ಲಾಸ್ಟಿಕ್ ಚೀಲದಲ್ಲಿ ಇದನ್ನು ಹಾಕಿ ಅದನ್ನು ಮತ್ತೊಂದು ಚೀಲದಲ್ಲಿ ಇರಿಸಿ ಅದನ್ನು ತಮ್ಮ ನೀಲಿ ಕೋಟಿನ ಜೇಬಿನಲ್ಲಿ ಭದ್ರವಾಗಿ ಇರಿಸಿರುತ್ತಿದ್ದರು. ಪ್ರತಿದಿವಸ ಹತ್ತು ಟೋಕನ್ ಇದೆಯೇ ಎಂದು ಪರೀಕ್ಷಿಸಿ ತನಗೆ ಬೇಕಾದ ಸಲಕರಣೆ ತೆಗೆದುಕೊಂಡು ಮತ್ತೆ ಪರೀಕ್ಷಿಸಿ ಕವರಿನಲ್ಲಿ ಹಾಕಿ ಜೋಪಾನ ಮಾಡುತ್ತಿದ್ದರು. ಪ್ರತಿಬಾರಿ ಸಲಕರಣೆಗೆ ಬಂದಾಗಲೂ ಇದು ಪುನರಾವರ್ತನೆಯಾಗುತ್ತಿತ್ತು. ಹಾಗೆ ನೋಡಿದರೆ ಅವರು ಅವರ ಬಹುಪಾಲು ಸರ್ವೀಸಿನಲ್ಲಿ ತೆಗೆದುಕೊಂಡ ಸಲಕರಣೆ ಎಂದರೆ ಒಂದು ಕತ್ರಿ ಮತ್ತು ಅಪರೂಪಕ್ಕೆ ಒಂದು ಸ್ಕೇಲು ! ಲೆಕ್ಕ ಸರಿ ಇದ್ದರೆ ಎಲ್ಲವೂ ಸರಿ ಎಂಬ ಗಾದೆ ಬೇರೆ. ಇದು ಅವರ ಜೀವನದ ಧ್ಯೇಯವೂ. ಒಂದುಸಲ ಇವರಿಗೆ ಕೀಟಲೆ ಮಾಡಲು ಯಾರೋ ಇವರ ಟೋಕನ್ನು ಎತ್ತಿಟ್ಟು ಬಿಟ್ಟರು. ಹೋದರೆ ಹೋಗಲಿ ಎಂದು ಆರಾಮವಾಗಿರುವ ಆಸಾಮಿಯಲ್ಲ ಇದು. ಇಡೀ ಕಾರ್ಖಾನೆಯ ಎಲ್ಲರನ್ನೂ ಟೋಕನ್ನು ಕಂಡಿರಾ ಟೋಕನ್ನು ಕಂಡಿರಾ ಎಂದು ರಾಮ ಸೀತೆಯನ್ನು ಕಂಡಿರಾ ಸೀತೆಯನ್ನು ಕಂಡಿರಾ ಎಂಬುವ ಹಾಗೆ ವಿಚಾರಿಸಿಯಾಯಿತು. ಕದ್ದವರು ಸುಲಭವಾಗಿ ಒಪ್ಪುತ್ತಾರೆಯೇ? ಯಾರೂ ಇಲ್ಲ ಎಂದು ತಲೆಯಾಡಿಸಿದರು. ನೋಟೀಸು ಬೋರ್ಡಿಗೆ ಚೀಟಿ ಅಂಟಿಸಿಯಾಯಿತು. ಆದರೂ ಟೋಕನ್ನು ವಾಪಸ್ಸು ಬರಲಿಲ್ಲ. ಕೊನೆಗೆ ಗಾಂದಿ ಮಾರ್ಗ ಹಿಡಿದದ್ದೂ ಆಯಿತು. ಟೋಕನ್ನು

ವಾಪಸ್ಸು ಬರುವವರೆಗೆ ಕಾರ್ಖಾನೆಯಲ್ಲಿ ಅನ್ನ ನೀರು ಮುಟ್ಟುವುದಿಲ್ಲ ಎಂಬ ಪ್ರತಿಜ್ಞೆ ಜಾರಿಯಾಯಿತು. ನಾಲ್ಕನೇದಿವಸ ಟೋಕನ್ನು ಇವರ ಟೇಬಲ್ಲಿನ ಡ್ರಾಯರಿನಲ್ಲಿ ಪ್ರತ್ಯಕ್ಷವಾಯಿತು. ನೀನೇ ಮರೆತು ಅಲ್ಲಿ ಹಾಕಿದ್ದೆ ಎಂದು ಇವರ ಸಹೋದ್ಯೋಗಿಗಳ ವಾದ. ಮೂಗಿನ ಮೇಲೆ ಕನ್ನಡಕ ಇಟ್ಕೊಂಡು ಮಲಬಾರು ಹುಡುಕೋದಿಕ್ಕೆ ನಾನೇನು ಬ್ಯಾರೀನೇ, ಪಾಪಪ್ರಜ್ಞೆ ಕಾಡಿ ಕದ್ದವರು ತಂದುಹಾಕಿದ್ದಾರೆ ಎಂದು ಇವರ ವಾದ. ಅಜ್ಜಿ ಲಂಗ ಮೊಮ್ಮಗಳು ತೊಡಲು ಆಗುತ್ತೇನು ಎಂದು ಅದಕ್ಕೊಂದು ಗಾದೆ. ಹರ್ಷದಿಂದ ಡ್ಯಾನ್ಸ್ ಮಾಡಿದ ಸಾರ್ ಟೋಕನ್ನು ಸಿಕ್ಕಿದ ಮೇಲೆ ಅಂತ ಸಹೋದ್ಯೋಗಿಗಳು ಆಗಲೂ ಕುಚೇಷ್ಟೆ ಮಾಡಿದರು ! ಆಗ ಕಾರ್ಖಾನೆಯಲ್ಲಿ ಸಂಬಳ ವಿತರಿಸಲು ಒಂದು ರೀತಿಯ ಕಾಕಿ ಕವರುಗಳು ಇದ್ದವು. ಅದರಲ್ಲಿ ಸಂಬಳದ ಹಣ ತುಂಬಿ ಅದರ ಮೇಲೆ ಸಂಬಳದ ವಿವರದ ಚೀಟಿ-ಪೇ ಸ್ಲಿಪ್ ಸೇರಿಸಿ ಪಿನ್ ಮಾಡಿ ಅದನ್ನು ನಮಗೆ ರವಾನಿಸುವ ವ್ಯವಸ್ಥೆ ಇತ್ತು. ನಾವೆಲ್ಲರೂ ಸಂಬಳ ಪಡೆದ ನಂತರ ಆ ಕವರನ್ನು ಮತ್ತು ಪೇ ಸ್ಲಿಪ್ ಅನ್ನು ಅಲ್ಲೇ ಹರಿದು ಬಿಸಾಕಿ ಖುಷಿ ಪಡುತ್ತಿದ್ದೆವು. ಪೇ ಸ್ಲಿಪ್ ಅಂತೂ ಯಾರೂ ಇಟ್ಟುಕೊಳ್ಳುತ್ತಿರಲಿಲ್ಲ. ಮದುವೆಯಾದವರಿಗೆ ಮನೇಲಿ ಹೆಂಡತೀಗೆ ಲೆಕ್ಕ ತಿಳಿಯಬಾರದು ಎನ್ನುವ ಹುಷಾರು ಇದ್ದರೆ ಪಡ್ಡೆಗಳಿಗೆ ನನಗೆ ಯಾಕೆ ಬೇಕು ಲೆಕ್ಕ ಎನ್ನುವ ಥಿಂಕಿಂಗು. ವೆಂಕಟರಾಮು ತನ್ನ ಮೊದಲ ಸಂಬಳದಿಂದ ಇಂತಹ ಪೇ ಸ್ಲಿಪ್ಪುಗಳು ಹಾಗೂ ಕವರನ್ನು ಜೋಪಾನವಾಗಿರಿಸಿದ್ದರು ಎಂದು ಗೆಳೆಯರು ಹೇಳುತ್ತಿದ್ದರು.

ಅವರ ಬಳಿ ಇದ್ದ ಗಾದೆ ಸರಕು ಯಾರಿಗೇ ಆಗಲಿ ಆಶ್ಚರ್ಯ ಹುಟ್ಟಿಸುವ ಹಾಗಿತ್ತು. ದಿವಸಕ್ಕೆ ಸರಾಸರಿ ನೂರು ಗಾದೆ ಇವರ ಬಾಯಿನಿಂದ ಹೊರಗೆ ಬರುತ್ತಿತ್ತು. ಅದನ್ನ ಯಾರಾದರೂ ಜತನವಾಗಿ ಬರೆದು ಇರಿಸಿದ್ದರೆ ಸುಲಭವಾಗಿ ಒಂದು ಪ್ರೌಢ ವ್ಯಾಸಂಗ ಮಾಡಬಹುದಿತ್ತು ಅಂತ ನನಗೆ ಈಗ ಅನಿಸುತ್ತಿದೆ. ಅಜ್ಜಿಗೆ ಅರಿವೆ ಚಿಂತೆಯಾದರೆ ಮೊಮ್ಮಗಳಿಗೆ ಮಿಂಡನ ಚಿಂತೆ, ಸೊಸೆ ಒಡೆದ ಗಡಿಗೆಗೆ ಸಾವಿರ ರೂಪಾಯಿ, ಅಜ್ಜಿಗೆ ಡಾಬಾದರೆ ಮೊಮ್ಮಗಳಿಗೆ ಖಬಾಬು, ಪೂಜಾರಿ ಶಾವಿಗೆ ತಿಂದರೆ ದೇವರು ಹಗ್ಗ ಬೇಡಿದ, ಬ್ರಾಮ್ರ ಮನೇಲಿ ಬಾಳೆಗೆ ಸಾಬರ ಮನೇಲಿ ಕೋಳೀಗೆ ಉಳಿಗಾಲವಿಲ್ಲ, ಗೇಣುದ್ದದವನಿಗೆ ಮಾರುದ್ದ ಬಾಲ, ಪುಸ್ತಕ ಓದೋನಿಗೆ ಮಸ್ತಕ ತಿಕ್ಕೋನು ಬೇಕೇ, ಅಜ್ಜಿ ನೂತದ್ದು ಮೊಮ್ಮಗಳ ರಿಬ್ಬನ್ನಿಗೇ ಸಾಲದು, ಮುದ್ದೆ ತಿನ್ನೋ ಬಸವ ಅಂದರೆ ರಾಗಿ ಪಲ್ಲ ಹೇಗೆ ಅಂದ, ಮುಸುರೆ ತಿಕ್ಕೋಳ ಮೂತಿಗೆ ಫೇಸ್ ಕ್ರೀಂ ಬೇರೆ ಕೇಡು, ಲೋಟ ತೊಳೆಯೋನಿಗೆ ಲೋಕದ ಚಿಂತೆ ಯಾಕೆ, ಕರೆದು ಉಣ್ಣಕ್ಕೆ ಇಕ್ಕಿದರೆ ಉಪ್ಪು ಸಾಲದು ಅಂದ, ಯಾರು ಪ್ರಧಾನಿಯಾದರೇನು ಪುಕ್ಕ ಹರಿಯೋದು ತಪ್ಪುತ್ಯೆ, ಅಕ್ಕಿಮೇಲೆ ಆಸೆ ಅಟೆಂಡೆನ್ಸ್ ಬೋನಸ್ಸಿನ ಮೇಲೆ ಕಣ್ಣು, ತೊಡೆ ತಟ್ಟಿ ವಡೆ ತಿಂದಹಾಗೆ ..... ಹೀಗೆ ಸಂದರ್ಭಕ್ಕೆ ತಕ್ಕಹಾಗೆ ಅವರ ಅರಿವಿಲ್ಲದ ಹಾಗೆ ಗಾದೆಗಳ ಪ್ರವಾಹ ಅವರ ಮಾತಿನಲ್ಲಿ ಹರೀತಿತ್ತು.

ನನಗೆ ತುಂಬಾ ಮೆಚ್ಚುಗೆಯಾದ ಇವರ ಮತ್ತೊಂದು ಗುಣವೆಂದರೆ ಯಾರ ಹತ್ತಿರವೂ ಕೋಪ ಇಲ್ಲ, ಸಿಡುಕತನವಿಲ್ಲ ಮತ್ತು ಎಂದೂ ಸಮಾಜ, ಜಗತ್ತು, ಕಾರ್ಖಾನೆ, ಮೇಲಿನವರು ತನಗೆ ಮೋಸ ಮಾಡಿದರು ಎನ್ನುವ ನಮ್ಮೆಲ್ಲರಲ್ಲೂ ಸಹಜವಾಗಿದ್ದ ಭಾವನೆಯಿಂದ

ದೂರವಿದ್ದುದು. ಸುಮಾರು ಸಲ ಇವರಿಗೆ ಬರಬೇಕಾದ ಭಡ್ತಿ ಬರಲಿಲ್ಲ. ಈತ ಕೋಪ ಮಾಡಿಕೊಳ್ಳಲೇ ಇಲ್ಲ. ಕೊಡೋ ದೇವರು ಎಂದಿದ್ದರೂ ಕೊಡ್ತಾನೆ, ಪಾಲಿಗೆ ಬಂದದ್ದು ಪಂಚಾಮೃತ ಎಂದು ನಿರಾಳವಾಗಿದ್ದವರು ಇವರು. ಅದೇ ರೀತಿ ನನಗೆ ಅತಿ ಎನಿಸಿದ್ದು ಮತ್ತೊಂದು ಪ್ರಸಂಗ. ಇವರಿಗೆ ತುಂಬಾ ಹತ್ತಿರದವರು ಒಬ್ಬರು ತೀರಿಕೊಂಡ ಸುದ್ದಿ ಕಾರ್ಖಾನೆಗೆ ಇವರಿಗೆ ಫೋನಿನ ಮೂಲಕ ಬಂದಿತು. ಬಿಡಿ ಇವರೇ ರಜಾ ಹಾಕಿ ಹೋದರೆ ಸತ್ತವರು ಮತ್ತೆ ಬರ್ತಾರ್‍ಯೇ ಅವರ ಋಣತೀರಿತ್ತು ಇವತ್ತು ಅವರು ನಾಳೆ ನಾವು... ಅಂತ ಕೆಲಸ ಮುಗಿಸಿಯೇ ಇವರು ಹೋಗಿದ್ದು.

ಇವರ ನೆನಪು ಬಂದಕೂಡಲೇ ಮನಸ್ಸು ಪ್ರಫುಲ್ಲವಾಗುತ್ತಿತ್ತು, ಆರ್ದ್ರವಾಗುತ್ತಿತ್ತು. ಜೀವನದ ಬಗ್ಗೆ ಆಸಕ್ತಿಯನ್ನು ಹೆಚ್ಚಿಸುತ್ತಿತ್ತು. ಸಿಕ್ಕಿದ್ದಕ್ಕೆ ಸಂತೋಷಪಡುವ ಅವರ ಜಾಯಮಾನ ಎಲ್ಲರಲ್ಲೂ ಇದ್ದುಬಿಟ್ಟರೆ ಜಗತ್ತು ಸಂಪೂರ್ಣ ಸುಖವಾಗಿರುತ್ತೆ ಅಂತ ಅನಿಸುತ್ತಿತ್ತು. ವೆಂಕಟರಾಮು ಎಲ್ಲಿದ್ದಾರೆ ಅಂತ ಸುಮಾರು ವರ್ಷಗಳು ತಿಳಿದಿರಲಿಲ್ಲ. ಕಳೆದ ತಿಂಗಳು ಅವರ ಮನೆ ಎಲ್ಲಿದೆ ಅಂತ ತಿಳಿಯಿತು. ಬೆಂಗಳೂರಿನ ಮತ್ತೊಂದು ತುದಿಯಲ್ಲಿನ ಅವರ ಮನೇಗೆ ಹೋದೆ. ನಮಸ್ಕಾರ ಗುರುತಿದೆಯೇ? ಅಂದೆ.

ಅಯ್ಯೋ ನೆನಪಿಲ್ಲದೇ ಏನು? ಎಚ್.ಬಿ. ಸಮಾಜದಲ್ಲಿ ನಿಮ್ಮ ಮದುವೇಗೆ ಬಂದಿದ್ದೆನಲ್ಲಾ ? ಊರು ಹೋಗು ಅಂದರೆ ಕಾಡು ಬಾ ಅನ್ನುತ್ತೆ, ಅದಕ್ಕೇ ಕಾಡಿಗೆ ಕಟ್ಟೆ ಹಾಕಲು ಇಲ್ಲೇ ಬಂದಿದೀವಿ.... ಅಂದರು ! ಅದೇ ಹಸನ್ಮುಖ ಅದೇ ಸಂತೃಪ್ತ ಭಾವ.... ಅದೇ ಜೀವನೋತ್ಸಾಹ, ಅದೇ ಗಾದೆ.... ಆದರೆ ನೀಲಿ ಕೋಟು ಮಾತ್ರಾ ಇರಲಿಲ್ಲ !

ಜನರನ್ನು ಎಷ್ಟು ಬೇಗ ಮರೆಯುತ್ತೇವೆ ಎಂದು ನೆನಸಿಕೊಂಡಾಗ ಜನರ ನೆನಪಿನಲ್ಲಿ ಇರುವ ಹಾಗೆ ಯಾವುದಾದರೂ ಮಹತ್ಕಾರ್ಯ ಮಾಡಬೇಕಂತೆ- ಕೊಲೆ, ಸುಲಿಗೆ, ರಾಜಕಾರಣ, ಭ್ರಷ್ಟತೆ........ ಹೀಗೆ. ಇವು ಯಾವುದೂ ಇಲ್ಲವಾದಲ್ಲಿ ನಾವೆಲ್ಲರೂ ಹೇಳಹೆಸರಿಲ್ಲದವರಾಗಿ, ವೆಂಕಟರಾಮುಗಳಾಗಿಬಿಡುತ್ತೇವೆ.

✵

---

### ಮಧ್ಯರಾತ್ರಿಯಲ್ಲಿ ಭಾಷಣ

ಮಧ್ಯರಾತ್ರಿ. ಒಬ್ಬ ನಡೆದು ಹೊರಟಿದ್ದ. ಪೊಲೀಸರು ಅವನನ್ನು ತಡೆದು "ಎಲ್ಲಿಗೆ ಹೊರಟೆ?" ಎಂದು ವಿಚಾರಿಸಿದರು.

"ಕುಡಿತದ ದುಷ್ಪರಿಣಾಮಗಳ ಬಗ್ಗೆ ಭಾಷಣ ಕೇಳಲು ಹೊರಟಿದ್ದೇನೆ" ಎಂದ ಅವನು.

"ಹೌದೆ? ಯಾರು ಭಾಷಣ ಮಾಡಲಿದ್ದಾರೆ?" ಎಂದು ಪೊಲೀಸಿನವ ಕೇಳಿದ.

"ಇನ್ಯಾರು? ನನ್ನ ಹೆಂಡತಿ" ಎಂದ ಇವನು.

Mailing Date
5th of every month
Mailed at: MBC Bangalore GPO

CPMG/KA/BGW-544/2009-2011
**RNI-KAR-KAN / 2005 / 15457**